ಜನಶಕ್ತಿ


ಕನ್ನಡ ವಾರಪತ್ರಿಕೆ


Blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 20
ಮೆ 19, 2013 ಪುಟ 16 ರೂ. 10/-









ಕೋಮುವಾದಿಗಳಿಗೆ ತಿರಸ್ಕಾರ


ಪರ್ಯಾಯ ಕಾಣದೇ ಕಾಂಗ್ರೆಸ್‌ಗೆ ಅಧಿಕಾರ




Congress	JD(s)	BJP	KJP	BSR	Others
121	40	40	6	4	12



ಹೊಣಗೇಡಿ ಯುಪಿಎ ಸರ್ಕಾರ ಮತ್ತು ಪಾರ್ಲಿಮೆಂಟ್ ಸ್ಥಗಿತತೆ



ಶಾರದಾ'ಚೀಟ್' ಫಂಡ್ ಹಗರಣದಲ್ಲಿ ತೃಣಮೂಲ ಬೇರುಗಳು



ರೈಲ್ವೆ ಇಲಾಖೆಯಲ್ಲೊಂದು ಹಗರಣ: ಕಾಂಗ್ರೆಸ್ ಮಂತ್ರಿಯ ಮೇಲೆ ದಟ್ಟ ಅನುಮಾನ



ಮೇ ದಿನದ ಪ್ರಣಾಳಿಕೆ: ಶ್ರಮಿಕ ವರ್ಗದ ಐಕ್ಯತೆಯ ವಿಶ್ವಾಸ

ಸ್ಲಂ ನಿವಾಸಿಗಳಿಗೆ ಎಪಿಎಲ್ ಕಾರ್ಡ್ !!

ಸಿಐಟಿಯು, ಈ ಮೇದಿನ 2013ರಂದು ಕಾರ್ಮಿಕ ವರ್ಗದ ಐಕ್ಯ ಹೋರಾಟವನ್ನು ಇನ್ನಷ್ಟು ಎತ್ತರಿಸಲು ಮತ್ತು ಅದನ್ನು ಜನ-ವಿರೋಧಿ, ಸಾಮ್ರಾಜ್ಯಶಾಹಿ-ಪರ ಧೋರಣೆಯ ವ್ಯವಸ್ಥೆಯನ್ನು ಬದಲಿಸುವ ಹೋರಾಟದ ಮಟ್ಟಕ್ಕೇರಿಸಲು ಶ್ರಮಿಸುವುದಾಗಿ ಪಣ ತೊಡುತ್ತದೆ. ಅದು ಕಾರ್ಮಿಕರ ಐಕ್ಯತೆಯನ್ನು ಬುಡಮಟ್ಟದಲ್ಲಿ ವಿಸ್ತರಿಸುವ ಮತ್ತು ಕ್ರೋಡೀಕರಿಸುವ ಪ್ರತಿಜ್ಞೆ ಮಾಡುತ್ತದೆ, ಹಾಗೂ ಐಕ್ಯತೆಯ ಹರಹನ್ನು ಗ್ರಾಮಾಂತರದ ಜನತೆಯ ವರೆಗೆ ಒಯ್ದು ಅವರನ್ನೂ ಶೋಷಣಾತ್ಮಕ ಧೋರಣೆಗಳ ವಿರುದ್ಧ ಹೋರಾಟದಲ್ಲಿ ಅಣಿನೆರೆಸುವ ಪ್ರತಿಜ್ಞೆಯನ್ನೂ ಮಾಡುತ್ತದೆ.

ಮೇದಿನ ಪ್ರಣಾಳಿಕೆ-2013

ಶ್ರಮಿಕ ವರ್ಗದ ಐಕ್ಯತೆಯ ವಿಶ್ವಾಸ

ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯ ಸೌಹಾರ್ದ ಮತ್ತು ಐಕ್ಯತೆಯ ದಿನವಾದ ಮೇದಿನ-2013 ರಂದು, ಸಿಐಟಿಯು ದೇಶದ ಮತ್ತು ಜಗತ್ತಿನ ಸಮಸ್ತ ಕಾರ್ಮಿಕ ವರ್ಗದ ಬಂಧುಗಳಿಗೆ ಮತ್ತು ಶ್ರಮಿಕ ಜನತೆಗೆ ಅತ್ಯಂತ ಹಾರ್ದಿಕ ಕ್ರಾಂತಿಕಾರಿ ಶುಭಾಶಯಗಳನ್ನು ಕೋರುತ್ತದೆ. ಈ ಮಹಾನ್ ಸಂದರ್ಭದಲ್ಲಿ, ಸಿಐಟಿಯು ವೈಜ್ಞಾನಿಕ ಸಮಾಜವಾದಕ್ಕೆ ಮತ್ತು ಮಾನವನಿಂದ ಮಾನವನ ಶೋಷಣೆಯ ವ್ಯವಸ್ಥೆಯನ್ನು ಕೊನೆಗಾಣಿಸಲು ಹೋರಾಡುವ ತನ್ನ ನಿರ್ಧಾರಕ್ಕೆ ಬದ್ಧತೆಯನ್ನು ಪುನರುಚ್ಚರಿಸುತ್ತದೆ.

ಸೋದರ ಶುಭಾಶಯಗಳು

ಸಿಐಟಿಯು, ಕೃಷಿ ಕಾರ್ಮಿಕರು, ಬಡ ಮತ್ತು ಮಧ್ಯಮ ರೈತಾಪಿ ಜನಗಳಿಗೆ ಹಾರ್ದಿಕ ಸೋದರ ಶುಭಾಶಯಗಳನ್ನು ಕೋರುತ್ತದೆ ಮತ್ತು ಉತ್ತಮ ಕೂಲಿ ಪಡೆಯುವ ಹಕ್ಕು, ಉದ್ಯೋಗ, ಸಾಮಾಜಿಕ ಭದ್ರತೆಯ ಹಕ್ಕು, ಭೂಮಿಯ ಹಕ್ಕು, ಫಲದಾಯಕ ಬೆಲೆಗಳು, ಸಾರ್ವಜನಿಕ ಖರೀದಿ ಮತ್ತು ಮಾರುಕಟ್ಟೆ ಸೌಲಭ್ಯಗಳು, ಸಾಂಸ್ಥಿಕ ಸಾಲಗಳು ಇತ್ಯಾದಿಗಳಿಗಾಗಿ ಮತ್ತು ನವ-ಉದಾರವಾದಿ ಆರ್ಥಿಕ ಧೋರಣೆಗಳ ಆಳ್ವಿಕೆಯ ಪರಿಣಾಮವಾಗಿ ದೇಶದಲ್ಲಿ ಉಂಟಾಗಿರುವ ಆಳವಾದ ಕರ್ಷಕ ಬಿಕ್ಕಟ್ಟಿನ ತೀವ್ರ ದುಷ್ಫಲಗಳ ವಿರುದ್ಧ ಅವರ ಹೋರಾಟಗಳೊಂದಿಗೆ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತದೆ. ಈ ದಿಕ್ಕಿನಲ್ಲಿ ಸಂಘಟನೆಗಳ ಎಲ್ಲ ಮಟ್ಟಗಳಲ್ಲಿ ತುರ್ತಾಗಿ ಮುತುವರ್ಜಿ ವಹಿಸಬೇಕಾಗಿದೆ.

ಸಿಐಟಿಯು, ಯುವಜನರು ಮತ್ತು ವಿದ್ಯಾರ್ಥಿಗಳ ಸಂಘಟನೆಗಳಿಗೆ ಹಾರ್ದಿಕ ಸೋದರ ಶುಭಾಶಯಗಳನ್ನು ಕೋರುತ್ತದೆ ಮತ್ತು ಶಿಕ್ಷಣ ಹಾಗೂ ಉದ್ಯೋಗದ ಹಕ್ಕಿಗಾಗಿ, ಶಿಕ್ಷಣದ ವ್ಯಾಪಾರೀಕರಣ ಹಾಗೂ ಖಾಸಗೀಕರಣದ ವಿರುದ್ಧ, ಮತ್ತು ಸಂಘಟನೆ ಮಾಡುವ ಹಾಗೂ ಕ್ರಿಯಾಶೀಲರಾಗುವ ಪ್ರಜಾಪ್ರಭುತ್ವ ಹಕ್ಕಿಗಾಗಿ ಅವರ ಹೋರಾಟಗಳೊಂದಿಗೆ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತದೆ. ಸಿಐಟಿಯು, ಮಹಿಳಾ ಸಂಘಟನೆಗಳಿಗೆ ಶುಭಾಶಯಗಳನ್ನು ಕೋರುತ್ತ, ಪಕ್ಷಪಾತದ ವಿರುದ್ಧ, ಹಿಂಸಾಚಾರದ ವಿರುದ್ಧ ಮತ್ತು ಎಲ್ಲ ವೇದಿಕೆಗಳಲ್ಲಿ, ಮಟ್ಟಗಳಲ್ಲಿ ಸೂಕ್ತ ಪ್ರಾತಿನಿಧ್ಯ ಹಾಗೂ ಸಬಲೀಕರಣದ ಅವರ ಹಕ್ಕಿಗಾಗಿ ನಡೆಸುವ ಹೋರಾಟಗಳೊಂದಿಗೆ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತದೆ.

ಸಿಐಟಿಯು, ತ್ರಿಪುರಾದ ಕಾರ್ಮಿಕ ವರ್ಗ ಮತ್ತು ಪ್ರಜಾಪ್ರಭುತ್ವವಾದಿ ಜನತೆಗೆ, ವಿಧಾನ ಸಭಾ ಚುನಾವಣೆಗಳಲ್ಲಿ ಎಡರಂಗ ಸರಕಾರವನ್ನು ಇನ್ನಷ್ಟು ನಿಸ್ಸಂದಿಗ್ಧವಾಗಿ ಚುನಾಯಿಸುವಲ್ಲಿ ಮುಂಚೂಣಿಯ ಪಾತ್ರ ವಹಿಸಿದ್ದಕ್ಕಾಗಿ ನಮನಗಳನ್ನು ಸಲ್ಲಿಸುತ್ತದೆ. ಇದು ಆ ರಾಜ್ಯದಲ್ಲಿ ಎಡರಂಗ ಸರಕಾರದ ಜನ-ಕೇಂದ್ರಿತ ಆಳ್ವಿಕೆ ಮತ್ತು ಧೋರಣೆಗಳಿಗೆ ದೊರೆತಿರುವ ಬಲವಾದ ಅನುಮೋದನೆ.



ಗ್ರೀಸ್‌ನಲ್ಲಿ ಮೇ ದಿನದ ಬೃಹತ್ ಹೋರಾಟ

ಸಿಐಟಿಯು, ಸಮಾಜವಾದಿ ದೇಶಗಳ ಕಾರ್ಮಿಕ ವರ್ಗಕ್ಕೆ, ತಮ್ಮಲ್ಲಿನ ಸಮಾಜವಾದಿ ವ್ಯವಸ್ಥೆಯ ರಕ್ಷಣೆಗೆ ಅವರು ನಡೆಸಿರುವ ಹೋರಾಟಗಳೊಂದಿಗೆ ತನ್ನ ಅಂತರ್‍ರಾಷ್ಟ್ರೀಯ ಸೌಹಾರ್ದತೆಯನ್ನು ಮತ್ತೊಮ್ಮೆ ದೃಢಪಡಿಸುತ್ತದೆ. ಸಮಾಜವಾದಿ ವ್ಯವಸ್ಥೆಯನ್ನು ದುರ್ಬಲಗೊಳಿಸಲು ಮತ್ತು ಬಂಡವಾಳಶಾಹಿಯನ್ನು ಮತ್ತೆ ತರಲು ಕ್ರಾಂತಿ-ವಿರೋಧಿಗಳು, ಸಾಮ್ರಾಜ್ಯಶಾಹಿ ಬೆಂಬಲದೊಂದಿಗೆ ನಡೆಸಿರುವ ಪಿತೂರಿಗಳನ್ನೆಲ್ಲ ಅಂತಿಮವಾಗಿ ಸಮಾಜವಾದಿ ದೇಶಗಳ ಕಾರ್ಮಿಕ ವರ್ಗ ಮತ್ತು ಜನತೆ ಸೋಲಿಸುತ್ತಾರೆ ಎಂಬ ಬಲವಾದ ಆಶಯ ಮತ್ತು ದೃಢವಾದ ನಂಬಿಕೆಯನ್ನು ಸಿಐಟಿಯು ಹೊಂದಿದೆ.

ಸಿಐಟಿಯು, ಅಭಿವದ್ಧಿ ಹೊಂದಿರುವ ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗಕ್ಕೆ ಮತ್ತು ಶ್ರಮಿಕ ಜನಸಮೂಹಗಳಿಗೆ ಕೂಡ, ಮಿತವ್ಯಯದ ಕ್ರಮಗಳ ಹೆಸರಿನಲ್ಲಿ ಬಿಕ್ಕಟ್ಟುಗ್ರಸ್ತ ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆ ಅವರ ಹಕ್ಕುಗಳು ಮತ್ತು ಜೀವನಾಧಾರಗಳ ಮೇಲೆ ನಡೆಸಿರುವ ಕ್ರೂರ ಹಲ್ಲೆಗಳ ವಿರುದ್ಧ ಮುಷ್ಕರಗಳು ಮತ್ತು ಸಮರಶೀಲ ಚಳುವಳಿಗಳು ಇತ್ಯಾದಿಗಳ ಮೂಲಕ ಒಂದು ಗಂಭೀರ ಹೋರಾಟ ನಡೆಸಿರುವುದಕ್ಕಾಗಿ ಶುಭಾಶಯ ಕೋರುತ್ತದೆ. ಸಿಐಟಿಯು, ಅಲ್ಲಿ ಹೋರಾಟಗಳಲ್ಲಿ ಮತ್ತು ಮೆರವಣಿಗೆ-ಸಭೆಗಳಲ್ಲಿ ಎತ್ತುತ್ತಿರುವ 'ತೊಂಭತ್ತೊಂಬತ್ತು ಶೇಕಡಾಕ್ಕೆ ಎದುರಾಗಿ ಒಂದು ಶೇಕಡಾ' ಎಂಬ ಅತ್ಯಂತ ಸೂಕ್ತವಾದ ಘೋಷಣೆಯ ಭಾವನೆಯನ್ನು ಎತ್ತಿ ಹಿಡಿಯುತ್ತದೆ ಮತ್ತು ಅದನ್ನು ಜಗತ್ತಿನಾದ್ಯಂತ ಇನ್ನೂ ಗಟ್ಟಿಯಾಗಿ ಘೋಷಿಸಬೇಕು, ನವ-ಉದಾರವಾದಿ ಚೌಕಟ್ಟಿನ ಅಡಿಯಲ್ಲಿ ಬಂಡವಾಳಶಾಹಿ ವ್ಯವಸ್ಥೆ ತೋರುತ್ತಿರುವ ಅತ್ಯಂತ ಹೀನ ಮತ್ತು ಅಮಾನವೀಯ ಮುಖದ ವಿರುದ್ಧ ಇದು ದುಡಿಯುವ ಜನತೆಯ ಸಮರ-ಘೋಷವಾಗಬೇಕು ಎಂದು ಬಯಸುತ್ತದೆ.

ಸಿಐಟಿಯು, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕಾರ್ಮಿಕ ವರ್ಗದೊಂದಿಗೆ, ಅವರು ಒಂದೆಡೆ ಅವರ ದೇಶದ ಸಾಮಾಜಿಕ-ರಾಜಕೀಯ ಮತ್ತು ಆರ್ಥಿಕ ಆಡಳಿತ ಕುರಿತಂತೆ ಸಾಮ್ರಾಜ್ಯಶಾಹಿ ಹುನ್ನಾರಗಳ ವಿರುದ್ಧ, ಇನ್ನೊಂದೆಡೆ, ಅವರವರ ಆಳುವ ರಾಜಕೀಯ ವ್ಯವಸ್ಥೆ ಸಾಮಾಜ್ಯಶಾಹಿ-ಚಾಲಿತ ನವ-ಉದಾರವಾದಿ ವ್ಯವಸ್ಥೆಯ ಪ್ರಭಾವದ ಅಡಿಯಲ್ಲಿ ಕಾರ್ಮಿಕ ವರ್ಗದ ಹಕ್ಕುಗಳು ಮತ್ತು ಬದುಕಿನ ಮೇಲೆ ನಡೆಸಿರುವ ದಾಳಿಗಳನ್ನು ಎದುರಿಸಲು ನಡೆಸಿರುವ ತೀವ್ರ ಹೋರಾಟಗಳೊಂದಿಗೆ ಸೌಹಾರ್ದತೆಯ ಬಂಧವನ್ನು ಮತ್ತೊಮ್ಮೆ ಒತ್ತಿ ಹೇಳುತ್ತದೆ.

ವಿಶ್ವವ್ಯಾಪಿ ಸಾಮ್ರಾಜ್ಯಶಾಹಿ ಆಧಿಪತ್ಯಶಾಹಿಯ ವಿರುದ್ಧ ಹೋರಾಟಗಳೊಂದಿಗೆ ಸೌಹಾರ್ದತೆ

ಮೇದಿನ 2013ರ ಈ ಸಂದರ್ಭದಲ್ಲಿ, ಸಿಐಟಿಯು, ಸಾಮ್ರಾಜ್ಯಶಾಹಿಯ, ಅದರಲ್ಲೂ ಜಗತ್ತಿನ ವಿವಿಧೆಡೆಗಳಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಆಕ್ರಮಣಗಳು ಮತ್ತು ಆಧಿಪತ್ಯ ನಡೆಸುವ ಹುನ್ನಾರಗಳ ವಿರುದ್ಧ ನಡೆಯುತ್ತಿರುವ ಹೋರಾಟಗಳೊಂದಿಗೆ ಸೌಹಾರ್ದತೆಯನ್ನು, ಅವುಗಳಿಗೆ ಬೆಂಬಲವನ್ನು ಪುನರುಚ್ಚರಿಸುತ್ತದೆ.

ಸಿಐಟಿಯು, ಸಿರಿಯಾ ಮತ್ತು ಇರಾನ್ ವಿರುದ್ಧ ಮುಂದುವರೆಯುತ್ತಿರುವ ನ್ಯಾಯಬಾಹಿರ ಹಸ್ತಕ್ಷೇಪಗಳು ಮತ್ತು ಬೆದರಿಸುವ ಕಸರತ್ತುಗಳನ್ನು ಖಂಡಿಸುತ್ತದೆ. ಇದು ಇತರ ಪ್ರಭುತ್ವಗಳ ಸಾರ್ವಭೌಮತೆಯ ನಾಚಿಕೆಹೀನ ಮತ್ತು ಅಹಂಕಾರಪೂರ್ಣ ಉಲ್ಲಂಘನೆಯಾಗುತ್ತದೆ. ಇವುಗಳ ವಿರುದ್ಧ ಎಲ್ಲ ಶಾಂತಿಪ್ರಿಯ ಮತ್ತು ಸ್ವಾತಂತ್ರ್ಯಪ್ರಿಯ ಜನತೆ ತಮ್ಮ ಖಂಡನೆಯ ದನಿಯೆತ್ತಬೇಕು ಎಂದು ಸಿಐಟಿಯು ಕರೆ ನೀಡುತ್ತದೆ. ಅಮೆರಿಕನ್ ಸಾಮ್ರಾಜ್ಯಶಾಹಿ ಕೂಟ, ತನ್ನ ಯುರೋಪಿಯನ್ ಮಿತ್ರರುಗಳ ಬೆಂಬಲದೊಂದಿಗೆ, ಬಹರೆನ್, ಯೆಮೆನ್, ಜೋರ್ಡಾನ್, ಮೊರೊಕ್ಕೊ, ಮತ್ತು ಸೌದಿ ಅರೇಬಿಯ ಮುಂತಾದ ದೇಶಗಳ ನಿರಂಕುಶ ಆಳರಸರ ವಿರುದ್ಧ ಅಲ್ಲಿನ ಜನಗಳ ನೈಜ ಉತ್ಕ್ರಾಂತಿಗಳ ಪಾಶವೀ ದಮನಕ್ಕೆ ಬಹಿರಂಗವಾಗಿಯೇ ಹಣ ಮತ್ತು ಯುದ್ಧಾಸ್ತ್ರಗಳಿಂದ ಸಹಾಯ ಮತ್ತು ಕುಮ್ಮಕ್ಕು ನೀಡುತ್ತಿದೆ. ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಅದರ ಮಿತ್ರರು ಕೊರಿಯಾ ಪ್ರಾಯದ್ವೀಪದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಸುತ್ತಿರುವುದನ್ನು ಸಿಐಟಿಯು ಖಂಡಿಸುತ್ತದೆ. ಅಮೆರಿಕಾ ಸಂಯುಕ್ತ ಸಂಸ್ಥಾನ ವಿಶ್ವ ಜನಾಭಿಪ್ರಾಯವನ್ನು ಉಲ್ಲಂಘಿಸಿ ಕ್ಯೂಬ ಮತ್ತು ಇರಾನ್ ವಿರುದ್ಧ ನ್ಯಾಯಬಾಹಿರ ನಿರ್ಬಂಧಗಳನ್ನು ಕೂಡ ಮುಂದುವರೆಸುತ್ತಿದೆ.

ಸಿಐಟಿಯು, ಪ್ಯಾಲೆಸ್ತೀನೀ ಜನತೆಯ ಮೇಲೆ ಮುಂದುವರೆಯುತ್ತಿರುವ ಇಸ್ರೇಲಿ ದಾಳಿಗಳನ್ನು ಮತ್ತು ಅಮೆರಿಕನ್ ಆಡಳಿತದ ಬೆಂಬಲದೊಂದಿಗೆ ಪಶ್ಚಿಮ ತಟ ಮತ್ತು ಗಾಝಾದ ಮೇಲೆ ಮತ್ತೆ-ಮತ್ತೆ ಬಾಂಬುಗಳನ್ನು ಸುರಿಸುವುದನ್ನು ಬಲವಾಗಿ

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಸ್ಲಂ ನಿವಾಸಿಗಳಿಗೆ ಎಪಿಎಲ್ ಕಾರ್ಡ್!

ಇದೇ ತಲೆಬರಹದ ವರದಿಯೊಂದು ಮೊನ್ನೆ 'ವಿಜಯ ಕರ್ನಾಟಕ' ದಲ್ಲಿ ಪ್ರಕಟವಾಗಿತ್ತು. ಬೆಂಗಳೂರಿನ ರಾಜಗೋಪಾಲ ನಗರದ 'ಗುಲ್ಬರ್ಗ ಸ್ಲಂ' ನಿವಾಸಿಗಳ ಕರುಣಾಜನಕ ಕಥೆ ಅದು. ದಶಕಗಳ ಹಿಂದೆ ಹೊಟ್ಟೆಪಾಡಿಗಾಗಿ ಕೂಲಿ ಅರಸಿ ಗುಲ್ಬರ್ಗದಿಂದ ಬೆಂಗಳೂರಿಗೆ ಬಂದವರು ಅವರು. ಪೀಣ್ಯದ 2ನೇ ಹಂತದಲ್ಲಿ, ಕಾರ್ಖಾನೆಗಳ ರಾಸಾಯನಿಕ ಕೊಳಚೆ ಹರಿಯುವ ಕಾಲುವೆ ಪಕ್ಕದಲ್ಲಿ ನೆಲೆ ಕಂಡುಕೊಂಡಿದ್ದರು. ನಗರದಲ್ಲಿ ಕಟ್ಟಡ, ಚರಂಡಿ ನಿರ್ಮಾಣದ ಕೂಲಿ ಕೆಲಸವನ್ನು ಜೀವನೋಪಾಯದ ಉದ್ಯೋಗವನ್ನಾಗಿ ಆರಿಸಿ ಕೊಂಡವರು. ಅಂದಿನಿಂದ ಈ ಜನವಸತಿಗೆ 'ಗುಲ್ಬರ್ಗ ಸ್ಲಂ' ಎಂದು ಹೆಸರಾಯಿತು.

ಸುಮಾರು 88 ತಗಡಿನ ಶೀಟುಗಳ ಗುಡಾರಗಳಿರುವ ಈ ಗುಲ್ಬರ್ಗ ಸ್ಲಂ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಅಧಿಕೃತವಾಗಿ ಗುರುತಿಸಲ್ಪಟ್ಟಿದೆ. ಈ ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲ. ಬೀದಿ ದೀಪಗಳಿಲ್ಲ. ಒಂದು ಸಾರ್ವಜನಿಕ ನಳದಿಂದ ಇಲ್ಲಿನ 80 ಕುಟುಂಬಗಳು ಕುಡಿಯಲು, ಬಳಸಲು ನೀರನ್ನು ಪಡೆಯ ಬೇಕು. ತುತ್ತಿನ ಚೀಲ ತುಂಬಿಸಲು ನಿತ್ಯವೂ ಮೈಮುರಿದು ಮಣ್ಣು ಹೊರಬೇಕು. ವೃದ್ಧರೂ ಮಕ್ಕಳು ಸೇರಿ ಸುಮಾರು 350 ಕ್ಕೂ ಹೆಚ್ಚು ಮಂದಿ ಈ ತಗಡಿನ ಮನೆಗಳಲ್ಲಿ ವಾಸವಾಗಿದ್ದಾರೆ. ಬಹುತೇಕ ವಯಸ್ಕ ಸ್ತ್ರೀ ಪುರುಷರು ಕೂಲಿಕೆಲಸಕ್ಕೆ ಹೋಗುತ್ತಾರೆ. ಕೆಲ ಯುವಕರು ಸಮೀಪದ ಕಾರ್ಖಾನೆಗಳಲ್ಲಿ ದುಡಿಯುತ್ತಾರೆ. ಕಡಿಮೆ ಬೆಲೆಗೆ ಸಿಗುವ ನುಚ್ಚಿನ ಅನ್ನ ಇವರ ಪಾಲಿಗೆ ಮೃಷ್ಟಾನ್ನ.

ಇಲ್ಲಿ ವಾಸವಿರುವ 88 ಕೂಲಿಕಾರ ಕುಟುಂಬಗಳಿಗೆ ಸರ್ಕಾರ ಕೊಟ್ಟಿರುವುದು 52 ಬಿಪಿಎಲ್ ಕಾರ್ಡ್ ಮಾತ್ರ, ಉಳಿದವರು ಇಂದಿಗೂ ಪಡಿತರ ಚೀಟಿ ವಂಚಿತರು. ಇಲ್ಲಿನ ಗಾರೆ ಕೆಲಸಗಾರರಿಗೆ ಅಧಿಕಾರಿಗಳು ಎಪಿಎಲ್ ಕಾರ್ಡ್ ಕೊಟ್ಟು 'ಶ್ರೀಮಂತಿಕೆ' ಮೆರೆದಿದ್ದಾರೆ. ಪಡಿತರ ಚೀಟಿಗಾಗಿ ಅರ್ಜಿ ಹಾಕಿದವರಿಗೆ ವಿದ್ಯುತ್ ಬಿಲ್ ಕೊಡಿ ಎಂದು ಅಧಿಕಾರಿಗಳು ಸೂಚಿಸಿದ್ದಾರೆ. ವಿದ್ಯುತ್ತೇ ಇಲ್ಲದ ಮನೆಗಳವರು ವಿದ್ಯುತ್ ಬಿಲ್ ಎಲ್ಲಿಂದ ತರಬೇಕು? "ಹಳದಿ ಚೀಟಿ ಬದ್ಲಿಗೆ ಕೆಂಪು ಚೀಟಿ ಕೊಟ್ಟಾರ. ನಮ್ಮ ಇನ್‌ಕಂ ಜಾಸ್ತಿ ಆಗದೆ ಅಂತ ಬರೆದು ಕೊಟ್ಟಾರಂತೆ. ಅದ್ಕೆ ನಮಗೆ ಕೊಟ್ಟಿಲ್ಲ ನೋಡ್ರೀ" ಎಂದು ಎಪಿಎಲ್ ಕಾರ್ಡ್ ಮುಂದಿಡುತ್ತಾನೆ ಕೂಲಿ ಕಾರ್ಮಿಕ ಹನುಮಂತು. ಇವರಲ್ಲಿ ಕೆಲವರ ಭಾವ ಚಿತ್ರಗಳೇ ಬದಲಾಗಿ ಬಿಪಿಎಲ್ ಕಾರ್ಡುಗಳು ಬೇರೆಯವರ ಪಾಲಾಗಿವೆ. "ಹಳೆಕಾರ್ಡ್ ಇದೆ. ಹೊಸ ಕಾರ್ಡ್‌ನಲ್ಲಿ ಮುಸ್ಲಿಂ ಹೆಸರು ಬಂದಿದೆ. ಅದಕ್ಕೆ ಕಾರ್ಡ್‌ಕೊಟ್ಟಿಲ್ಲ" ಎನ್ನುತ್ತಾರೆ ಅನಿತಾ. "ಹದಿನೈದು ವರ್ಷದಿಂದ ಇಲ್ಲೇ ಇದ್ದೇನೆ. ಗಾರೆಕೆಲ್ಸಕ್ಕೆ ಹೋಗ್ತೇನೆ. ಮನೆಯಲ್ಲಿ ನಾಲ್ಕು ಮಂದಿ ಇದ್ದೇವೆ. ಎರಡು ತಿಂಗಳ ಹಿಂದೆ ಎಪಿಎಲ್ ಕಾರ್ಡ್ ಕೊಟ್ಟಿದ್ದಾರೆ. ಹಿಂದೆ ಕೊಟ್ಟಿದ್ದ ಬಿಪಿಎಲ್ ಕಾರ್ಡ್ ತೋರಿಸಿ ಕೇಳಿದರೆ ನಮ್ಮ ಆದಾಯ ಪ್ರಮಾಣ ಪತ್ರಕ್ಕೆ ಇದೇ ಕಾರ್ಡ್ ಬರೋದು" ಅನ್ನುತ್ತಾರೆ ಎಂದು ಸ್ಲಂ ನಿವಾಸಿ ಪರಶುರಾಮ್ ಹೇಳುತ್ತಾರೆ.


ಹೀಗೆ ಪಡಿತರ ಚೀಟಿ ವಿತರಣೆಯಲ್ಲಿ ಗುಲ್ಬರ್ಗ ಸ್ಲಂನಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಅಧಿಕಾರಿಗಳು ಹಲವು ಅವಾಂತರಗಳನ್ನು ಸೃಷ್ಟಿಸಿದ್ದಾರೆ. ಕೂಲಿಮಾಡಿ ಜೀವನ ಸಾಗಿಸುವ ಮಂದಿಯನ್ನು ಶ್ರೀಮಂತರ ಪಟ್ಟಿಗೆ ಸೇರಿಸಿದ್ದಾರೆ. ಪಡಿತರ ಚೀಟಿ ವಿತರಣೆಯಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಿ ಅರ್ಹರಿಗೆ ಬಿಪಿಎಲ್ ಕಾರ್ಡ್‌ಗಳನ್ನು ವಿತರಿಸಲು ಅಧಿಕಾರಿಗಳು ಆಸಕ್ತಿ ತೋರುತ್ತಿಲ್ಲ.

ಇದು ಬೆಂಗಳೂರಿನ 'ಗುಲ್ಬರ್ಗ ಸ್ಲಂ' ಒಂದರ ಕಥೆಯಲ್ಲ. ನಗರದಲ್ಲಿರುವ ಎಲ್ಲಾ ಅಧಿಕೃತ ಹಾಗೂ ಅನಧಿಕೃತ ಸ್ಲಂಗಳಲ್ಲಿ ಇದೇ ರೀತಿ ನಿರ್ದಿಷ್ಟ ಆದಾಯವಿಲ್ಲದ ಕೂಲಿಕಾರರು ಪಡಿತರ ಚೀಟಿಯಿಂದ ವಂಚಿತರಾಗಿ ಗಂಭೀರ ಸಮಸ್ಯೆಯನ್ನು ಎದುರಿಸುತ್ತಾರೆ. ಹೊಟ್ಟೆಪಾಡಿಗಾಗಿ ನಗರಗಳಿಗೆ ವಲಸೆ ಬಂದಿರುವ ಕುಟುಂಬಗಳಿಗೆ ಸರಿಯಾದ ಪಡಿತರ ಚೀಟಿಗಳ ವಿತರಣೆಯಾಗಿಲ್ಲ. ಗ್ರಾಮೀಣ ಪ್ರದೇಶಗಳಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ.

ರಾಜ್ಯದಲ್ಲಿ ತಲೆಎತ್ತಲಿರುವ ಹೊಸ ಕಾಂಗ್ರೆಸ್ ಸರ್ಕಾರದ ಆಧ್ಯತೆಗಳೇನು ಎಂಬುದನ್ನು ತಿಳಿಯಲು ರಾಜ್ಯದ ಜನತೆ ಕಾತುರವಾಗಿದೆ. ಕೇಂದ್ರವು ಜಾರಿಗೆ ತರಲು ಹೊರಟಿರುವ 'ಆಹಾರ ಭದ್ರತೆಯ ಕಾಯ್ದೆ' ಸಮರ್ಪಕವಾಗಿಲ್ಲ ಎಂಬ ಠೀಕೆ ವ್ಯಾಪಕವಾಗಿ ಕೇಳಿಬರುತ್ತಿದೆ. ರಾಜ್ಯದಲ್ಲಿ ಎಪಿಎಲ್ ಬಿಪಿಎಲ್ ಎಂಬ ಬೇದವಿಲ್ಲದೆ ಎಲ್ಲ ಕುಟುಂಬಗಳಿಗೂ ಪಡಿತರ ಚೀಟಿಗಳನ್ನು ವಿತರಿಸಿ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಲು ಈ ಸರ್ಕಾರ ಮುಂದಾಗಬಹುದೇ?

ಪ್ರಜಾಪ್ರಭುತ್ವದ ಹಬ್ಬವೆಂದರೆ. . .

ಅದು ಕುರುಡು ಕಾಂಚಾಣದ ಕುಣಿತವೋ? ಅಥವಾ ತಮಗೆ ಬೇಕಾದ ಸರಕಾರವೊಂದನ್ನು ಜನಸಾಮಾನ್ಯರು ಆರಿಸಿಕೊಳ್ಳುವ ಸಂಭ್ರಮವೋ?



'ಈ ಚುನಾವಣೆಯನ್ನು ಹಬ್ಬದಂತೆ ಆಚರಿಸಿ' ಎಂದು ಮಹಾಲಕ್ಷ್ಮಿ ಲೇಔಟ್‌ನ ಅಭ್ಯರ್ಥಿಯೊಬ್ಬರು ಕರೆ ನೀಡಿದ್ದು ನೋಡಿ ನನಗೆ ಕೊಂಚ ಆಶ್ಚರ್ಯವಾಗಿತ್ತು. ಕಾಂಗ್ರೆಸ್, ಬಿಜೆಪಿ, ಕೆಜೆಪಿ, ಬಿಎಸ್ಸಾರ್ ಮತ್ತು ಜೆಡಿ ಎಸ್ ಪಕ್ಷಗಳ ಅಭ್ಯರ್ಥಿಗಳು ಹಬ್ಬ ಮಾಡಲು ಹೀಗೆ ಕರೆ ಕೊಡುವುದರ ಅರ್ಥ ಏನು? ಸಾಲ ಮಾಡಿಯಾದರೂ ತುಪ್ಪ ತಿನ್ನಿ ಎಂದಂತೆ-ಯೇ? ಅಥವಾ ಹಬ್ಬಕ್ಕೆ ಅಡ್ವಾನ್ಸ್ ಪಡೆಯಿರಿ ಎಂಬ ಆಮಿಷವೇ? ಇಲ್ಲವಾದರೆ ಹಬ್ಬಕ್ಕೆ ಬಂಡವಾಳವಾದರೂ ಎಲ್ಲಿಂದ ಬರಬೇಕು ಎಂಬುದು ಕುತೂಹಲಕಾರಿಯಾಗಿತ್ತು! ಆದರೆ ಇದೀಗ ನಡೆದ ಚುನಾವಣೆಯಲ್ಲಿ ಹರಿದಾಡಿದ ಕಾಂಚಾಣದಿಂದ ಹುಚ್ಚೆದ್ದ ಕುಣಿತ, ಗೆಲುವಿಗಾಗಿ ನಡೆಸಿದ ಕರಾಮತ್ತುಗಳು ಇಲ್ಲಿ ಪ್ರಜಾತಂತ್ರ ಮೆರೆಯುವ ಸಂಭ್ರಮದ ಕತ್ತನ್ನೇ ಹಿಸುಕುವಂತಿದ್ದವು. ಇತ್ತೀಚಿನ ಚುನಾವಣಾ ಶೈಲಿಯನ್ನು ಗಮನಿಸಿದವರಿಗೆ ಹೆಚ್ಚಿಗೆ ವಿವರಿಸಿ ಹೇಳಬೇಕಿಲ್ಲ.

ಚುನಾವಣೆಯೂ ಒಂದು ಹಬ್ಬವೇ? 'ಹೌದು' ಎಂದಿದ್ದರು ತ್ರಿಪುರಾದ ಸಚಿವ ಜಿತೇಂದ್ರ ಚೌಧುರಿಯವರು. 'ನೀವು ನಮ್ಮೂರಿಗೆ ಬರಬೇಕು, ಅಲ್ಲಿ ನಡೆಯುವ ಚುನಾವಣೆಗಳನ್ನು ನೋಡಬೇಕು' ಎಂದು ಅವರು ಆಹ್ವಾನ ನೀಡಿದ್ದರು. 'ಐದು ವರುಷಗಳಿಗೊಮ್ಮೆ ನಡೆಯುವ ನಮ್ಮೂರ ಜಾತ್ರೆಗೆ ನೀವು ಬರಬೇಕು, ಹಬ್ಬ ಮಾಡಬೇಕು, ತೇರು ನೋಡಬೇಕು, ಎಳೆಯಬೇಕು' ಎಂದು ಬಂಧು ಬಳಗಕ್ಕೆ ನಮ್ಮ ಹಳ್ಳಿ ಜನ ಹೇಳಿ ಕಳಿಸಿದಂತೆ!


ನನಗಂತೂ ಕುತೂಹಲವಿತ್ತು . ತ್ರಿಪುರಾದ ಚುನಾವಣೆಗಳನ್ನು ನೋಡಬೇಕು ಅಂತಾ. ಕಾರಣ ಚುನಾವಣೆಗಳು ನಡೆಯುವ ವಿಧಾನ, ಅಲ್ಲಿನ ಮತದಾನದ ಪ್ರಮಾಣ! ಬರೀ ಈಶಾನ್ಯ ಭಾರತ ಮಾತ್ರವಲ್ಲ ದೇಶದಲ್ಲೇ ಅತ್ಯಂತ ಹೆಚ್ಚಿನ ಶೇಕಡಾ ಮತದಾನವಾಗುವ ಕೆಲವೇ ರಾಜ್ಯಗಳಲ್ಲಿ ತ್ರಿಪುರಾವೂ ಒಂದು. ಅಲ್ಲಿ ಕುರುಡು ಕಾಂಚಾಣದ ಕ್ರೂರ ನರ್ತನ ನಡೆಯದ ರಾಜ್ಯವೆಂಬುದೂ ಅದರ ಹೆಗ್ಗಳಿಕೆಗಳಲ್ಲೊಂದು! ಈ ಅಂಶ ಸಿಪಿಐ(ಎಂ) ನೇತೃತ್ವದ ಎಡರಂಗಗಳ ಸರಕಾರವಿದ್ದ ಪಶ್ಚಿಮ ಬಂಗಾಳ, ಕೇರಳ ರಾಜ್ಯಗಳಲ್ಲಿಯೂ ನಿಜ.

ಇವನ್ನು ನೆನಪಿಸಿಕೊಳ್ಳಲು ಕಾರಣವಂತೂ ಇದ್ದೇ ಇದೆ. ಇದೇ ಮೇ5 ರಂದು ನಮ್ಮಲ್ಲಿ ಮತದಾನ. ಅಂದು ನಮ್ಮ ಮಾಧ್ಯಮಗಳೋ ಅದರ ವರದಿಗೆ ದಮ್ಮು ಕಟ್ಟಿ ನಿಂತಿವೆ. ಗಣ್ಯಾತಿ ಗಣ್ಯ ರಾಜಕೀಯ ನಾಯಕರು, ಮಠಾಧೀಶರು, ನಟ ನಟಿಯರು ಮುಂತಾದವರ ಮತದಾನದ ಮಹಿಮೆಗಳನ್ನು ಕೊಂಡಾಡುತ್ತಿವೆ. ಅದ-ರೆ ಬೆಳಿಗ್ಗೆ ಹನ್ನೊಂದಾದರೂ ಮತದಾನದ ಪ್ರಮಾಣ ಶೇ15– 19.5 ! ಗಂಟೆ 12 ಹೊತ್ತಿಗೆ ಗಣಿ ನಾಡು ಹೊಸಪೇಟೆಯಿಂದಲೂ ನ್ಯೂಸ್ ಬುಲೆಟಿನ್! ಕೆಲವು ಪ್ರದೇಶಗಳ ಜನ ಅಲ್ಲಿ ಮತದಾನಕ್ಕೆ ಬರುವುದಕ್ಕೆ ನಿರಾಕರಿಸುತ್ತಿದ್ದಾರೆ ಅರ್ಥಾತ್ ಸ್ಟ್ರೈಕ್ ಹೂಡಿದ್ದಾರೆ. ಕಾರಣ ತಮಗೆ ಬರಬೇಕಾದ ಕಾಣಿಕೆ ತಲುಪಿಲ್ಲವೆಂದು. ಅಂದ-ರೆ 'ಕತ್ತಲ(ಖತಲ್) ರಾತ್ರಿ' ಸರಿಯಾಗಿ ಆಗಲಿಲ್ಲವೆಂದು ಈ ತಕರಾರು. ಬಹುಶಃ ಕೊನೆ ಗಳಿಗೆಯಲ್ಲಿ ಚುನಾವಣಾ ಆಯೋಗ ಬಿಗಿ ಕ್ರಮ ವಹಿಸಿರಬೇಕು, ಇಲ್ಲವೇ ಗೆಲ್ಲುವ ವಿಶ್ವಾಸ ಕಡಿಮೆ ಅಥವಾ ಹೆಚ್ಚು ಇರುವವರು ಹಂಚಿಕೆ ವ್ಯರ್ಥವೆಂದೂ ಭಾವಿಸಿರಬೇಕು. ಒಟ್ಟಾರೆ ಜನ ಬರುತ್ತಿಲ್ಲ. ಇದು ಸಂಜೆ-ಯ ವರೆಗೂ ನಡೆದ ವಿದ್ಯಾಮಾನ. ಅಲ್ಲಿ ಆಸಕ್ತ ಪಕ್ಷಗಳು ಮತ್ತೇ 'ಮಂತ್ರ' ಹಾಕಿದ ಮೇಲೆ ಹೊರ ಬಂದರೆನ್ನಿ. ಬಹುತೇಕ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್

ಪಿ ಮಹಮ್ಮದ್



ಪ್ರಜಾಪ್ರಭುತ್ವದ....

ಪುಟ 3 ರಿಂದ

ಇದೇ ಸ್ಥಿತಿ ರಾಜ್ಯದ ಬಹುತೇಕ ಕಡೆ ಕಂಡು ಬಂತು. ಹಲವೆಡೆ ಬಹುಶಃ ಬಿಸಿಲಿನ ತಾಪ ಕಳೆದುಕೊಂಡು ಮತ ಹಾಕಿದರಾಯಿತು



ತ್ರಿಪುರದಲ್ಲಿ ಮತದಾನ ಮಾಡಲು ಜನರು ಸಾಲುಗಟ್ಟಿ ನಿಂತಿರುವುದು

ಎಂಬುದೂ ಇರಬಹುದು. ಅಂತೂ ನಂತರ ಜನ ಅತ್ಯಂತ ಉತ್ಸಾಹದಿಂದ ಮತದಾನ ಮಾಡಿರುವುದೂ ಕಂಡು ಬಂತು. ಹೀಗೆ 40–50ಕ್ಕೆ ನಿಂತು ಹೋಗಲಿದೆಯೇ ಎಂಬ ಅನುಮಾನ ಕರಗಿ ಅದು ಅಂತಿಮವಾಗಿ 70.23 ತಲುಪಿದೆ. ಚುನಾವಣಾ ಆಯೋಗ ಎಷ್ಟೆಲ್ಲಾ ಪ್ರಯತ್ನಿಸಿದ ಬಳಿಕ ಇದು ದಾಖಲೆಯಂತೆ.

ಇದು ರಾಜ್ಯದಲ್ಲಿ ಉತ್ತಮ ಮತದಾನವೆಂದು ಗುರುತಿಸಲಾಗಿದೆ. ಆದ–ರೆ ವಿದ್ಯಾವಂತರು, ಮುಂದುವರಿದವರು ಇರುವರೆನ್ನಲಾದ ಬೆಂಗಳೂರಿನಂತಹ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಶೇ.52.83. ಇದು ಹಿಂದಕ್ಕೆ ಹೋಲಿಸಿದರೆ ತೀರಾ ಕಡಿಮೆ. ಒಟ್ಟಾರೆ ಮತದಾನ ಮಾಡಿಸಲು ಹಲವು ಪಟ್ಟಿನ ಕಸರತ್ತು ಆದ ಬಳಿಕವೂ ಈ ಸ್ಥಿತಿ. ಇಲ್ಲಿ ಮಾತ್ರವೇ ಅಲ್ಲ ಮುಂಬೈ, ದೆಹಲಿಯಂತಹ ಮಹಾನಗರಗಳಲ್ಲಿಯೂ ಮತದಾನದ ಶೇಕಡಾವಾರು ಕಡಿಮೆಯಾಗುತ್ತಿರುವುದರ ಬಗ್ಗೆ ಹಲವಾರು ವಿಶ್ಲೇಷಣೆಗಳು ಬಂದಿವೆ. ಹಿಂದೆಯಂತೂ 2009 ರಲ್ಲಿ ಬಿಹಾರ ಶೇ. 44.3, ಬಿಜೆಪಿ ಅಧಿಕಾರ ನಡೆಸಿದ ಉತ್ತರ ಪ್ರದೇಶ 47.2, ಗುಜರಾತ್47.9, ರಾಜಸ್ಥಾನ 48.5, ದೆಹಲಿ 51.8 ಜಮ್ಮು ಕಾಶ್ಮೀರ ರಾಜ್ಯಗಳು ಅಕ್ಷರಶಃ ಅತೀ ಕಡಿಮೆ ಮತದಾನ ಕಂಡ ರಾಜ್ಯಗಳಾಗಿವೆ.

ಮತದಾರರಲ್ಲಿ ಈ ನಿರಾಸಕ್ತಿ ಯಾ–ಕೆ? ಅದರಲ್ಲಿ ಸ್ಪರ್ಧೆಗಿಳಿದಿರುವ ಬಹುತೇಕ ಪಕ್ಷಗಳ ಬಗ್ಗೆ ಜನರಿಗೆ ವಿಶ್ವಾಸವಿಲ್ಲದಿರುವುದು, ಜನತೆ ಅಂತಹ ರಾಜಕೀಯ ಪಕ್ಷಗಳ ಬಗ್ಗೆ ಇಡಿಯಾಗಿ ಎಲ್ಲರೂ ಒಂದೇ ಎನ್ನುವ, ಓಟು ಹಾಕಿ ಏನು ಪ್ರಯೋಜನ, ಹೀಗಾಗಿ ಓಟು ಹಾಕೋದೇ ಬೇಡವೆನ್ನುವ ಸಿನಿಕತನದ ಮನೋಭಾವ. ಹೀಗೆ ಒಂದಷ್ಟು ವಿಭಾಗಗಳನ್ನು ಬಂಡವಾಳಶಾಹೀ ಪಕ್ಷಗಳು ದೂರಗೊಳಿಸಿವೆ, ಜನರಲ್ಲಿ ನಿರಾಸಕ್ತಿ ಹುಟ್ಟಿಸಿವೆ. ಅದ್ದರಿಂದಲೇ ಅವುಗಳ ವೈಫಲ್ಯ ಮುಚ್ಚಿಕೊಳ್ಳಲು ಕಾಂಚಾಣದ ಝಣ ಝಣ!

ಮೂಲತಃ ಗೆದ್ದು ಹೋದ ಮೇಲೆ ಜನರನ್ನು ಮರೆತು ಅವರ ದುಡ್ಡು ಮಾಡುವ ದಂಧೆಯಲ್ಲಿ ಮಗ್ನರಾಗುವ ವ್ಯವಹಾರಸ್ಥಿಕೆ ಜನರನ್ನು ಹಾಗೆ ಯೋಚಿಸುವಂತೆ ಮಾಡುತ್ತಿರುವುದೂ ನಿಜ. ಈ ಬಲಪಂಥೀಯ ರಾಜಕೀಯ ಪಕ್ಷಗಳೇ ಜನರನ್ನು ಸಕ್ರಿಯ ರಾಜಕಾರಣದಿಂದ ದೂರ ಇಡುತ್ತಿವೆ. ಹೀಗಾಗಿ ಮತ ಪಡೆಯಲು ಹಣ, ಕಾಣಿಕೆಗಳಂತಹ ಆಮಿಷಗಳು ಭರ್ಜ–ರಿಯಾಗಿಯೇ ನಡೆಯುತ್ತವೆ. ಈಗಂತೂ ನೂರಾರು ಕೋಟಿ ಹಣ ಇರುವವರು ಮಾತ್ರವೇ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವೆಂಬ ಅಸಹ್ಯಕರ ಸ್ಥಿತಿಯನ್ನು ಸೃಷ್ಟಿಸಲಾಗಿದೆ. ಇಷ್ಟಾದ ಮೇಲೂ ಬಿಜೆಪಿ ಏನೆಲ್ಲಾ ಹಣದ ಹೊಳೆ ಹರಿಸಿ ತಿಪ್ಪರಲಾಗ ಹಾಕಿದರೂ ಜನ ಮರುಳಾಗದೇ ಅಘಾತಕಾರೀ ಏಟು ಹಾಕಿದ್ದು ಗಮನಾರ್ಹ. ಅವರ ಅತೃಪ್ತಿ ಕಾಂಗ್ರೆಸ್ ಪಡೆದ ಮತಗಳ ಅಂತರವೇ ತೋರಿಸುತ್ತದೆ.

ಮತ ಫಡೆಯುವ ತಿಣುಕಾಟ, ಮತದಾನದ ಕಸರತ್ತು ಇಲ್ಲಿ ಹೀಗಿರುವಾಗ ಎಡ ಪಕ್ಷಗಳು ಪ್ರಬಲವಿರುವ, ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ವಿಭಿನ್ನ ಚಿತ್ರಣವೇ ಇದೆ. ತ್ರಿಪುರಾದ ಸಂಗಾತಿಗಳು ಚುನಾವಣೆಯನ್ನು 'ಪ್ರಜಾಪ್ರಭುತ್ವದ ಒಂದು ಹಬ್ಬ'ವೆಂದೇ ಕರೆದರಲ್ಲಾ ಹೇಗೆ? ಅಲ್ಲಿ ಚುನಾವಣೆ ಇನ್ನೂ ಒಂದು ವರುಷವಿದೆ ಎನ್ನುವಾಗಲೇ ಸಿದ್ಧತೆಗಳು ಆರಂಭಗೊಳ್ಳುತ್ತವೆ. ಸಂಘಟನಾ ತಯಾರಿಯಲ್ಲದೇ ಜನತೆಯನ್ನು ರಾಜಕೀಯವಾಗಿ ಜಾಗೃತಿಗೊಳಿಸುವ ಕೆಲಸ ಅತ್ಯಂತ ವ್ಯಾಪಕವಾಗಿ ನಡೆ–ಯುತ್ತದೆ. ಸರಕಾರ ಮತ್ತು ಪಕ್ಷದ ಪಾತ್ರ, ಸವಾಲುಗಳು, ಮುಂದಿನ ದೃಷ್ಟಿಕೋನದ ಬಗ್ಗೆ ವಿವರಿಸಲಾಗುತ್ತದೆ. ಇಂತಹ ತಾತ್ವಿಕ, ರಾಜಕೀಯ ಸಂಘಟನಾ ಕೆಲಸಗಳು ನಿರಂತರವಾಗಿ ನಡೆಯುತ್ತವೆ ಮತ್ತು ಇದರಲ್ಲಿ ಜನರ ಪಾತ್ರವೇ ಪ್ರಮುಖ. ಇಲ್ಲಿದ್ದಂತೆ ರಾಜಕೀಯವೆಂದರೆ ಚುನಾವಣೆ ಬಂದಾಗ ಜನರನ್ನು ನೆನಪಿಸಿಕೊಳ್ಳುವಂತಹದ್ದಲ್ಲ. ಅಲ್ಲಿ ಎಡ ಶಕ್ತಿಗಳು ಪ್ರತಿಯೊಂದನ್ನು ಜನರ ನಡುವಿನಿಂದಲೇ, ಅವರ ವಿಶ್ವಾಸ ಗಳಿಸಿಯೇ ಮಾಡುತ್ತಿರುವುದು ಪಕ್ಷ ಮತ್ತು ಜನರನ್ನು ಪ್ರತ್ಯೇಕಿಸಲು ಸಾಧ್ಯವೇ ಇಲ್ಲ.

ಈ ಬಾರಿಯಂತೂ ಆರು ತಿಂಗಳು ಮೊದಲೇ ಚುನಾವಣಾ ಹಣಾಹಣಿ ತ್ರಿಪುರಾದಲ್ಲಿ ಆರಂಭಗೊಂಡಿತು ಎಂದರು ಸಂಗಾತಿಗಳು. ಜನತೆ ಎಡರಂಗದ ಜನಪರ ಆಡಳಿತ, ಕಾಂಗ್ರೆಸ್‌ನ ದುರಾಡಳಿತವನ್ನು ಕಣ್ಣಾರೆ ಕಂಡು ಅನುಭವಿಸಿರುವ ಜನತೆ ತಾವಾಗಿಯೇ ನಿಂತು, ಚುನಾವಣೆ ನಡೆಸಿದರು. ಹಣ ಸಂಗ್ರಹಿಸಿ ಖರ್ಚು ವೆಚ್ಚಗಳನ್ನು ನಿಭಾಯಿಸಿದರು. 'ನಿಮ್ಮದೇ ನೋಟು, ನಿಮ್ಮದೇ ಓಟು ಅಂತಾ. ದಿನ ದಿನವೂ ಗುಂಪು ಗುಂಪಾಗಿ ಮನೆ ಮನೆಗೆ ತೆರಳಿ ಪ್ರಚಾರ, ಸಣ್ಣ ಹಾಗೂ ಬೃಹತ್ ಮೆರವಣಿಗೆಗಳು, ಅವರದ್ದೇ ವಿಶಿಷ್ಟ ಶೈಲಿಯಲ್ಲಿ ಪ್ರಚಾರ. ಇಲ್ಲೆಲ್ಲೂ ಜನವೋ ಜನ! ಅದಕ್ಕೆ ಅವರ ಸಾಂಸ್ಕೃತಿಕ ವಿಧಾನಗಳ ಬಳಕೆ ಹೀಗೆ ಚುನಾವಣೆಯೆಂದರೆ ಉತ್ಸಾಹದ ಹಬ್ಬ. ಕಾಂಗ್ರೆಸ್ ಹಣ, ಆಮಿಷಗಳನ್ನೊಡ್ಡಿದರೂ ಬಲಿಯಾಗದೇ ಜನ ದೃಡವಾಗಿ ನಿಂತಿ–ದ್ದು ಅವರ ರಾಜಕೀಯ ಉನ್ನತ ಪ್ರಜ್ಞೆಗೆ ಸಾಕ್ಷಿ. ಹೀಗಾಗಿಯೇ ಅಂತಹ ಗುಡ್ಡಗಾಡು ಪ್ರದೇಶಗಳಲ್ಲೂ, ಪಟ್ಟಣ, ನಗರ ಪ್ರದೇಶಗಳಲ್ಲಿಯೂ ಮಕ್ಕಳು ಮರಿಗಳನ್ನೊತ್ತು ಆರು ಗಂಟೆಗೇ ಮತದಾನಕ್ಕಾಗಿ ಕೇಂದ್ರಗಳಲ್ಲಿ ಜನ ಜಮಾಯಿಸಿರುವುದು ಎಲ್ಲೆಡೆ ಕಂಡು ಬಂದ ವಿದ್ಯಾಮಾನ. ಬಿರು ಬಿಸಿಲು ಹೊಡೆಯುತ್ತಿದ್ದರೂ ಕದಲದೇ ಮತ ನೀಡಿಯೇ ಹೋಗಿದ್ದು ತಮ್ಮ ಒಂದು ಮತದ ನಿಜವಾದ ಬೆಲೆ ಏನೆಂದು ಮನಗಂಡ. ತಮ್ಮ ಸರಕಾರವನ್ನು ತಾವೇ ಚುನಾಯಿಸಿಕೊಳ್ಳುವಲ್ಲಿ ವಹಿಸಬೇಕಾದ ಎಚ್ಚರ ಗಮನಾರ್ಹ. ಆದ್ದರಿಂದಲೇ ಅಲ್ಲಿ ಈ ಬಾರಿ ಮತದಾನ ಸರಾಸರಿ ಶೇಕಡಾ 93.57. (2009ರ ಸಂಸದೀಯ 83.9 ಇನ್ನೂ ಅಧ್ಭುತ ಸಂಗತಿಯೆಂದರೆ ಅಲ್ಲಿ ನೂರಾರು ಬೂತ್ಗಳಲ್ಲಿ ನೂರಕ್ಕೆ ನೂರು ಮತದಾನ! ಇದು ಹೇಗೆ ಸಾಧ್ಯ ರಿಗ್ಗಿಂಗ್ ಇರಬಹುದು ಎಂದುಕೊಂಡು ನೋಡಿಯೇ ಬಿಡುವ ಎಂದು ಅಲ್ಲಿಯೇ ಠಿಕಾಣಿ ಹೂಡಿದ್ದ ಚುನಾವಣಾ ಆಯೋಗದ ಅಧಿಕಾರಿಗಳೂ ಕೊನೆಗೆ 'ನಮೋನಮೋ' ಎನ್ನಬೇಕಾಗಿ ಬಂದದ್ದು ಒಂದು ವಿಶಿಷ್ಟವೇ.



ಕರ್ನಾಟಕದಲ್ಲಿ ಮತದಾನ ಮಾಡಲು ನಿಂತಿರುವ ಜನರು

ಇಲ್ಲಿ ಚುನಾವಣಾ ಹಬ್ಬವೆಂದರೆ ಮತದಾರರನ್ನು 'ಖತಲ್' ಮಾಡುವ 'ಕತ್ತಲ ರಾತ್ರಿ' . ಅಲ್ಲಿ ಹಾಗೂ ಎಡ ಆಂದೋಲನ ಪ್ರಬಲವಾಗಿರುವಲ್ಲಿ ಹಾಡುಹಗಲಲ್ಲಿ, ದಿನವಿಡೀ ನಡೆಯುವ ನರ್ತನ, ಪ್ರಜಾಪ್ರಭುತ್ವದ ಹಬ್ಬ.

ಮತದಾನದ ದಿನ ಇಲ್ಲಿ ಒಬ್ಬ ಮುಗ್ಧ ಅಜ್ಜಿ ಮತದಾನದ ಕೇಂದ್ರಕ್ಕೆ ಹೋಗಿ ತನಗೆ ಯಾರೂ ಹಣ ನೀಡಿಲ್ಲವೆಂದೂ ಮತ... ಅಧಿಕಾರಿಗಳಾದರೂ ಹಣ ನೀಡಿದರೆ ಓಟು ಹಾಕುವುದಾಗಿ ಹೇಳಿದ್ದು, ಹಣ ನೀಡದೇ ಇರುವುದರಿಂದ ಮತದಾನ ಮಾಡದೇ ಹಾಗೇ ಹಿಂತಿರುಗಿದ್ದು ಪತ್ರಿಕೆಯಲ್ಲಿ ಸುದ್ದಿಯಾಗಿದೆ. ಅಂದರೆ ಉದಾರೀಕರಣದ ಈ ದಿನಗಳಲ್ಲಿ ಮತವೆಂಬುದು ಚುನಾವಣಾ ಮಾರುಕಟ್ಟೆಯಲ್ಲಿ ಮಾರಾಟದ ಒಂದು ಸರಕಾಗಿ ಬಿಟ್ಟಿದೆ. ಮತದ ಪವಿತ್ರ್ಯದ ಬಗ್ಗೆ ಮಾತನಾಡುತ್ತಲೇ ಹೀಗೆ ಬಿಕರಿಯ ಸರಕನ್ನಾಗಿಸಿರುವ ಕಾಂಗ್ರೆಸ್, ಬಿಜೆಪಿಯಂತಹ ಪಕ್ಷಗಳಿಗೆ ಹೇಗೆ ಬುದ್ಧಿ ಕಲಿಸಬೇಕು? ಮತ್ತೊಂದೆಡೆ ಎಡ ಪಕ್ಷಗಳ ಸಂಸ್ಕೃತಿ ಗಮನಿಸಿದರೆ ಯಾವುದು ಅನುಕರಣೀಯ, ಆದರಣೀಯ, ಯಾರು ನಿಜಕ್ಕೂ ಪ್ರಜಾಪ್ರಭುತ್ವವನ್ನು ರಕ್ಷಿಸುತ್ತಾರೆ, ಬೆಳೆಸುತ್ತಾರೆ ಎಂಬುದನ್ನು ನಿರ್ಧರಿಸಲು ಇನ್ನೇನು ಬೇಕು?

ವಿಧಾನ ಸಭಾ ಚುನಾವಣೆ - 2013 ಸಿಪಿಐ(ಎಂ) ಸ್ಪರ್ಧಿಸಿದ ಕ್ಷೇತ್ರಗಳ ಮತ ಗಳಿಕೆ ವಿವರ

ಅಭ್ಯರ್ಥಿ	ಪಕ್ಷ	ಮತಗಳು
ಬಾಗೇಪಲ್ಲಿ ಕೇತ್ರ		
ಎಸ್. ಎನ್. ಸುಬ್ಬಾರೆಡ್ಡಿ	ಪಕ್ಷೇತರ	66,227
ಜಿ.ವಿ. ಶ್ರೀರಾಮ ರೆಡ್ಡಿ	**ಸಿಪಿಐ(ಎಂ)**	**35,472**
ಹರಿನಾಥ ರೆಡ್ಡಿ	ಜೆಡಿ(ಎಸ್)	16,779
ಎನ್. ಸಂಪಂಗಿ	ಕಾಂಗ್ರೆಸ್	15,491
ಎಂ. ನಾರಾಯಣ ಸ್ವಾಮಿ	ಬಿಜೆಪಿ	1,084
ಚಿಂತಾಮಣಿ		
ಜೆ. ಕೆ. ಕೃಷ್ಣರೆಡ್ಡಿ	ಜೆಡಿ(ಎಸ್)	69,030
ಎಂ. ಸಿ. ಸುಧಾಕರ್	ಪಕ್ಷೇತರ	67,257
ವಾಣಿ ಕೃಷ್ಣರೆಡ್ಡಿ	ಕಾಂಗ್ರೆಸ್	12,685
ಸತ್ಯ ನಾರಾಯಣ ಮಹೇಶ್	ಬಿಜೆಪಿ	1,936
ಸಿ. ಗೋಪಿನಾಥ್	**ಸಿಪಿಐ(ಎಂ)**	**736**
ಗೌರಿಬಿದನೂರು		
ಶಿವಶಂಕರ್ ರೆಡ್ಡಿ	ಕಾಂಗ್ರೆಸ್	49,831
ಜೈಪಾಲ ರೆಡ್ಡಿ	ಪಕ್ಷೇತರ	44,058
ರವಿನಾರಾಯಣ ರೆಡ್ಡಿ	ಬಿಜೆಪಿ	31,837
ಅಶ್ವಥ ರಾಮಯ್ಯ ರೆಡ್ಡಿ	ಜೆಡಿ(ಎಸ್)	11,578
ಸೋಮಶಂಕರ್	ಬಿಎಸ್ಆರ್ ಕಾಂಗ್ರೆಸ್	3,526
ಸಿ. ಸಿ. ಅಶ್ವಥಪ್ಪ	**ಸಿಪಿಐ(ಎಂ)**	**709**
ಗುಲ್ಬರ್ಗಾ ಗ್ರಾಮಾಂತರ		
ಜಿ. ರಾಮಕೃಷ್ಣ	ಕಾಂಗ್ರೆಸ್	40,075
ರೇವುನಾಯಕ್ ಬೆಳಮಗಿ	ಬಿಜೆಪಿ	32,857
ಬಾಬುರಾವ್ ಚೌಹಾಣ	ಕೆಜೆಪಿ	26,612
ಡಿ.ಜಿ. ಸಾಗರ್	ಜೆಡಿ(ಎಸ್)	8,612
ಮಾರುತಿ ಮಾನ್ಪಡೆ	**ಸಿಪಿಐ(ಎಂ)**	**4,694**
ಬಾಬುಹೊನ್ನ ನಾಯ್ಕ್	ಬಿಎಸ್ಆರ್ ಕಾಂಗ್ರೆಸ್	2,113
ಮಂಗಳೂರು		
ಯು. ಟಿ. ಖಾದರ್	ಕಾಂಗ್ರೆಸ್	69,450
ಚಂದ್ರಹಾಸ್ ಉಳ್ಳಾಲ್	ಬಿಜೆಪಿ	40,339
ಮಹಮದ್ ಅಕ್ರಮ್ ಹಸನ್	ಎಸ್‌ಡಿಪಿಐ	4,808
ಕೆ. ಕೃಷ್ಣಪ್ಪ ಸಾಲಿಯಾನ್	**ಸಿಪಿಐ(ಎಂ)**	**3,815**
ಅಬ್ದುಲ್ ಅಜ್ ಮದರ್	ಜೆಡಿ(ಯು)	2,152
ಮಂಗಳೂರು ದಕ್ಷಿಣ		
ಜೆ. ಆರ್. ಲೋಬೋ	ಕಾಂಗ್ರೆಸ್	67,829
ಎನ್. ಯೋಗೇಶ್ ಭಟ್	ಬಿಜೆಪಿ	55,554
ವಂಸತ್ ಆಚಾರಿ	**ಸಿಪಿಐ(ಎಂ)**	**3,016**
ಎಸ್. ಪಿ. ಚಂಗಪ್ಪ	ಜೆಡಿ(ಎಸ್)	1,672
ಬೆಳ್ತಂಗಡಿ		
ಕೆ. ವಸಂತ ಬಂಗೇರಾ	ಕಾಂಗ್ರೆಸ್	74,530
ರಾಜನ್ ಜಿ. ಗೌಡ	ಬಿಜೆಪಿ	58,789
ಬಿ.ಎಂ. ಭಟ್	**ಸಿಪಿಐ(ಎಂ)**	**4,532**
ರಾಜಶ್ರೀ ಎಸ್. ಹೆಗ್ಡೆ	ಜೆಡಿ(ಎಸ್)	2,682
ಸುಭೇಶ್ ಕುಮಾರ	ಕೆಜೆಪಿ	2,673

ಅಭ್ಯರ್ಥಿ	ಪಕ್ಷ	ಮತಗಳು
ಬೈಂದೂರು		
ಗೋಪಾಲ್ ಪೂಜಾರಿ	ಕಾಂಗ್ರೆಸ್	82,277
ಬಿ ಎಂ ಸುಕುಮಾರ್ ಶೆಟ್ಟಿ	ಬಿಜೆಪಿ	51,128
ನವಿನ್ ಚಂದ್ರ	ಕೆಜೆಪಿ	4,177
ಕೆ ಶಂಕರ್	**ಸಿಪಿಐ(ಎಂ)**	**2,960**
ವಿಜಯನಗರ, ಬಳ್ಳಾರಿ		
ಆನಂದ ಸಿಂಗ್	ಬಿಜೆಪಿ	69,995
ಹೆಚ್. ಅಬ್ದುಲ್ ವಹಾಬ್	ಕಾಂಗ್ರೆಸ್	39,358
ಬಿ.ಎಲ್. ರಾಣಿಸಂಯುಕ್ತ	ಬಿಎಸ್ಆರ್ ಕಾಂಗ್ರೆಸ್	6,406
ಎಂ. ಅಬ್ದುಲ್ ಲತೀಫ್	ಪಕ್ಷೇತರ	1,039
ಭಾಸ್ಕರ್‌ರೆಡ್ಡಿ	**ಸಿಪಿಐ(ಎಂ)**	**944**
ಕೋಲಾರ (ಕೆಜಿಎಫ್)		
ರಾಮಕ್ಕ	ಬಿಜೆಪಿ	55,014
ಎಂ. ಭಕ್ತ ವತ್ಸಲಂ	ಜೆಡಿ(ಎಸ್)	28,992
ವಿ. ಶಂಕರ್	ಕಾಂಗ್ರೆಸ್	10,218
ವಿ. ರಾಜೆದ್ರನ್	ಅರ್‌ಪಿಐ	9,760
ವಿ. ಕಲಾವತಿ	ಹೆಚ್‌ಜೆಪಿ	2,501
ಪಿ. ತ್ಯಾಗರಾಜ್	**ಸಿಪಿಐ(ಎಂ)**	**2,199**
ಎಂ. ಅನ್ಬು	ಎಐಎಡಿಎಂಕೆ	2,052
ಅನೇಕಲ್		
ಶಿವಣ್ಣ .ಬಿ.	ಕಾಂಗ್ರೆಸ್	1,05,464
ಎ ನಾರಯಣಸ್ವಾಮಿ	ಬಿಜೆಪಿ	65,282
ಕೇಶವ	ಜೆಡಿ(ಎಸ್)	7,307
ಕೃಷ್ಣಮೂರ್ತಿ	ಕೆಜೆಪಿ	2,369
ಮಾದೇಶ್	**ಸಿಪಿಐ(ಎಂ)**	**1,923**
ಕೆ.ಆರ್ ಪುರ		
ಬಸವರಾಜು	ಕಾಂಗ್ರೆಸ್	53,063
ನಂದಿಶ್ ರೆಡ್ಡಿ	ಬಿಜೆಪಿ	42,014
ರವಿ ಪ್ರಕಾಶ್	ಜೆಡಿ(ಎಸ್)	1,609
ಗೌರಮ್ಮ	**ಸಿಪಿಐ(ಎಂ)**	**667**
ಸತ್ಯ ನಾರಾಯಣ್	ಕೆಜೆಪಿ	292
ದೊಡ್ಡಬ್ಬಳಾಪುರ		
ಓ ವೆಂಕಟರಮಣಯ್ಯ	ಕಾಂಗ್ರೆಸ್	38877
ಬಿ ಮುನಿಗೌಡ	ಪಕ್ಷೇತರ	37430
ಸಿ ಚನಿಗಪ್ಪ	ಜೆಡಿಎಸ್	34628
ಜೆ ನರಸಿಂಹಸ್ವಾಮಿ	ಬಿಜೆಪಿ	32753
ವಿ ನಾಗೇಗೌಡ	ಕೆಜೆಪಿ	1517
ಪುರುಷೋತ್ತಮ	ಬಿಎಸ್‌ಪಿ	1439
ಆರ್ ಚಂದ್ರ ತೇಜಸ್ವಿ	**ಸಿಪಿಐ(ಎಂ)**	**984**

ಪುಟ 6 ಕ್ಕೆ

ತುಮಕೂರು : ಕಟ್ಟಡ ಕಾರ್ಮಿಕರ ಪ್ರತಿಭಟನೆ

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪೆಡರೇಷನ್ ಸಿಐಟಿಯು ತುಮಕೂರು ಜಿಲ್ಲಾಸಮಿತಿ ವತಿಯಿಂದ ದಿನಾಂಕ 7-5-2013 ಮಂಗಳವಾರ ಬೆಳಿಗ್ಗೆ 11-30 ಗಂ-ಟೆಗೆ ತುಮಕೂರು ನಗರದ ಟೌನ್‌ಹಾಲ್ ವೃತ್ತದಿಂದ ಪ್ರತಿಭಟನಾ ಮೆರವಣಿಗೆಯನ್ನು



ಪ್ರಾರಂಭಿಸಿ ಜಿಲ್ಲಾಧಿಕಾರಿಗಳ ಕಛೇರಿಗೆ ಬಂದು ಉಪವಿಭಾಗಾಧಿಕಾರಿಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಕಟ್ಟಡ ಕಾರ್ಮಿಕರ ಹಕ್ಕೋತ್ತಾಯಗಳ ಮನವಿ ನೀಡಲಾಯಿತು. ಈ ಪ್ರತಿಭಟನಾ ಮೆರವಣಿಗೆಯನ್ನು ಉದ್ದೇಶಿಸಿ ಕಟ್ಟಡ ಕಾರ್ಮಿಕ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಉಮೇಶ್ ಮಾತನಾಡಿ ಕೇಂದ್ರ ರಾಜ್ಯ ಸರ್ಕಾರಗಳು ದುಡಿಯುವ ಜನರ ಹಿತಾಸಕ್ತಿಗಳನ್ನು ಮರೆತು ಜನವಿರೋಧಿ ಆಡಳಿತವನ್ನು ನೀಡುತ್ತಿವೆ. ಸಮರ್ಪಕವಾದ ನೀರನ್ನು ಒದಗಿಸದೆ ನಗರಸಭೆ ಕಂದಾಯ ಹೆಚ್ಚಿಸುತ್ತಿದೆ. ಸರಿಯಾಗಿ ವಿದ್ಯುತ್ ನೀಡದೆ ವಿದ್ಯುತ್ ದರವನ್ನು ಹೆಚ್ಚಿಸುತ್ತಿರುವುದು ಇವರ ದುರಾಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ. ರಾಜ್ಯ ಸರ್ಕಾರ ಕಟ್ಟಡ ಮತ್ತು ಇತ-



ರೇ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೀಡುವ ಸೌಲಭ್ಯಗಳನ್ನು ತ್ವರಿತವಾಗಿ ನೀಡದೆ ಇರುವುದರಿಂದ ಕಾರ್ಮಿಕರು ಇದರ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಅದನ್ನು ತಪ್ಪಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಅಧ್ಯಕ್ಷ ಸೈಯದ್ ಮುಜೀಬ್ ಪ್ರತಿಭಟಣೆಯನ್ನು ಬೆಂಬಲಿಸಿ ಮಾತನಾಡಿ ಕಟ್ಟಡ ಕಾರ್ಮಿಕರು ತಮ್ಮ ಆರೋಗ್ಯದ ಕಡೆ ಗಮನ ನೀಡಬೇಕು ಮಾತ್ರವಲ್ಲದೆ ಕಾನೂನುಗಳ ಅರಿವು ಪಡೆದು ಅದರ ಸೌಲತ್ತುಗಳನ್ನು ಪಡೆಯಲು ಸಿಐಟಿಯು ಸಂಘಟನೆಯ ಅಡಿಯಲ್ಲಿ ಸಂಘಟಿತರಾಗಬೇಕೆಂದು ಕರೆ ನೀಡಿದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎನ್. ಕೆ.ಸುಬ್ರಹ್ಮಣ್ಯ ಮಾತನಾಡಿ ಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಕಾಯಿದೆ ಜಾರಿಗೆ ತರುವಂತೆ ತೀವ್ರತರವಾದ ಚಳುವಳಿ ನಡೆಯಬೇಕೆಂದು ಹೇಳಿದರು. ಪ್ರತಿಭಟನೆಯ ನೇತೃತ್ವವನ್ನು ಖಜಾಂಚಿ ಗೋವಿಂದರಾಜು, ಜಿಲ್ಲಾ ಉಪಾಧ್ಯಕ್ಷ ಶ್ರೀಧರ್, ನಗರ ಕಾರ್ಯದರ್ಶಿಗಳಾದ ರಾಮಚಂದ್ರ, ರಾಮಣ್ಣ, ಶಂಕರಪ್ಪ, ಲಕ್ಷ್ಮಣ್, ಸತ್ಯನಾರಾಯಣರಾಜ್, ಗಂಗಾದ-ರ್, ಚಿಕ್ಕಣ್ಣ, ತಿಪಟೂರು ತಿಮ್ಮೇಗೌಡ, ಶಿರಾ ತಾಲ್ಲೂಕಿನ ರಂಗನಾಥಪ್ಪ, ತಿಪ್ಪೇಸ್ವಾಮಿ ತುರುವೇಕೆರೆ ತಾಲ್ಲೂಕಿನ ರವಿ, ಗುಬ್ಬಿ ತಾಲ್ಲೂಕಿನ ಬಸವಣ್ಣ, ಶಿವಣ್ಣ, ಮಧುಗಿರಿ ತಾಲ್ಲೂಕು ಬೆಟ್ಟಪ್ಪ, ವೀರಣ್ಣ, ಲಕ್ಷ್ಮೀನಾರಾಯಣಪ್ಪ, ವೆಂಕಟಾಚಲ, ಕುಣಿಗಲ್ ತಾಲ್ಲೂಕಿನ ಮಂಜಣ್ಣ, ಮಹಿಳಾ ಮುಖಂಡರಾದ ಗಂಗಮ್ಮ, ರತ್ನಮ್ಮ ಮುಂತಾದವರು ವಹಿಸಿದ್ದರು.

ಪ್ರತಿಭಟನಾ ಮೆರವಣಿಗೆಯಲ್ಲಿ ಕಟ್ಟಡ ಕಾರ್ಮಿಕರಿಗೆ ಸಾವಿರ ರೂ ಪಿಂಚಣಿ ನೀಡಿ ಪ್ರತಿವರ್ಷ ಬೆಲೆ ಏರಿಕೆಗನುಗುಣವಾಗಿ ಶೇ.10 ರಷ್ಟು ಹಣವನ್ನು ಹೆಚ್ಚಿಸಬೇಕು. ಕಟ್ಟಡ ಕಾರ್ಮಿಕರಿಗೆ ನೀಡುವ ವಿದ್ಯಾಭ್ಯಾ... ಅಪಘಾತ, ವಿವಾಹ, ಮುಂತಾದ ಸೌಲಭ್ಯಗಳ ಹಣವನ್ನು ಜರೂರಾಗಿ ಕಾರ್ಮಿಕರಿಗೆ ಸಿಗುವಂತೆ ಕ್ರಮವಹಿಸಬೇಕು. ಎಲ್ಲಾ ರಾಜ್ಯಗಳಲ್ಲೂ ಕಟ್ಟಡ ಕಾರ್ಮಿಕ ಕೇಂದ್ರ ಶಾಸವನ್ನು ಜಾರಿಗೊಳಿಸಬೇಕು. ಅಗತ್ಯ ವಸ್ತುಗಳ ಹಾಗೂ ಕಟ್ಟಡ ಸಾಮಗ್ರಿಗಳ ಬೆಲೆಯನ್ನು ತಕ್ಷಣ ಇಳಿಸಿ ಬೆಲೆ ಏರಿಕೆ ಆಗದಂತೆ ಕೇಂದ್ರ ರಾಜ್ಯ ಸರ್ಕಾರಗಳು ಕ್ರಮವಹಿಸಬೇಕು. ಕಟ್ಟಡ ಕಾರ್ಮಿಕರಿಗೆ ವಾಸದ ಮನೆಯ ಹಕ್ಕನ್ನು ಮೂಲಭೂತ ಹಕ್ಕಾಗಿಸಬೇಕು. ಎಲ್ಲಾ ಕಾರ್ಮಿಕರನ್ನು ಬಿ.ಪಿ.ಎಲ್. ಪಟ್ಟಿಗೆ ಸೇರಿಸಿ ಪಡಿತರ ಚೀಟಿ ನೀಡಬೇಕೆಂದು. ಘೋಷಣೆಗಳ ಮೂಲಕ ಅಖಿಲ ಭಾರತ ಬೇಡಿಕೆ ದಿನದ ಅಂಗವಾಗಿ ಕೇಂದ್ರ-ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲಾಯಿತು.

ಸಿಪಿಐ(ಎಂ) ಸ್ಪರ್ಧಿಸಿದ ಕ್ಷೇತ್ರಗಳ.....

ಪುಟ 5 ರಿಂದ

ಅಭ್ಯರ್ಥಿ	ಪಕ್ಷ	ಮತಗಳು
ಕಂಪ್ಲಿ		
ಓ. ಹೆಚ್. ಸುರೇಶ್ ಬಾಬು	ಬಿಎಸ್‌ಆರ್ ಕಾಂಗ್ರೆಸ್	70,858
ಇ. ಎನ್. ಗಣೇಶ್	ಪ್ರಕ್ಷೇತರ	36,462
ಗುಜಲ್ ನಾಗರಾಜ್	ಕಾಂಗ್ರೆಸ್	12,197
ಬಸವರಾಜ್	ಕೆಜೆಪಿ	5,494
ಎಸ್. ವೀರೇಶ್	ಜೆಡಿ(ಯು)	5,199
ಪಾರ್ವತಮ್ಮ	ಪಕ್ಷೇತರ	3,223
ಶಿವಶಂಕರ್ ಬದನಹಟ್ಟಿ	**ಸಿಪಿಐ(ಎಂ)**	**2,342**
ಮಳವಳ್ಳಿ		
ಪಿ. ಎಂ. ನರೇಂದ್ರ ಸ್ವಾಮಿ	ಕಾಂಗ್ರೆಸ್	61,869
ಡಾ। ಅನ್ನದಾನಿ	ಜೆಡಿ(ಎಸ್)	61,331
ಮುನಿರಾಜು	ಕೆಜೆಪಿ	26,397
ಡಾ। ಮೂರ್ತಿ ಎಲ್	ಬಿಎಸ್‌ಆರ್ ಕಾಂಗ್ರೆಸ್	8,018
ಸೋಮ ಶೇಖರ್	ಜೆಡಿ(ಯು)	3,914
ಕೃಷ್ಣಮೂರ್ತಿ .ಎಂ.	ಬಿಎಸ್‌ಪಿ	2,628
ಎಸ್. ಸ್ವಾಮಿ	ಪಕ್ಷೇತರ	2031
ಕೆ. ಬಸವರಾಜು	**ಸಿಪಿಐ(ಎಂ)**	**1,868**
ಕನಕಗಿರಿ		
ಶಿವರಾಜ್ ಸಂಗಪ್ಪ ತಂಗಡಗಿ	ಕಾಂಗ್ರೆಸ್	49,451
ಬಸವರಾಜು ದಡೇಸೂಗುರು	ಕೆಜೆಪಿ	44,399
ಭವನಮಠ ಮುಕುಂದರಾವ್	ಬಿಎಸ್‌ಆರ್ ಕಾಂಗ್ರೆಸ್	28,117
ಆರ್.ಎಲ್.ಎನ್. ಲಮಾಣಿ	ಬಿಜೆಪಿ	2,948
ಹುಲುಗಪ್ಪ	**ಸಿಪಿಐ(ಎಂ)**	**1,028**

ಜನಶಕ್ತಿ
ಕನ್ನಡ ವಾರಪತ್ರಿಕೆ

ಹೊಣೆಗೇಡಿ ಸರಕಾರ ಮತ್ತು ಸಂಸದೀಯ ಇಕ್ಕಟ್ಟು

ನಮ್ಮ ಸಂವಿಧಾನ ವಿಧಿಸಿರುವ ಜವಾಬುದಾರಿಕೆಯ ಕೊಂಡಿಯನ್ನು ಈಗ ವಿಪತ್ಕಾರಕ ರೀತಿಯಲ್ಲಿ ವಿರೂಪಗೊಳಿಸಲಾಗಿದೆ. ಸಂಸದೀಯ ಕಾರ್ಯನಿರ್ವಹಣೆ ಅಸ್ತವ್ಯಸ್ತಗೊಂಡಾಗ ಕಾರ್ಯಾಂಗವನ್ನು ಅದಕ್ಕೆ ಜವಾಬ್ದಾರವಾಗಿಸುವ ಜನಾದೇಶ ವಿಫಲಗೊಳ್ಳುತ್ತದೆ. ಇದರಿಂದಾಗಿ ಜನತೆಗೆ ಸಂಸತ್ತಿನ ಜವಾಬುದಾರಿಕೆಯೂ ವಿರೂಪಗೊಳ್ಳುತ್ತದೆ. ಈ ಮೂಲಕ ನಮ್ಮ ಸಂವಿಧಾನದ ಬುನಾದಿಯೇ ಬುಡಮೇಲಾಗುತ್ತದೆ. ಈಗ ನಾವು ಕಾಣುತ್ತಿರುವ ಸಂಸದೀಯ ಇಕ್ಕಟ್ಟು, ಸಂವಿಧಾನವನ್ನು ಅನುಷ್ಠಾನಗೊಳಿಸುವ ಅಧಿಕಾರವನ್ನು ಹೊಂದಿರುವ ಅಂಗಗಳೇ ಅದನ್ನು ಬುಡಮೇಲು ಮಾಡುತ್ತಿವೆ ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತಿದೆ. ನಮ್ಮ ಸಾಂವಿಧಾನಿಕ ವ್ಯವಸ್ಥೆಯ ಇಂತಹ ವಿಪತ್ಕಾರೀ ವಿಕೃತಿಯನ್ನು ತುರ್ತಾಗಿ ಸರಿಪಡಿಸಬೇಕಾಗಿದೆ.

ಸೀತಾರಾಂ ಯೆಚೂರಿ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಸುಪ್ರಿಂ ಕೋರ್ಟ್ ಕಲ್ಲಿದ್ದಲು ಗಣಿಗಳ ಹಂಚಿಕೆಯ ಸಿಬಿಐ ತನಿಖೆಯಲ್ಲಿ ಸರಕಾರದ ಹಸ್ತಕ್ಷೇಪಕ್ಕೆ ಬಲವಾದ ಅಸಮಾಧಾನವನ್ನು ವ್ಯಕ್ತಪಡಿಸಿದೆ. ಸಿಬಿಐನ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತ ಒಂದು ಆಮೂಲಾಗ್ರವಾದ, ಉತ್ತಮ ಗುಣಮಟ್ಟದ ತನಿಖೆಯನ್ನು ನಡೆಸಬೇಕು ಎಂದು ಅದಕ್ಕೆ ಹೇಳಿದೆ. ಸಿಬಿಐ ನಿಷ್ಪಕ್ಷಪಾತದಿಂದ, "ಎಲ್ಲ ಹೊರಗಣ ಒತ್ತಡಗಳಿಂದ ಮುಕ್ತವಾಗಿ" ಕೆಲಸ ಮಾಡುವಂತೆ ಅನುವು ಮಾಡಿಕೊಡಬೇಕು ಎಂದು ಸರಕಾರಕ್ಕೆ ಅದು ಹೇಳಿದೆ. ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತ ಸುಪ್ರಿಂ ಕೋರ್ಟ್ ಸಿಬಿಐನ "ವರದಿಯ ಹೃದಯವನ್ನು ಸರಕಾರಿ ಅಧಿಕಾರಿಗಳ ಸೂಚನೆಗಳಂತೆ ಬದಲಿಸಲಾಗಿದೆ" ಎಂದಿದೆ. "ಹಲವು ಯಜಮಾನರುಗಳು ಮತ್ತು ಒಂದು ಗಿಣಿಯಿರುವ ಒಂದು ತುಚ್ಛ ಕಥಾನಕ" ಎಂಬ ಸಿಬಿಐನ ಕಾರ್ಯನಿರ್ವಹಣೆಯ ಕುರಿತಾದ ಅದರ ಒಂದು ಬಲವಾದ ಹೇಳಿಕೆ ಸಿಬಿಐ "ತನ್ನ ಯಜಮಾನನ ದನಿಯಲ್ಲಿ ಮಾತಾಡುವ ಒಂದು ಪಂಜರದ ಗಿಣಿ" ಎಂದಿದೆ.

ಮಂತ್ರಿಗಳು ಒಂದು ವರದಿಯನ್ನು ಕೇಳಬಹುದು, ಆದರೆ ನ್ಯಾಯಾಲಯ ಕುರಿತಂತೆ ಹಸ್ತಕ್ಷೇಪ ಮಾಡಲಾಗದು ಎಂಬ ಅದರ ಟಿಪ್ಪಣಿ ಕಾನೂನು ಮಂತ್ರಿ ಅಧಿಕಾರದಲ್ಲಿ ಮುಂದುವರೆಯುವುದನ್ನು ಇನ್ನಷ್ಟು ಅಸಮರ್ಥನೀಯಗೊಳಿಸಿದೆ. ಸಿಬಿಐ ವರದಿಯಲ್ಲಿ ಸರಕಾರ ಹಸ್ಯಕ್ಷೇಪ ನಡೆಸಿಲ್ಲ ಎಂದು ಈ ಹಿಂದೆ ನ್ಯಾಯಾಲಯದ ಮುಂದೆ ಹೇಳಿದ್ದ ಅಟಾರ್ನಿ ಜನರಲ್, ಈಗ ತನ್ನನ್ನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿ "ಸಿಬಿಐ ಅಧಿಕಾರಿಗಳೊಂದಿಗೆ ನನ್ನ ಭೇಟಿ ಕಾನೂನು ಮಂತ್ರಿಗಳ ಸೂಚನೆಯಂತೆ ಮಾತ್ರವೇ ನಡೆಯಿತು" ಎಂದಿದ್ದಾರೆ. ಹೀಗಿರುವಾಗ, ಕಾನೂನು ಮಂತ್ರಿಗಳು ಅಧಿಕಾರದಲ್ಲಿ ಮುಂದುವರೆಯಲು ಸಾಧ್ಯವಿಲ್ಲ, ಅವರು ಹೋಗಲೇ ಬೇಕು.


ಸಂಸತ್ ಅಧಿವೇಶನ ನಿಷ್ಕ್ರಿಯ

ಬಹುಶಃ ಸರ್ವೋಚ್ಚ ನ್ಯಾಯಾಲಯದಿಂದ ಇಂತಹ ಟಿಪ್ಪಣಿಗಳನ್ನು ನಿರೀಕ್ಷಿಸಿಯೇ ಸರಕಾರ ಸಂಸತ್ತಿನ ಅಧಿವೇಶನವನ್ನು ಮೊಟಕುಗೊಳಿಸಲು ನಿರ್ಧರಿಸಿತು. ಅದನ್ನು ಅನಿರ್ದಿಷ್ಟ ಕಾಲ ಮುಂದೂಡಲಾಗಿದೆ. ಬಜೆಟ್ ಅಧಿವೇಶನದ ಉತ್ತರಾರ್ಧ ಹೀಗೆ ಸಂಪೂರ್ಣವಾಗಿ ತೊಳೆದು ಹೋದಂತಾಗಿದೆ. ಹನ್ನೊಂದು ಬಾರಿ ಸಭೆ ಸೇರಬೇಕಾಗಿದ್ದ ಲೋಕಸಭೆ ಒಂದು ದಿನವೂ ಕೆಲಸ ಮಾಡಲಾಗಲಿಲ್ಲ. ರಾಜ್ಯಸಭೆ ದಿಲ್ಲಿಯಲ್ಲಿ ಎಪ್ರಿಲ್ 22ರಂದು ಒಂದು ಮಗುವಿನ ಮೇಲೆ ಅತ್ಯಾಚಾರದ ಮತ್ತು ಒಟ್ಟಾರೆಯಾಗಿ ಮಹಿಳೆಯರ ವಿರುದ್ಧ ಲೈಂಗಿಕ ಅಪರಾಧಗಳು ಹೆಚ್ಚುತ್ತಿರುವ ಗಂಭೀರ ಪ್ರಶ್ನೆಯ ಮೇಲೆ ಚರ್ಚೆಯನ್ನು ಆರಂಭಿಸಿತು. ಆದರೆ ಅದನ್ನು ಸಮಾಪ್ತಿಗೊಳಿಸಲಾಗಲಿಲ್ಲ. ಹನ್ನೊಂದರಲ್ಲಿ ಹತ್ತು ಸಭೆಗಳನ್ನು ಅದು ಕಳಕೊಂಡಿತು.

ಇಂತಹ ಶೋಚನೀಯ ಸನ್ನಿವೇಶ ಉಂಟಾಗಿರುವುದು ಯುಪಿಎ–2 ಸರಕಾರ ಸಾಲುಸಾಲಾಗಿ ತನ್ನ ಕಾರುಬಾರುಗಳ ಕತೆಗಳು ಹೊರಬೀಳುತ್ತಿರುವಾಗ ಅವನ್ನೆಲ್ಲ ಭಂಡತನದಿಂದ ಬದಿಗೊತ್ತಿ ಬಿಡಬೇಕು ಎಂದೇ ನಿರ್ಧರಿಸಿರುವುದರಿಂದಾಗಿ. ಬಜೆಟ್ ಅಧಿವೇಶನ ಕೇರಳದ ಸೂರ್ಯನೆಲ್ಲಿ ಲೈಂಗಿಕ ಹಗರಣದಲ್ಲಿ ಪಾತ್ರ ವಹಿಸಿದ ಆರೋಪ ಹೊತ್ತಿರುವ ರಾಜ್ಯಸಭಾ ಉಪಾಧ್ಯಕ್ಷರನ್ನು(ಆತ ಸರಕಾರದ ಭಾಗವಲ್ಲದಿದ್ದರೂ) ರಕ್ಷಿಸಿಕೊಳ್ಳಲು ಸರಕಾರ ನಡೆಸಿದ ಭಂಡ ಪ್ರಯತ್ನದೊಂದಿಗೆ ಆರಂಭವಾಯಿತು. ಸರಕಾರದ ಇಂತಹ ಭಂಡತನ 2ಜಿ ತರಂಗಾಂತರ ಹಗರಣದ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷರ ಮೂಲಕ ಅದನ್ನು ಸಂಪೂರ್ಣವಾಗಿ ಮುಚ್ಚಿ ಹಾಕುವ ಒಂದು ವರದಿಯನ್ನು ಸಿದ್ಧಪಡಿಸುವುದರೊಂದಿಗೆ ಮುಂದುವರೆಯಿತು. ಅ ವರದಿಯನ್ನು ಜೆಪಿಸಿ ಸದಸ್ಯರಿಗೆ ಕಳಿಸುವ ಮೊದಲೇ ಮಾಧ್ಯಮಗಳಿಗೆ ಸೋರಿ ಹೋಗಲು ಬಿಡಲಾಯಿತು. ಅಂತಿಮವಾಗಿ, ಲೋಕಸಭಾಧ್ಯಕ್ಷರು ಜೆಪಿಸಿಗೆ ವರದಿ ಸಲ್ಲಿಸುವ ಕಾಲಾವಕಾಶವನ್ನು ಮಳೆಗಾಲದ ಅಧಿವೇಶನದ ಅಂತ್ಯದ ವರೆಗೆ ವಿಸ್ತರಿಸಬೇಕಾಯಿತು.

ಕಾಂಗ್ರೆಸ್ ಭಂಡತನ ಕಾರಣ

ಬೆಳಕಿಗೆ ಬಂದ ಎಲ್ಲ ಭ್ರಷ್ಟಾಚಾರದ ಪ್ರಶ್ನೆಗಳಲ್ಲೂ, ಕಲ್ಲಿದ್ದಲು ಗಣಿಗಳ ಹಂಚಿಕೆ, ರೈಲ್ವೆ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳ ನೇಮಕ ಮುಂತಾದವುಗಳಲ್ಲಿ ಕಾನೂನು ಮಂತ್ರಿಗಳು ಮತ್ತು ರೈಲು ಮಂತ್ರಿಗಳು ರಾಜೀನಾಮೆ ನೀಡಬೇಕೆಂಬ ನ್ಯಾಯಬದ್ಧ ಒತ್ತಾಯಗಳನ್ನು ಒಪ್ಪಲು ಸರಕಾರ ನಿರಾಕರಿಸಿದೆ. ರೈಲು ಮಂತ್ರಿಗಳ ರಾಜೀನಾಮೆಯ ಬೇಡಿಕೆಯನ್ನು, ಆ ಬಗ್ಗೆ ತನಿಖೆಯಿನ್ನೂ ನಡೆಯುತ್ತಿದೆ ಎಂಬ ಆಧಾರದಲ್ಲಿ ತಿರಸ್ಕರಿಸಲಾಯಿತು. ಅದೇ ರೈಲು ಮಂತ್ರಿಗಳು ಮುಖ್ಯಸ್ಥರಾಗಿ ಮುಂದುವರೆಯುತ್ತಿರುವಾಗ ಸರಿಯಾದ ತನಿಖೆ ಹೇಗೆ ತಾನೇ ನಡೆಯಲು ಸಾ ಧ್ಯ? ಯಾವುದೇ ತನಿಖೆ ಸಾರ್ವಜನಿಕವಾಗಿ ನಿಷ್ಪಕ್ಷಪಾತವಾಗಿ ಕಂಡು ಬರಬೇಕು. ಕಾಂಗ್ರೆಸ್ ಪಕ್ಷದ ಭಂಡತನದಿಂದಾಗಿ ಇಂತಹ ಸಾರ್ವಜನಿಕ ವಿಶ್ವಾಸ ತಲೆಕೆಳಗಾಗಿದೆ.



ಕೃಪೆ : ದಿ. ಹಿಂದು

ರೈಲ್ವೆ ಅಧಿಕಾರಿಗಳ ಸಂಘಗಳ ಒಕ್ಕೂಟ, ಹುದ್ದೆಗಳನ್ನು ಕೊಡಿಸುವುದಕ್ಕಾಗಿ ಮಂತ್ರಿಗಳ ಅಳಿಯ ಲಂಚ ತೆಗೆದುಕೊಂಡಿದ್ದಾನೆ ಎಂಬ ವರದಿಯ ನಂತರ ಸಂಪುಟ ಕಾರ್ಯದರ್ಶಿಗಳಿಗೆ ಭಾರತೀಯ ರೈಲ್ವೆಯಲ್ಲಿ ಉನ್ನತ ಹುದ್ದೆಗಳಿಗೆ ನೇಮಕದಲ್ಲಿ ಹೇಗೆ ಯಾವುದೇ ಪಾರದರ್ಶಕತೆ ಇಲ್ಲ ಮತ್ತು ಹತ್ತು ಹಲವು ಕೈವಾಡಗಳು ನಡೆಯುತ್ತಿವೆ ಎಂಬುದರ ವಿವರಗಳಿರುವ ಮತ್ತು ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಭಾರತೀಯ ರೈಲ್ವೆಯಲ್ಲಿನ ವ್ಯವಸ್ಥೆಗಳನ್ನು ಸರಿಪಡಿಸಿ ಅದರ ಹಳೆಯ ವೈಭವವನ್ನು ಮರುಸ್ಥಾಪಿಸಬೇಕೆಂದು ಮನವಿ ಮಾಡುವ ಪತ್ರವನ್ನು ಬರೆದಿದೆ. ಅದರ ಒಂದು ಪ್ರತಿಯನ್ನು ಪ್ರಧಾನ ಮಂತ್ರಿಗಳ ಪ್ರಮುಖ ಕಾರ್ಯದರ್ಶಿಗಳಿಗೂ ಸಲ್ಲಿಸಲಾಗಿದೆ. ಆದರೂ ರೈಲು ಮಂತ್ರಿಗಳು ಇನ್ನೂ ಅಧಿಕಾರದಲ್ಲಿ ಮುಂದುವರೆಯುತ್ತಿದ್ದಾರೆ.

ಜವಾಬುದಾರಿಕೆಯ ಪ್ರಶ್ನೆ

ಸರ್ವೋಚ್ಚ ನ್ಯಾಯಾಲಯದ ಮಧ್ಯಪ್ರವೇಶದಿಂದ ಕೆಲವು ರಾಜೀನಾಮೆಗಳು ಬರಬಹುದು. ಆದರೆ ಇದು ಶಾಸನಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವೆ ಅಧಿಕಾರಗಳ ಪ್ರತ್ಯೇಕೀಕರಣದ ಸೂಕ್ಷ್ಮ ಸಮತೋಲದ ಪ್ರಶ್ನೆಯಲ್ಲೂ, ಮತ್ತು ಜನತೆಯದ್ದೇ ಸರ್ವೋಚ್ಚ ಸಾರ್ವಭೌಮತೆ ಕೇಂದ್ರ ಬಿಂದುವಾಗಿರುವ ಪ್ರಶ್ನೆಯಲ್ಲೂ ನಮ್ಮ ಸಂವಿಧಾನಿಕ ವ್ಯವಸ್ಥೆಯನ್ನು ವಿರೂಪಗೊಳಿಸುತ್ತದೆ. "ನಾವು ಜನತೆ" ಈ ಸಾರ್ವಭೌಮತೆಯನ್ನು ತಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ ಚಲಾಯಿಸುತ್ತದೆ, ಆ ಪ್ರತಿನಿಧಿಗಳು ಜನತೆಗೆ ಜವಾಬುದಾರರಾಗಿರುತ್ತಾರೆ, ಕಾರ್ಯಾಂಗ ಈ ಚುನಾಯಿತ ಪ್ರತಿನಿಧಿಗಳಿಗೆ ಜವಾಬುದಾರ ಆಗಿರುತ್ತದೆ. ಈ ಜವಾಬುದಾರಿಕೆಯ ಕೊಂಡಿಯನ್ನು ಈಗ ವಿಪತ್ಕಾರಕ ರೀತಿಯಲ್ಲಿ ವಿರೂಪಗೊಳಿಸಲಾಗಿದೆ. ಸಂಸದೀಯ ಕಾರ್ಯನಿರ್ವಹಣೆ ಅಸ್ತವ್ಯಸ್ತಗೊಂಡಾಗ ಕಾರ್ಯಾಂಗವನ್ನು ಅದಕ್ಕೆ ಜವಾಬ್ದಾರವಾಗಿಸುವ ಜನಾದೇಶ ವಿಫಲಗೊಳ್ಳುತ್ತದೆ. ಇದರಿಂದಾಗಿ ಜನತೆಗೆ ಸಂಸತ್ತಿನ ಜವಾಬುದಾರಿಕೆಯೂ ವಿರೂಪಗೊಳ್ಳುತ್ತದೆ. ಈ ಮೂಲಕ ನಮ್ಮ ಸಂವಿಧಾನದ ಬುನಾದಿಯೇ ಬುಡಮೇಲಾಗುತ್ತದೆ.

ಈಗ ನಾವು ಕಾಣುತ್ತಿರುವ ಸಂಸದೀಯ ಇಕ್ಕಟ್ಟು, ಸಂವಿಧಾನವನ್ನು ಅನುಷ್ಠಾನಗೊಳಿಸುವ ಅಧಿಕಾರವನ್ನು ಹೊಂದಿರುವ ಅಂಗಗಳೇ ಅದನ್ನು ಬುಡಮೇಲು ಮಾಡುತ್ತಿವೆ ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತಿದೆ. ಸಂಸತ್ತು ತನ್ನ ನೆಲೆಯನ್ನು ಬಿಟ್ಟುಕೊಟ್ಟಾಗ, ಕಾರ್ಯಾಂಗ ತನ್ನ ಹೊಣೆಗಾರಿಕೆಯನ್ನು ತ್ಯಜಿಸಿದಾಗ, ನ್ಯಾಯಾಂಗ 'ಸಕ್ರಿಯತೆ'ಯನ್ನು ದೂಷಿಸುವುದು ನಿರರ್ಥಕ.

ಸಂಸತ್ತಿನ ಈ ರೀತಿಯ ಸ್ತಂಭನ ನಮ್ಮ ಸಂವಿಧಾನಿಕ ವ್ಯವಸ್ಥೆಯ ಕೇಂದ್ರ

ಪುಟ 14 ಕ್ಕೆ

ಕಾಂಗ್ರೆಸ್ ಕೈಗೆ ಅಧಿಕಾರ : ಪಶ್ಚಾತ್ತಾಪ ಪಡುವ ದಿನಗಳು ದೂರವಿಲ್ಲ

ನಿತ್ಯಾನಂದ ಸ್ವಾಮಿ

14ನೇ ವಿಧಾನಸಭೆಗಾಗಿ ನಡೆದ ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಸರಳ ಬಹುಮತ ನೀಡಿದ್ದಾರೆ. ಈ ಸ್ಪಷ್ಟ



ಜನಾದೇಶದಿಂದಾಗಿ ಬಿಜೆಪಿಯ 5ವರ್ಷಗಳ ದುರಾಡಳಿತಕ್ಕೆ ತೆರೆ ಬಿದ್ದಂತಾಗಿದೆ. ಕಳೆದ ಬಾರಿ 110 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿಗೆ ಈ ಸಲ ಅದರ ಅರ್ಧದಷ್ಟು ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗಿಲ್ಲ. ಬಿಜೆಪಿಯ ಈ ಹೀನಾಯ ಸೋಲಿಗೆ ಅದರ ಸ್ವಯಂಕೃತ ಅಪರಾಧಗಳೇ ಕಾರಣವಾಗಿವೆ. 'ಆಪರೇಷನ್ ಕಮಲ' ಎಂಬ ಬಿಜೆಪಿಯ ಹೊಸ ವಿಕೃತ ರಾಜಕೀಯ ಅವಿಷ್ಕಾರದಿಂದ ಆರಂಭಗೊಂಡು, ಗಣಿ ಲೂಟಿ, ಭೂಕಬಳಿಕೆ, ಡಿನೋಟಿಫಿಕೇಷನ್, ಲಂಚ, ಲೈಂಗಿಕ ಹಗರಣಗಳು, ಸದನದಲ್ಲೇ ಬ್ಲೂ ಫಿಲಂ ವೀಕ್ಷಣೆ, ಅಭಿವೃದ್ಧಿ ಕಾರ್ಯಗಳ ಕಡೆಗಣನೆ, ಸಂತ್ರಸ್ತರಿಗೆ ನೆರವಾಗದಿರುವುದು, ಕೋಮು ಗಲಭೆಗಳಿಗೆ ಕುಮ್ಮಕ್ಕು, ಮುಖ್ಯಮಂತ್ರಿಗಳ ಬದಲಾವಣೆ, ಅಧಿಕಾರಕ್ಕಾಗಿ ಕಿತ್ತಾಟ ಮುಂತಾದ ಪ್ರಕರಣಗಳಿಂದ ರೋಸಿ ಹೋಗಿದ್ದ ಜನ ಚುನಾವಣೆಯ ದಾರಿಯನ್ನೇ ಕಾಯುತ್ತಿದ್ದರು.


ಕೋಮುವಾದಿ ಬಿಜೆಪಿಯನ್ನು ಸೋಲಿಸಿದ ಮತದಾರರು ಅಭಿನಂದನಾರ್ಹರು :

ರಾಜ್ಯದಲ್ಲಿ ಬಿಜೆಪಿಯ ವಿಷಪೂರಿತ ಬೇರುಗಳು ಎಲ್ಲಾ ಜನಾಂಗಗಳ ಶಾಂತಿಯ ತೋಟವಾಗಿರುವ ಕರ್ನಾಟಕದ ನೆಲದಲ್ಲಿ ಆಳಕ್ಕೆ ಇಳಿಯುವ ಮೊದಲೇ ಅದನ್ನು ಬೇರುಸಹಿತ ಕಿತ್ತುಹಾಕಲು ನಡೆದಿರುವ ಪ್ರಯತ್ನವು ಸ್ವಾಗತಾರ್ಹವಾಗಿದೆ. ರಾಜ್ಯದಲ್ಲಿ ಶಾಂತಿ ಸಾಮರಸ್ಯ ಉಳಿಯುವಂತಾಗಿ ವಿವಿಧ ಮತಧರ್ಮಗಳ ಜನ ಪ್ರೀತಿ ವಿಶ್ವಾಸದಿಂದ ಬಾಳಬೇಕು ಎನ್ನುವವರೆಲ್ಲರೂ ಬಿಜೆಪಿಯ ಈ ಸೋಲನ್ನು ಸ್ವಾಗತಿಸದೆ ಇರಲಾರರು. 'ಹಿಂದುತ್ವದ' ಪ್ರಯೋಗಶಾಲೆ ಎಂಬ ಕುಖ್ಯಾತಿಯ ಕರಾವಳಿ ಜಿಲ್ಲೆಗಳಲ್ಲಿ ಮತದಾರರು ಕೋಮುವಾದಿ ಬಿಜೆಪಿಗೆ ಸರಿಯದ ಪಾಠ ಕಲಿಸಿದ್ದಾರೆ. ಬಿಜೆಪಿ ಸರ್ಕಾರದ ಅಘೋಷಿತ ಬೆಂಬಲದಿಂದ ಸಂಘ ಪರಿವಾರದ ಪುಂಡರು ನಡೆಸುತ್ತಿದ್ದ ಪುಂಡಾಟಿಕೆಯಿಂದ ಕರಾವಳಿ ಜಿಲ್ಲೆಗಳ ಶಾಂತಿಪ್ರಿಯ ಜನ ಕಂಗೆಟ್ಟಿದ್ದರು. ಕ್ರೈಸ್ತ ಚರ್ಚುಗಳ ಮೇಲೆ, ಮುಸ್ಲಿಂ ಮಸೀದಿಗಳ ಮೇಲೆ ಆಗಾಗ ನಡೆಯುತ್ತಿದ್ದ ದಾಳಿಗಳಿಂದಾಗಿ ಸಮಾಜದಲ್ಲಿ ಶಾಂತಿ ಸೌಹಾರ್ದತೆಗೆ ಧಕ್ಕೆ ಆಗುತ್ತಿರುವುದನ್ನು ಹೃದಯವಂತಿಕೆಯುಳ್ಳ ಬಹುಸಂಖ್ಯಾತ ಹಿಂದುಗಳು ಒಪ್ಪುತ್ತಿರಲಿಲ್ಲ. ವಿಭಿನ್ನ ಕೋಮಿನ ಯುವಕ ಯುವತಿಯರು ಪರಸ್ಪರ ಮಾತನಾಡುವುದನ್ನು, ಒಟ್ಟಿಗೆ ಪ್ರಯಾಣ ಮಾಡುವುದನ್ನು ತಡೆಯಲು ಕಾನೂನನ್ನು ಕೈಗೆತ್ತಿಕೊಳ್ಳುವ ನೈತಿಕ ಪೊಲೀಸ್ ಗಿರಿಯಿಂದ ಕರಾವಳಿ ಜಿಲ್ಲೆಗಳ ಸದಭಿಪ್ರಾಯದ ಜನತೆ ಬೇಸತ್ತಿದ್ದರು. ದೇಶಿಯ ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ಇದೇ ಪುಂಡರು ಪಬ್‌ಗಳಿಗೆ, ಹೋಂ ಸ್ಟೇಗಳಿಗೆ ನುಗ್ಗಿ ಯುವತಿಯರ ಮೇಲೆ ಹಲ್ಲೆಮಾಡುವ ಅವರ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸುವ ಘಟನೆಗಳಿಂದ ಕರಾವಳಿ ಜಿಲ್ಲೆಗಳ ಜನ ಅವಮಾನಕ್ಕೊಳಗಾಗಿದ್ದರು. ಇದೆಲ್ಲದಕ್ಕೆ ತೆರೆಯೆಳೆಯಲು ಅವರು ಚುನಾವಣೆಗಾಗಿ ಕಾಯುತ್ತಿದ್ದರು. ಕರಾವಳಿ ಜಿಲ್ಲೆಗಳಿಗೆ ಕೆಟ್ಟ ಹೆಸರು ಬರಲು ಕಾರಣವಾದ ಬಿಜೆಪಿ ಸರ್ಕಾರದ ವಿರುದ್ಧ ಇದುವರೆಗೆ ಬಿಜೆಪಿಯನ್ನು ಬೆಂಬಲಿಸುತ್ತಾ ಬಂದ ಜನಗಳೇ ಸ್ಪಷ್ಟವಾದ ತೀರ್ಪನ್ನು ನೀಡಿದ್ದಾರೆ. ಬಿಜೆಪಿ ಪಿಡುಗನ್ನು ತೊಲಗಿಸಿದ ರಾಜ್ಯದ ಮತದಾರರು ನಿಜವಾಗಿಯೂ ಅಭಿನಂದನಾರ್ಹರು.

ಗುಜರಾತ್ ನರಮೇಧದ ಖ್ಯಾತಿಯ ನರೇಂದ್ರ ಮೋದಿ ಅವರಿಂದ ರಾಜ್ಯದಲ್ಲಿ ಯಾವ ಮೋಡಿಯೂ ನಡೆಯಲಿಲ್ಲ. ಮೋದಿಯವರು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದು ಬಿಜೆಪಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚಾಗಿದೆ. ಕರ್ನಾಟಕದ ಮತದಾರರ ಮೇಲೆ ಪ್ರಭಾವ ಬೀರಲು ವಿಫಲರಾದ ಮೋದಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನಗಳನ್ನು ಗೆಲ್ಲಿಸಿಕೊಟ್ಟು ಪ್ರಧಾನ ಮಂತ್ರಿಯಾಗುವ ಕನಸು ಭಗ್ನವಾಗಿದೆ.

ಬಿಜೆಪಿಯನ್ನು ಕಿತ್ತುಹಾಕುವುದು ಅಷ್ಟೇನು ಸುಲಭದ ಕೆಲಸ ಆಗಿರಲಿಲ್ಲ. ಆ ಕೆಲಸವನ್ನು ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದ ಯಡಿಯೂರಪ್ಪನವರೇ ಮಾಡಿರುವುದು ಗಮನಾರ್ಹ ಸಂಗತಿ. ಯಡಿಯೂರಪ್ಪನವರ ಉದ್ದೇಶ ಏನೇ ಇರಲಿ. ಬಿಜೆಪಿ ಎಂಬ ವಿಷವೃಕ್ಷಕ್ಕೆ ಬಲವಾದ ಕೊಡಲಿಯೇಟು ನೀಡಿದ್ದಾರೆ. ಮುಂದಿನ ಬೆಳವಣಿಗೆಗಳನ್ನು ಕಾದು ನೋಡಬೇಕಾಗಿದೆಯಷ್ಟೆ. ಯಡಿಯೂರಪ್ಪ ಅವರನ್ನು ವಾಪಸ್ ಕರೆತರಲು ಬಿಜೆಪಿ ಪ್ರಯತ್ನ ಮಾಡಬಹುದು. ಆದರೆ ಪ್ರಸಕ್ತ ಸಂದರ್ಭದಲ್ಲಿ ಬಿಜೆಪಿಗೆ ಬಲವಾದ ಏಟು ಬಿದ್ದಿದೆ. ಲೋಕಸಭಾ ಚುನಾವಣೆಗಳು ಬರುವಷ್ಟರಲ್ಲಿ ರಾಜ್ಯ ಬಿಜೆಪಿ ಇನ್ನಷ್ಟು ದುರ್ಬಲವಾಗದೆ ಇರಲಾರದು. ಆದರೆ, ಆರ್.ಎಸ್.ಎಸ್. ಬೆಂಬಲಿತ ಬಿಜೆಪಿಯ ಸಾಮರ್ಥ್ಯವನ್ನು ಎಂದೂ ಕಡೆಗಣಿಸಲಾಗದು. ಅದರ ರಾಜಕೀಯ ಚಲನವಲನಗಳ ಬಗ್ಗೆ ಎಚ್ಚರಿಕೆ ವಹಿಸುವುದು ಅಗತ್ಯವಿದೆ. ಅದರ ಫ್ಯಾಸಿಸ್ಟ್ ಸಿದ್ಧಾಂತದ ವಿರುದ್ಧ ನಿರಂತರವಾದ ಸೈದ್ಧಾಂತಿಕ ಸಂಘರ್ಷ ನಡೆಯಬೇಕಾಗಿದೆ.

ದುರಾಡಳಿತ ವಿರೋಧಿ ಅಲೆಯಿಂದ ಕಾಂಗ್ರೆಸಿಗೆ ಲಾಭ :



ಬಿಜೆಪಿಯ ಐದು ವರ್ಷಗಳ ಆಡಳಿತ ವೈಫಲ್ಯ ಮತ್ತು ಭ್ರಷ್ಟಾಚಾರದ ಎದುರಲ್ಲಿ ಒಂದು ವಿರೋಧ ಪಕ್ಷವಾಗಿ ಕೆಲಸಮಾಡುವ ಸಾಮರ್ಥ್ಯವನ್ನೇ ಪ್ರದರ್ಶಿಸದ ಕಾಂಗ್ರೆಸ್ ಕೈಗೆ ಅಧಿಕಾರ ಹಸ್ತಾಂತರವಾಗಿದೆ. ಕಳೆದ ಚುನಾವಣೆಯಲ್ಲಿ ಕೇವಲ 80 ಸ್ಥಾನಗಳನ್ನು ಪಡೆದಿದ್ದ ಕಾಂಗ್ರೆಸ್ ಈ ಸಲ 121 ಸ್ಥಾನಗಳನ್ನು ಪಡೆದು ಸ್ಪಷ್ಟ ಬಹುಮತ ಗಿಟ್ಟಿಸಿಕೊಂಡದ್ದು ತನ್ನ ಸ್ವಂತಸಾಧನೆ ಎಂದುಕೊಳ್ಳಬಹುದು, ಕಾಂಗ್ರೆಸ್ ಮುಖಂಡತ್ವ ಹಾಗೇ ಯೋಚಿಸುತ್ತಿರುವುದು ಅವರ ಮೂರ್ಖತನದ ಪರಮಾವಧಿ. ಕಾಂಗ್ರೆಸಿಗೆ ಅನಾಯಾಸವಾಗಿ 121 ಸ್ಥಾನಗಳು ದಕ್ಕಿದ್ದು ರಾಜ್ಯದ ಜನತೆಯಲ್ಲಿ ಬಿಜೆಪಿ ಆಡಳಿದ ಬಗ್ಗೆ ತುಂಬಿಕೊಂಡಿದ್ದ ಅತೃಪ್ತಿಯ ಪ್ರಮಾಣವನ್ನು ತೋರಿಸುತ್ತದೆಯೇ ಹೊರತು ಕಾಂಗ್ರೆಸಿನ ಪರವಾದ ಅಲೆಯನ್ನಲ್ಲ. ಕಾಂಗ್ರೆಸ್ ಪರವಾಗಿ ಅಷ್ಟೊಂದು ದೊಡ್ಡ ಅಲೆ ಇದ್ದಿದ್ದರೆ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಾ.ಜಿ. ಪರಮೇಶ್ವರ್ ಸೋಲುತ್ತಿರಲಿಲ್ಲ. ಇನ್ನುಳಿದ ಅರ್ಧದಷ್ಟು ಅಭ್ಯರ್ಥಿಗಳು ಸೋಲುತ್ತಿರಲಿಲ್ಲ. ಬಿಜೆಪಿಯನ್ನು ಅದರ ದುರಾಡಳಿತಕ್ಕಾಗಿ ಶಿಕ್ಷಿಸಲು ಆತುರರಾಗಿದ್ದ ರಾಜ್ಯದ ಮತದಾರರಿಗೆ ಬೇರೆ ಯಾವ ಪರ್ಯಾಯ ಲಭ್ಯವಾಗದ ಕಾರಣಕ್ಕಾಗಿ ಕಾಂಗ್ರೆಸಿಗೆ ಮತ ನೀಡುವ ಮೂಲಕ ತಮ್ಮ ಗುರಿಸಾಧಿಸಿದ್ದಾರೆ. ಈ ಸಲದ ಆಡಳಿತ ವಿರೋಧಿ ಅಲೆ ಸಾಮಾನ್ಯ ಸ್ವರೂಪದ್ದಾಗಿರಲಿಲ್ಲ ಎಂಬುದನ್ನೇ ಈ ಜನಾದೇಶ ಸ್ಪಷ್ಟಪಡಿಸುತ್ತದೆ. ಇದು ಬಹುತೇಕ ನಿರೀಕ್ಷಿತವೂ ಆಗಿತ್ತು. ಅದು ಬಿಜೆಪಿ ವಿರೋಧಿ ಅಲೆ ಆಗಿತ್ತೇ ಹೊರತು ಕಾಂಗ್ರೆಸ್ ಪರವಾದ ಅಲೆ ಆಗಿರಲಿಲ್ಲ.

ಕರ್ನಾಟಕ ಚುನಾವಣೆಯ ಫಲಿತಾಂಶ ಸ್ಪಷ್ಟವಾಗಿ ಭಾರತೀಯ ಜನತಾ ಪಕ್ಷದ ಸೋಲನ್ನು ಬಿಂಬಿಸುತ್ತದೆಯೇ ಹೊರತು ಕಾಂಗ್ರೆಸಿನ ವಿಜಯವನ್ನಲ್ಲ. ಬಿಜೆಪಿಗೆ 2008ರ ಚುನಾವಣೆಯಲ್ಲಿ ಶೇ. 34 ರಷ್ಟು ಮತಗಳು ದೊರಕಿದ್ದವು. ಈಸಲ ಬಿಜೆಪಿಗೆ ಕೇವಲ ಶೇ.14 ರಷ್ಟು ಮತಗಳು ಸಿಕ್ಕಿವೆ. ಅದು ಶೇ.20 ರಷ್ಟು ಮತಗಳನ್ನು ಕಳೆದುಕೊಂಡಿದೆ. ಇದು ಬಿಜೆಪಿ ವಿರುದ್ಧ ಜನರ ಅತೃಪ್ತಿಯ ಪ್ರಮಾಣವನ್ನು ಸೂಚಿಸುತ್ತದೆ. ಆದರೆ ಕಾಂಗ್ರೆಸ್ ಬಗ್ಗೆ ಜನರ ಒಲವು ಆ ಪ್ರಮಾಣದಲ್ಲಿ ಹೆಚ್ಚಾಗಿರುವುದು ಕಂಡು ಬರುವುದಿಲ್ಲ. ಕಾಂಗ್ರೆಸ್ 2008 ರಲ್ಲಿ ಶೇ. 35 ರಷ್ಟು ಮತಗಳನ್ನು ಪಡೆದಿತ್ತು. ಈ ಸಲ ಅದು ಗಳಿಸಿದ ಮತಗಳು ಕೇವಲ ಶೇ.2 ರಷ್ಟು ಮಾತ್ರ ಹೆಚ್ಚಾಗಿವೆ. ಇದು ಕಾಂಗ್ರೆಸ್ ಪರವಾದ ಯಾವ ಅಲೆಯನ್ನೂ ಸೂಚಿಸುವುದಿಲ್ಲ. ಬಿಜೆಪಿ ವಿರೋಧಿ ಮತಗಳಲ್ಲಿ ಒಂದು ದೊಡ್ಡ ಪಾಲು ಕೆಜೆಪಿ ಮತ್ತು ಬಿಎಸ್‌ಆರ್ ಕಾಂಗ್ರೆಸಿಗೆ ಹೋಗಿದೆ. ಸುಮಾರು 35 ಕ್ಷೇತ್ರಗಳಲ್ಲಿ ಕೆಜೆಪಿ ಎರಡನೇ ಸ್ಥಾನ ಪಡೆದಿದೆ. 23 ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕೆಜೆಪಿ ನಡುವೆ ಮತಗಳ ವಿಭಜನೆ ಆಗಿರುವುದರಿಂದ ಕಾಂಗ್ರೆಸಿಗೆ ಲಾಭವಾಗಿದೆ. ಒಟ್ಟಾರೆಯಾಗಿ ಬಿಜೆಪಿಗೆ ಆಗಿರುವ ಹಾನಿಯಿಂದಾಗಿ ಕಾಂಗ್ರೆಸಿಗೆ ಪ್ರಯೋಜನವಾಗಿದೆ. ಆದರೆ ಬಿಜೆಪಿ ವಿರೋಧಿ ಮತಗಳನ್ನು ದೊಡ್ಡ ಪ್ರಮಾಣದಲ್ಲಿ ಸೆಳೆಯಲು ಕಾಂಗ್ರೆಸ್ ವಿಫಲವಾಗಿದೆ.

ಪಶ್ಚಾತ್ತಾಪ ಪಡುವ ದಿನಗಳು ದೂರವಿಲ್ಲ :

ಪ್ರಜಾಪ್ರಭುತ್ವದಲ್ಲಿ ಮತದಾರರೇ ಪ್ರಭುಗಳು. ಅವರ ಕೈಯಲ್ಲಿ ಇರುವ ಅಧಿಕಾರವೇ ಪರಮಾಧಿಕಾರ. ಮತದಾರ ಪ್ರಭುಗಳು ಆದೇಶ ನೀಡದ್ದಾರೆ. 2013 ರ ಈ ಜನಾದೇಶ ಬಿಜೆಪಿ ಹಾಗೂ ಅದರಿಂದ

→

ಜನಶಕ್ತಿ
ಕನ್ನಡ ವಾರಪತ್ರಿಕೆ

→

ಸಿಡಿದು ಬಂದ ಕೆಜೆಪಿ ಮತ್ತು ಬಿಎಸ್‌ಆರ್ ಕಾಂಗ್ರೆಸ್ ಪಕ್ಷಗಳನ್ನು ಸಾರಸಗಟಾಗಿ ತಿರಸ್ಕರಿಸಿ ಸುಮಾರು 9 ವರ್ಷಗಳ ನಂತರ ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಿದೆ. ಮತದಾರ ಪ್ರಭುಗಳ ಆದೇಶಕ್ಕೆ ಎಲ್ಲರೂ ತಲೆಬಾಗಲೇಬೇಕು.


ಆದರೆ, ಜನಾದೇಶವೂ ಸಹ ಸಾರ್ವಜನಿಕ ಚರ್ಚೆಗೆ ಹೊರತಾಗಿಲ್ಲ. ಇಂತಹ ಚರ್ಚೆಗಳಿಂದಲೇ ಮತದಾರರು ಪ್ರಬುದ್ಧರಾಗುತ್ತಾ ಹೋಗುತ್ತಾರೆ. ಒಂದು ಸ್ಥಿರ ಸರ್ಕಾರವನ್ನು ಅಸ್ತಿತ್ವಕ್ಕೆ ತರುವುದಕ್ಕಾಗಿ ಜನ ಕಾಂಗ್ರೆಸಿಗೆ ಮತಹಾಕಿದ್ದಾರೆ ಎಂಬ ಅಭಿಪ್ರಾಯವು ಈಗ ತುಂಬಾ ಚಲಾವಣೆಯಲ್ಲಿದೆ. ಒಂದು ಸ್ಥಿರ ಸರ್ಕಾರವನ್ನು ಅಧಿಕಾರಕ್ಕೆ ತರುವ ಆತುರದಲ್ಲಿ 9 ವರ್ಷಗಳ ಹಿಂದೆ ತಿರಸ್ಕರಿಸಿದ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವುದಲ್ಲಿ ಯಾವ ಜಾಣ್ಮೆ ಇದೆ? 9 ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ...ಲಾಗಿದೆಯಾ? ಅದರ ಧೋರಣೆಗಳು ಬದಲಾಗಿವೆಯಾ?

ಇತ್ತ ಕರ್ನಾಟಕದಲ್ಲಿ ಭ್ರಷ್ಟ ಬಿಜೆಪಿಯನ್ನು ಸೋಲಿಸಿ ಸ್ಪಷ್ಟ ಬಹುಮತ ಪಡೆದಿದ್ದೇವೆ ಎಂದು ಕಾಂಗ್ರೆಸಿಗರು ಸಂಭ್ರಮಿಸುತ್ತಿದ್ದಾಗ ಅತ್ತ ದೆಹಲಿಯಲ್ಲಿ ಕಾಂಗ್ರೆಸ್ ನಾಯಕರು ಹೊಸ ಹಗರಣಗಳಲ್ಲಿ ಸಿಕ್ಕಿಹಾಕಿಕೊಂಡ ಕೇಂದ್ರದ ಇಬ್ಬರು ಮಂತ್ರಿಗಳನ್ನು ರಕ್ಷಿಸಲು ಹೆಣಗಾಡುತ್ತಿದ್ದರು. ಕಲ್ಲಿದ್ದಲು ಗಣಿಗಳ ಹಂಚಿಕೆಯ ಸಿಬಿಐ ತನಿಖೆಯಲ್ಲಿ ಹಸ್ತಕ್ಷೇಪ ಮಾಡಿದ ಕಾನೂನು ಮಂತ್ರಿ ಅಶ್ವನಿಕುಮಾರ್ ಅವರನ್ನು ಸುಪ್ರಿಂ ಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿತ್ತು. ರೈಲ್ವೆ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳ ನೇಮಕಾತಿಯಲ್ಲಿ ರೈಲ್ವೆ ಮಂತ್ರಿ ಪವನ್ ಕುಮಾರ್ ಬನ್ಸಲ್ ಅವರ ಸೋದರಳಿಯ 10 ಕೋಟಿ ರೂ. ಲಂಚ ಪಡೆಯುತ್ತಿರುವಾಗ ಸಿಕ್ಕಿಬಿದ್ದಿದ್ದ. ಈ ಇಬ್ಬರೂ ಮಂತ್ರಿಗಳು ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರಿಗೆ ತುಂಬಾ ...ರದವರು. ಈ ಇಬ್ಬರು ಮಂತ್ರಿಗಳನ್ನು ಕೇಂದ್ರ ಸಚಿವ ಸಂಪುಟದಿಂದ ವಜಾಮಾಡಬೇಕೆಂದೂ, ಪ್ರಧಾನಮಂತ್ರಿ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬೇಕೆಂದು ವಿರೋಧ ಪಕ್ಷಗಳು ಒತ್ತಾಯಿಸುತ್ತಿರುವಾಗ ಕರ್ನಾಟಕದಲ್ಲಿ ಅದೇ ಭ್ರಷ್ಟ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ಹಸ್ತಾಂತರವಾಗುತ್ತಿರುವುದು ವಿಪರ್ಯಾಸವಲ್ಲವೇ? ದಿನಕ್ಕೊಂದರಂತೆ ಕೇಂದ್ರ ಕಾಂಗ್ರೆಸ್ ಸರ್ಕಾರದ ಹಗರಣಗಳು ಒಂದು ಇನ್ನೊಂದನ್ನು ಮೀರಿಸುವಂತೆ ಪ್ರಕಟಗೊಳ್ಳುತ್ತಿದ್ದರೂ ಕರ್ನಾಟಕದ ಜನತೆಗೆ ದೂರದ ದೆಹಲಿ ಕಣ್ಣಿಗೆ ನುಣ್ಣಗೆ ಆಗಿದೆ. ಅಲ್ಲಿ ನಡೆಯುತ್ತಿರುವ ಲೂಟಿಯ ಕಲ್ಪನೆಯೇ ನಮ್ಮ ಕರ್ನಾಟಕದ ಜನತೆಗಿಲ್ಲ. ಒಂದು ಬಲಿಷ್ಠವಾದ ಲೋಕಪಾಲ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರಲು ಅದು ಯಾಕೆ ಹಿಂಜರಿಯುತ್ತಿದೆ ಎಂಬುದನ್ನು ಕರ್ನಾಟಕದ ಜನತೆಗೆ ಅರ್ಥಮಾಡಿಕೊಳ್ಳಲು ...ವಾಗುತ್ತಿಲ್ಲ. ದೇಶದ ಒಳಗೂ ...ರಗೂ ಬಚ್ಚಿಡಲಾದ ಕಪ್ಪು ಹಣವನ್ನು ಹೊರತೆಗೆಯಲು ಅದು ತಯಾರಿಲ್ಲ ಯಾಕೆ? ಚುನಾವಣೆಗಳಲ್ಲಿ ಹಣಬಲ ಪ್ರಯೋಗವನ್ನು ತಡೆಯಲು ಯಾಕೆ ಅದು ದೃಢವಾದ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತಿಲ್ಲ? ಕೊಬ್ಬಿದ ಕೋಟ್ಯಾಧಿಪತಿಗಳ ಮೇಲೆ ಹೆಚ್ಚೆಚ್ಚು ತೆರಿಗೆಗಳನ್ನು ಹಾಕಿ ಆ ಹಣವನ್ನು ದೇಶದ ಬಡತನ ನಿವಾರಣೆಗೆ ಉಪಯೋಗಿಸುವ ಬದಲು ಆ ತೆರಿಗೆ ರಿಯಾಯ್ತಿಗಳನ್ನು ಯಾಕೆ ನೀಡುತ್ತಾರೆ? ಅನ್ನದಾತ ರೈತರನ್ನು ಆತ್ಮಹತ್ಯೆಗೆ ದೂಡುವ, ಬಡವರು ಸಮರ್ಪಕ ಆಹಾರವಿಲ್ಲದೆ ಅಪೌಷ್ಟಿಕತೆಯಿಂದ ನರಳುವಂತೆ ಮಾಡುವ, ಗುತ್ತಿಗೆ, ಹೊರಗುತ್ತಿಗೆ ಕ್ರಮಗಳಿಂದ ಕಾರ್ಮಿಕರಿಗೆ ಕಾನೂನುಬದ್ಧವಾಗಿ ಸಿಗಬೇಕಾದ ಸಂಬಳ ಸವಲತ್ತುಗಳನ್ನು ಕಡಿತಗೊಳಿಸುವ, ದೇಶದ ಬೆಲೆಬಾಳುವ ಆಸ್ತಿ ಆಗಿರುವ ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಖಾಸಗಿ ಬಂಡವಾಳಗಾರರಿಗೆ ಬಲಿಕೊಡುವ, ಚಿಲ್ಲರೆ ವ್ಯಾಪಾರದಲ್ಲಿಯೂ ವಿದೇಶಿ ನೇರ ಬಂಡವಾಳಕ್ಕೆ ಪ್ರವೇಶ ನೀಡಿ ಲಕ್ಷಾಂತರ ಸಣ್ಣ ವ್ಯಾಪಾರಸ್ಥರನ್ನು ಬೀದಿಗೆ ತಳ್ಳುವ, ಉಗ್ರಾಣಗಳಲ್ಲಿ ದವಸದಾನ್ಯಗಳು ರಾಶಿಬಿದ್ದು ಇಲಿ ಹೆಗ್ಗಣಗಳ ಪಾಲಾಗುತ್ತಿದ್ದರೂ ಅದನ್ನು ಜನರ ಹಸಿವು ಹಿಂಗಿಸಲು ನೀಡದಿರುವ, ಆರೋಗ್ಯ, ಶಿಕ್ಷಣದಂತಹ ವಲಯಗಳನ್ನು ದುಬಾರಿಗೊಳಿಸುವ, ಬಡವರ ವಸತಿಯ ಹಕ್ಕನ್ನು ನಿರಾಕರಿಸುವ,



ಸಬ್ಸಿಡಿಗಳನ್ನು ಕಡಿತಮಾಡುವ, ಮುಂದುವರೆಸಲಾಗುತ್ತಿರುವ ಸಬ್ಸಿಡಿಗಳ ಹಣವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವ ಮೋಸದ ಧೋರಣೆಗಳನ್ನು ಕೈಬಿಡಲು ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಮುಂದಾಗುವುದಿಲ್ಲ ಎಂದು ಖಚಿತವಾಗಿರುವಾಗ ಅದೇ ಕಾಂಗ್ರೆಸ್ ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರುವುದರಲ್ಲಿ ಬಡವರಿಗೆ, ಜನಸಾಮಾನ್ಯರಿಗೆ ಏನು ಪ್ರಯೋಜನ? ಬಿಜೆಪಿಗೆ ಜನ ಕಲಿಸಿದ ಪಾಠದಿಂದ ಕಾಂಗ್ರೆಸ್ ಏನಾದರೂ ಕಲಿಯಲಿದೆಯೆ? ವಿಶ್ವಹಣಕಾಸು ಬಂಡವಾಳ ಪ್ರಾಯೋಜಿತ ನವ ಉದಾರೀಕರಣ ನೀತಿಗಳಿಂದ ರಾಜ್ಯ ಕಾಂಗ್ರೆಸ್ ಸರ್ಕಾರ ದೂರ ಉಳಿಯಲು ಸಾಧ್ಯವೇ? ಸಾಧ್ಯವಿಲ್ಲ.

ಬಿಜೆಪಿಗೆ ಜನರು ಕೊಟ್ಟ ಶಿಕ್ಷೆಯನ್ನು ನೋಡಿ ಕಾಂಗ್ರೆಸಿಗರು ತಮ್ಮ ಸ್ವಾರ್ಥ ಸಾಧನೆಗಾಗಿ ಹೆಚ್ಚು ಪ್ರಬುದ್ಧ ತಂತ್ರಗಳಿಗೆ



ಮೊರೆ ಹೋಗಬಹುದು. ಲೂಟಿ ಮಾಡಿದರೂ ಸಿಕ್ಕಿಹಾಕಿಕೊಳ್ಳಬಾರದು! ಸಿಕ್ಕಿಹಾಕಿಕೊಂಡರೂ ದಾಖಲೆಗಳು ಸಿಕ್ಕಿರಬಾರದು! ಕೊಳ್ಳೆ ಹೊಡೆದ ದುಡ್ಡಿನಲ್ಲಿ ಮಠಮಾನ್ಯಗಳಿಗೆ ದಾನಮಾಡುವುದರಲ್ಲಿ ಬಿಜೆಪಿಯನ್ನೂ ಮೀರಬಹುದು. ಈ ರೀತಿಯಾಗಿ ಅಷ್ಟೆ ಕಾಂಗ್ರೆಸ್ ಬಿಜೆಪಿಯಿಂದ ಪಾಠ ಕಲಿಯಬಹುದು.

ಕರ್ನಾಟಕದ ಕಾಂಗ್ರೆಸಿಗರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು ಎಲ್ಲಿ ಸಾದ-... ಮುಖ್ಯ ಮಂತ್ರಿಯನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವೂ ಸಹ ಚುನಾಯಿತ ಶಾಸಕರಿಗಿಲ್ಲ. ಕರ್ನಾಟಕದ ಕಾಂಗ್ರೆಸಿಗರ ಜುಟ್ಟು ದೆಹಲಿ ಕೈಗಳಲ್ಲಿ ಭದ್ರ! ದೆಹಲಿ ಕಾಂಗ್ರೆಸಿಗರ ಜುಟ್ಟು ಅಮೆರಿಕ ದೊಡ್ಡಣ್ಣನ ಕೈಗಳಲ್ಲಿ ಸುಭದ್ರ! ಸಾಮ್ರಾಜ್ಯ ಶಾಹಿ ಶಕ್ತಿಗಳ ಜೀತಕ್ಕೆ ನಿಂತಿರುವ ನಮ್ಮ ಆಳುವ ವರ್ಗಗಳು!

ಆದ್ದರಿಂದ, ರಾಜ್ಯದಲ್ಲಿ ಕಾಂಗ್ರೆಸಿಗೆ ಮತ್ತೆ ಅಧಿಕಾರ ನೀಡಿರುವ ತಪ್ಪಿಗೆ ಪಶ್ಚಾತ್ತಾಪ ಪಡುವ ದಿನಗಳು ದೂರವಿಲ್ಲ. ಹದ್ದುಮೀರಿ ಏರುತ್ತಿರುವ ಬೆಲೆಗಳು, ಉಲ್ಬಣಗೊಳ್ಳುತ್ತಿರುವ ನಿರುದ್ಯೋಗ, ದಿವಾಳಿಯಾಗುತ್ತಿರುವ ರೈತರು, ಹೊಟ್ಟೆಪಾಡಿಗಾಗಿ ಊರೂರು ಅಲೆಯುತ್ತಿರುವ ಭೂರಹಿತ ಬಡವರು, ಇಡೀ ದಿನ ದುಡಿದರೂ ಹೊಟ್ಟೆ ತುಂಬಿಸಿಕೊಳ್ಳಲಾಗದ ಅಸಂಘಟಿತ ವಲಯದ ಕಾರ್ಮಿಕರು ನಿತ್ಯ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಮಹಿಳೆಯರು, ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು, ಇವರ ಬದುಕಿನ ಸಮಸ್ಯೆಗಳು ಕಾಂಗ್ರೆಸ್ ಆಡಳಿತದಲ್ಲಿ ಹೆಚ್ಚಾಗಬಹುದಷ್ಟೆ ಹೊರತು ಕಡಿಮೆಯಾಗಲಾರವು. ಸಹಿಸಲಾಗದೆ ಜನ ಪ್ರತಿಭಟಿಸಿದರೆ ಕಾಂಗ್ರೆಸ್ ಆಡಳಿತದ ಪೊಲೀಸರು ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿಸಲು ಮುಂದಾಗದೆ ಇರಲಾರರು.

ಜೆಡಿಎಸ್‌ಗೆ ಪಾಠ ಕಲಿಸಿದ ಫಲಿತಾಂಶ :

ಜೆಡಿಎಸ್ ಬೆಂಬಲ ಇಲ್ಲದೆ ಈ ಸಲ ಯಾವ ಪಕ್ಷವೂ ಸರ್ಕಾರ ರಚನೆ ಮಾಡಲು ಸಾಧ್ಯವಿಲ್ಲ, ಹೀಗಾಗಿ ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಈ ಬಾರಿ ಕಿಂಗ್ ಮೇಕರ್ ಆಗುತ್ತಾರೆ ಅಥವಾ ಸ್ವತಃ ಕಿಂಗ್ ಆಗುತ್ತಾರೆ ಎಂಬ ಮಾತು ರಾಜಕೀಯ ವಲಯದಲ್ಲಿ ಕೇಳಿಬರುತಿತ್ತು. ಆದರೆ, ಈಗ ಪರಿಸ್ಥಿತಿ ಆ ಪಕ್ಷಕ್ಕೆ ಶೋಚನಿಯವಾಗಿದೆ. 2008 ರ ಚುನಾವಣೆಯಲ್ಲಿ 28 ಸ್ಥಾನಗಳನ್ನು ಮಾತ್ರ ಗೆದ್ದಿದ್ದ ಜೆಡಿಎಸ್ ಈ ಸಲ 40 ಸ್ಥಾನಗಳನ್ನು ಗೆದ್ದಿರುವುದು ಒಂದು ಸಾಧನೆಯೇ ಆಗಿದೆ. ಆದರೆ ಕಳೆದ ಸಲ ಜೆಡಿಎಸ್ ಟಿಕೆಟ್ ಮೇಲೆ ಆರಿಸಿ ಬಂದವರ ಪೈಕಿ 11 ಜನ ಶಾಸಕರಷ್ಟೇ ಮರು ಆಯ್ಕೆಯಾಗಿದ್ದಾರೆ. 60 ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಲ್ಲಿದ್ದ ಜೆಡಿಎಸ್‌ಗೆ ನಿರಾಶೆಯಾಗಿದೆ. ಗೆದ್ದ ಸ್ಥಾನಗಳ ಸಂಖ್ಯೆ ಹೆಚ್ಚಾಗಿದ್ದರೂ ಗಳಿಸಿದ ಒಟ್ಟು ಮತಗಳು 2008ರಲ್ಲಿ ಪಡೆದ ಮತಗಳಿಗಿಂತ ಕೇವಲ ಶೇ.1 ರಷ್ಟು ಹೆಚ್ಚಾಗಿವೆ.

ಜೆಡಿಎಸ್ ನಿರೀಕ್ಷಿತ ಸ್ಥಾನಗಳನ್ನು ಪಡೆಯದಿರುವುದಕ್ಕೆ ಕುಮಾರಸ್ವಾಮಿಯವರು ಮಾಧ್ಯಮಗಳ ವಿರುದ್ಧ ಹರಿಹಾಯ್ದಿದ್ದಾರೆ. 'ಚುನಾವಣೆಯ ನಂತರ ಜೆಡಿಎಸ್ ಬಿಜೆಪಿ ಜೊತೆ ಸೇರಿ ಸರ್ಕಾರ ರಚಿಸುತ್ತದೆ' ಎಂಬ ಮಾತು ರಾಜಕೀಯ ವಲಯದಲ್ಲಿ ದಟ್ಟವಾಗಿಯೇ ಕೇಳಿಬಂದಿತ್ತು. ಅದು ಮಾಧ್ಯಮದವರ ಸೃಷ್ಟಿಯೇ ಆಗಿದ್ದರೆ ಅದನ್ನು ಕುಮಾರಸ್ವಾಮಿಯವರು ನಿರಾಕರಿಸಿರಲಿಲ್ಲ. ಹಿಂದೆಯೂ ಒಮ್ಮೆ ಬಿಜೆಪಿ ಜೊತೆ ಕೈಜೋಡಿಸಿ ಸರ್ಕಾರ ರಚಿಸಿದ್ದು ಜನರು ಮರೆತಿಲ್ಲ. ಇನ್ನೆಂದೂ ತಾನು ಬಿಜೆಪಿ ಜೊತೆ ಕೈಜೋಡಿಸುವುದಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸದೆ ಇರುವುದರಿಂದ ಬಿಜೆಪಿ ವಿರೋಧಿ ಮತಗಳು ಜೆಡಿಎಸ್‌ಗೆ ಹರಿದು ಬರಲಿಲ್ಲ.

ರಾಜ್ಯದ ಜನತೆಯ ನಾಡಿ ಮಿಡಿತವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದರಲ್ಲಿ ಜೆಡಿಎಸ್ ವಿಫಲವಾಗಿದೆ ಎಂದು ಹೇಳಲೇಬೇಕಾಗುತ್ತದೆ. ಬಿಜೆಪಿಯ ದುರಾಡಳಿತ-ಭ್ರಷ್ಟಾಚಾರದಿಂದ ಬೇಸತ್ತ ಜನತೆಯ ಮತಗಳನ್ನು ಗೆಲ್ಲುವುದೇ ಪ್ರಮುಖ ಆದ್ಯತೆ ಆಗಬೇಕಾಗಿತ್ತು. ಅಂತಹ ಸಮಯದಲ್ಲಿ ಬಿಜೆಪಿ ಜತೆಯಲ್ಲಿ ಯಾವುದೇ ಒಳ ಒಪ್ಪಂದಕ್ಕೆ ಮುಂದಾಗುವುದಾಗಲಿ, ಜನತೆ ಹಾಗಂತ ಪರಿಗಣಿಸುವುದಾಗಲಿ ತನ್ನ ಗುರಿಸಾಧನೆಗೆ ಸಹಕಾರಿ ಆಗುವುದಿಲ್ಲ ಎಂಬುದನ್ನು ಜೆಡಿಎಸ್ ಕಂಡುಕೊಳ್ಳಲಿಲ್ಲ.

ಸಧ್ಯದ ಪರಿಸ್ಥಿಯಲ್ಲಿ ರಾಜ್ಯದಲ್ಲಿ ಕಾಂಗ್ರೆಸಿಗೂ ಬಿಜೆಪಿಗೂ ಪರ್ಯಾಯವಾಗಿ ಬೆಳೆಯಲು ಅವಕಾಶ ಇರುವುದು ಜೆಡಿಎಸ್‌ಗೆ ಮಾತ್ರ ಜೆಡಿಎಸ್ ಇದನ್ನು ಸರಿಯಾಗಿ ಗ್ರಹಿಸಿದಂತೆ ಕಾಣುವುದಿಲ್ಲ.

ಪುಟ 12 ಕ್ಕೆ

ಸಹಸ್ರಾರು ಕೋಟಿ ರೂಗಳ ಶಾರದಾ 'ಚೀಟ್' ಫಂಡ್ ಹಗರಣ ಮತ್ತು ತೃಣಮೂಲದ ಬೇರುಗಳು

ಪಶ್ಚಿಮ ಬಂಗಾಳ ಮತ್ತು ನೆರೆಯ ರಾಜ್ಯಗಳ ಲಕ್ಷಾಂತರ ಬಡ ಮತ್ತು ಮಧ್ಯಮ ವರ್ಗಕ್ಕೆ ಸೇರಿದ ಹೂಡಿಕೆದಾರರ ಹಣವನ್ನು ಸೂರೆಗೈದು ಅವರನ್ನು ದಿವಾಳಿ ಎಬ್ಬಿಸಿರುವ ಸಹಸ್ರಾರು ಕೋಟಿ ರೂಪಾಯಿಗಳ ದೊಡ್ಡ ಹಗರಣವೊಂದು ಬಯಲಾಗಿದೆ. ಹಗರಣದ 'ಮೂಲ ಬೇರು'ಗಳು ಎಲ್ಲಿವೆ ? ಮತ್ತು ನೊಂದ ಜನರಿಗೆ ಸಾಂತ್ವನ ಏನು ? ಓದಿ. ರಾಜ್ಯದ ಇತ್ತೀಚಿನ ಕೆಲವು ಪ್ರಮುಖ ರಾಜಕೀಯ ಬೆಳವಣಿಗೆಗಳ ವಿವರಗಳೊಂದಿಗೆ.


ಆರ್. ರಾಮಕೃಷ್ಣ

ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಸರ್ಕಾರ ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಅಲ್ಲಿನ ವಿದ್ಯಮಾನಗಳನ್ನು ಈಗ ಇಡೀ ದೇಶದ ಜನ ನೋಡುತ್ತಿದ್ದಾರೆ. ಸರ್ಕಾರ ಬಂದ ಹೊಸದರಲ್ಲಿ ಜನರು ಕುತೂಹಲದಿಂದ ನೋಡುತ್ತಿದ್ದರು. ಈಗ ಆತಂಕದಿಂದ ನೋಡುತ್ತಿದ್ದಾರೆ. ಅಷ್ಟೇ ವ್ಯತ್ಯಾಸ.

ಈಗ ದೇಶಾದ್ಯಂತ ವ್ಯಾಪಕ ಚರ್ಚೆಯಲ್ಲಿರುವ ವಿಷಯ ಅಂದರೆ ಶಾರದಾ ಸಮೂಹ ಸಂಸ್ಥೆ ಎಂಬ ಚಿಟ್‌ಫಂಡ್ ಸಂಸ್ಥೆಯ ಹಗರಣ. ಮಧ್ಯಮ ವರ್ಗ, ಕೆಳ ಮಧ್ಯಮ ವರ್ಗದ ಸುಮಾರು 2.5 ಲಕ್ಷ ಜನ ಹೂಡಿಕೆದಾರರ ಜೀವಮಾನದ ಉಳಿತಾಯದ ಹಣ ಬ್ಲೇಡ್ ಕಂಪನಿಯ ವಂಚನೆಗೆ ಸಿಲುಕಿ ಮುಳುಗಿ ಹೋಗಿದೆ. ಒಟ್ಟು ಪ್ರಕರಣದಲ್ಲಿ ಸುಮಾರು.30,000 ಕೋಟಿ ರೂಪಾಯಿಗಳಷ್ಟು ದೊಡ್ಡ ಪ್ರಮಾಣದ ಹಣದ ವಂಚನೆಯಾಗಿದೆ ಎಂಬ ಅಂದಾಜುಗಳು ಹಾಗೂ ತೃಣಮೂಲ ಕಾಂಗ್ರೆಸ್‌ನ ಸಂಸದರು, ಮುಖಂಡರುಗಳು ಈ ವಂಚಕ ಸಂಸ್ಥೆಯ ನೇತೃತ್ವ ವಹಿಸುತ್ತಾ, ಅಧಿಕ ಬಡ್ಡಿಯ ಆಮಿಷವೊಡ್ಡಿ ಸಾಮಾನ್ಯ ಜನರ ಹಣವನ್ನು ಸೆಳೆಯುವ ಅದರ ವಹಿವಾಟನ್ನು ಪ್ರೋತ್ಸಾಹಿಸುತ್ತಾ, ರಕ್ಷಿಸುತ್ತಾ ಬರುತ್ತಿದ್ದರೆಂಬುದು ಸಹ ಈಗ ರಹಸ್ಯವಾಗೇನು ಉಳಿದಿಲ್ಲ. (ಈ ಸಂಬಂಧದ ಪ್ರತ್ಯೇಕ ಬರಹವನ್ನು ಪುಟ 11 ರಲ್ಲಿ ನೋಡಿ.)

ಶಾರದಾ ಚಿಟ್ ಫಂಡ್ ಸಂಸ್ಥೆಯ ಹಗರಣ ಬಯಲಾಗುವ ಮುಂಚೆ ಪಶ್ಚಿಮ ಬಂಗಾಳ ಮತ್ತೊಂದು ಕಾರಣಕ್ಕೆ ದೇಶದ ಗಮನ ಸೆಳೆಯಿತು.

ಏಪ್ರಿಲ್ 2-2013 ರಂದು ಪಶ್ಚಿಮ ಬಂಗಾಳದ ಎಸ್‌ಎಫ್‌ಐ ರಾಜ್ಯ ಸಮಿತಿ ಸದಸ್ಯ ಸುದೀಪ್ತೋ ಗುಪ್ತ ಪೋಲಿಸ್ ಕಸ್ಟಡಿಯಲ್ಲಿ ಅತ್ಯಂತ ದುರಂತಮಯವಾದ ರೀತಿಯಲ್ಲಿ ಸಾವು ಕಂಡರು. ವಾಸ್ತವಿಕವಾಗಿ ರಾಜ್ಯದ ಶಾಲಾ ಕಾಲೇಜುಗಳಲ್ಲಿ ಪ್ರತಿವರ್ಷ ವಿದ್ಯಾರ್ಥಿ ಸಂಘದ ಚುನಾವಣೆ ನಡೆಸುವುದಕ್ಕೆ ಬದಲಾಗಿ ಎರಡು ವರ್ಷಕ್ಕೊಮ್ಮೆ ಚುನಾವಣೆ ಎನ್ನುವುದು ಸೇರಿದಂತೆ ಹಲವಾರು ಶಿಕ್ಷಣ ವಿರೋಧಿ-ಪ್ರಜಾಪ್ರಭುತ್ವ ವಿರೋಧಿ ನೀತಿಗಳನ್ನು ಜಾರಿಗೆ ತರಲು ಹೊರಟಿದ್ದ ತೃಣಮೂಲ ಸರ್ಕಾರದ ಧೋರಣೆಗಳ ವಿರುದ್ಧ ಎಸ್‌ಎಫ್‌ಐ ಪ್ರಜಾಸತ್ತಾತ್ಮಕವಾದ ರೀತಿಯಲ್ಲಿ ಚಳುವಳಿ ನಡೆಸಿತ್ತು. ಆದರೆ ತೃಣಮೂಲ ಸರ್ಕಾರದ ಪೋಲೀಸರು ಸುದೀಪ್ತೋ ಗುಪ್ತರ ಪ್ರಾಣವನ್ನೇ ಬಲಿತೆಗೆದುಕೊಂಡು ಬಿಟ್ಟರು. ಎಷ್ಟೇ ದು:ಖದ-ನೋವಿನ ವಿಷಯವಾದರೂ ವಿದ್ಯಾರ್ಥಿ ಚಳುವಳಿ ಹಿಂಸಾತ್ಮಕ ಮಾರ್ಗಕ್ಕೆ ಹೊರಳಲಿಲ್ಲ. ಕಾನೂನು ಕೈ ತೆಗೆದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಚಳುವಳಿಯಲ್ಲಿ ಬಂಧಿತನಾಗಿ ಪ್ರಸಿಡೆನ್ಸಿ ಜೈಲು ಸೇರಿದ್ದ ಮುಖಂಡ, ಜೈಲು ಗೇಟಿಂದ ಎಸ್.ಎಸ್.ಕೆ.ಎಂ. ಆಸ್ಪತ್ರೆಗೆ ಸಾಗಿಸುವಾಗ ತಲೆ-ಮೈಕೈಯೆಲ್ಲಾ ರಕ್ತ ಮೆತ್ತಿಕೊಂಡು ಪ್ರಜ್ಞೆ ಇಲ್ಲದ ಒಂದು 'ಯಕಶ್ಚಿತ್' ದೇಹವಾಗಿದ್ದರು. ಸರಿಯಾದ ತನಿಖೆಗೆ ಆದೇಶಿಸಬೇಕಾಗಿದ್ದ ರಾಜ್ಯದ ಮುಖ್ಯಮಂತ್ರಿ ಮರಣೋತ್ತರ ಪರೀಕ್ಷೆ ನಡೆಯುತ್ತಿರುವ ಹೊತ್ತಲ್ಲೇ ಆಸ್ಪತ್ರೆಗೆ ಭೇಟಿ ನೀಡಿ ಪರೀಕ್ಷೆ ಮುಗಿಯುವ ಮೊದಲೇ ಅದೊಂದು ಅಪಘಾತ ಅಂದು ಘೋಷಿಸಿದರು. ಆಗಲೂ ವಿದ್ಯಾರ್ಥಿಗಳು ಕೆರಳಲಿಲ್ಲ. ಪ್ರಜಾಸತ್ತಾತ್ಮಕ ಪ್ರತಿಭಟನೆಯ ಮಾರ್ಗ ಬಿಡಲಿಲ್ಲ. ಬೆಂಗಳೂರಿನಲ್ಲಿ ಈ ವಿಷಯದ ಬಗೆಗೆ ಪ್ರಶ್ನೆ ಕೇಳಿದ ಪತ್ರಕರ್ತರಿಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 'ಅದಾ, ಅದೊಂದು ಸಣ್ಣ ವಿಷಯ' ಅಂದರು.



ಸಿಪಿಐ(ಎಂ) ಕಚೇರಿ ಮೇಲೆ ತೃಣಮೂಲದ ದಾಳಿ

ದೆಹಲಿಯ ಯೋಜನಾ ಭವನದ ಮುಂದೆ ಪಶ್ಚಿಮ ಬಂಗಾಳದ ಹಣಕಾಸು ಮಂತ್ರಿಯನ್ನು ಅಡ್ಡಗಟ್ಟಿ ನಡೆಸಿದ ವಿದ್ಯಾರ್ಥಿಗಳ ಭಾವುಕ ಕೃತ್ಯವನ್ನು ಎಡಪಕ್ಷಗಳ್ಯಾವುವು ಬೆಂಬಲಿಸಲಿಲ್ಲ. ಬದಲಿಗೆ ಖಂಡಿಸಿದವು. ತಮ್ಮ ಅಸಮ್ಮತಿಯನ್ನು ಸ್ಪಷ್ಟ ಮಾತುಗಳಲ್ಲಿ ಘೋಷಿಸಿದವು. ಆದರೆ ಇಂತಹದ್ದೇನಾದರೂ ಒಂದು ನೆಪವನ್ನೇ ಕಾಯುತ್ತಾ ಕೂತಂತೆ ಸ್ವತಃ ಒಂದು ರಾಜ್ಯದ ಮುಖ್ಯಮಂತ್ರಿ ತಮ್ಮ ಪಕ್ಷ ಅಂದರೆ ತೃಣಮೂಲ ಕಾಂಗ್ರೆಸ್ ಸಿಪಿಐ(ಎಂ)ಪಕ್ಷಕ್ಕೆ ಸರಿಯಾಗಿ ಪಾಠ ಕಲಿಸುತ್ತದೆ ಎಂದು ಘೋಷಿಸಿದರು.

ಮುಂದಿನ 48 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳಿಗೆ ಸೇರಿದ ಸು. 1000 ಕ್ಕೂ ಹೆಚ್ಚು ಕಛೇರಿಗಳ ಮೇಲೆ ದಾಳಿಗಳು ನಡೆದವು. ಮುಖಂಡರ ಮನೆಗಳ ಮೇಲೆ, ಮುಖಂಡರ ಮೇಲೆ ದಾಳಿಗಳಾದವು. ಕಾಲೇಜುಗಳ ಮೇಲೆ ದಾಳಿಗಳಾದವು. ಪ್ರೆಸಿಡೆನ್ಸಿ ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ಪ್ರಖ್ಯಾತವಾದ ವಿಜ್ಞಾನ ಪ್ರಯೋಗಶಾಲೆಯ ಮೇಲೆ ದಾಳಿ ನಡೆಯಿತು. ವಿದ್ಯಾರ್ಥಿನಿಯರ ಮೇಲೆ ಬಿದ್ದ ಪ್ರಸಂಗಗಳೂ ನಡೆದವು. ಡಾರ್ಜಿಲಿಂಗ್ ಜಿಲ್ಲೆಯ ಸಿಲಿಗುರಿಯಲ್ಲಿ ತೃಣಮೂಲ ಮಂತ್ರಿ ಸಿಪಿಐ(ಎಂ) ಕಚೇರಿಯ ಮೇಲಿನ ದಾಳಿಗೆ ನೇತೃತ್ವ ವಹಿಸಿದ್ದರು.

ರಾಜ್ಯದ ರಾಜ್ಯಪಾಲರು ತಮ್ಮ ವ್ಯಾಪ್ತಿಯ ಗಡಿ ಮೀರಿ ದೆಹಲಿ ಘಟನೆಯು ಒಂದು ಪೂರ್ವಯೋಜಿತ ಕೃತ್ಯ ಎಂದೂ ಘೋಷಿಸಿದರು. ಘಟನೆಯನ್ನು ಖಂಡಿಸಲು ಅಗತ್ಯ ಮೀರಿದ ಬಲು ಭಾರದ ದೊಡ್ಡ ದೊಡ್ಡ ಶಬ್ದಗುಚ್ಛಗಳನ್ನು ಬಳಸಿದರು.

ಫೆಬ್ರವರಿ 20-21 ರಂದು ಕಾರ್ಮಿಕ ವರ್ಗ ದೇಶವ್ಯಾಪಿ ಮಹಾ ಮುಷ್ಕರವನ್ನು ಸಂಘಟಿಸಿದ ಹೊತ್ತಲ್ಲಿ ಪಶ್ಚಿಮ ಬಂಗಾಳದಲ್ಲಿ ಏನೇನು ನಡೆಯಿತು ಕಾನೂನನ್ನು ಕೈಗೆ ತೆಗೆದುಕೊಂಡವರು ಯಾರು ? ಎಂಬುದನ್ನು ದೇಶವೇ ಗಮನಿಸಿದೆ.


ಮುಷ್ಕರದಲ್ಲಿ ಪಾಲ್ಗೊಂಡ ನೌಕರನ ಕಿವಿ ಕತ್ತರಿಸಿದ ತೃಣಮೂಲಿಗರು.

ಆ ಸಂದರ್ಭದಲ್ಲಿ ಮೇ 25-2013 ರಂದು 'ಡೆಕನ್ ಹೆರಾಲ್ಡ್' ಪತ್ರಿಕೆಯಲ್ಲಿ 'ಎ ಲಾಲೆಸ್ ಸ್ಟೇಟ್'-('ಕಾನೂನು ವ್ಯವಸ್ಥೆ ಕುಸಿದು ಬಿದ್ದ ರಾಜ್ಯ')ಎಂಬ ತಲೆಬರಹದ ಅಡಿಯಲ್ಲಿ ಪ್ರಕಟವಾಗಿರುವ ವರದಿ ಮತ್ತು ಇಂತಹ ಯಾವುದೇ ಪಕ್ಷ ರಾಜಕಾರಣದ ಪರವಿಲ್ಲದವರು ಏನು ಹೇಳುತ್ತಿದ್ದಾರೆ ಎಂಬುದನ್ನು ಗಮನಿಸುವ ತಾಳ್ಮೆ ಎಚ್ಚರ ತೃಣಮೂಲಿಗರಿಗೆ ಇದೆಯಾ ಎಂಬುದು ಪ್ರಶ್ನೆ. ('ಡೆಕನ್ ಹೆರಾಲ್ಡ್' ಬರಹದ ಆಯ್ದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ.)

"ಪಶ್ಚಿಮ ಬಂಗಾಳ ರಾಜ್ಯದಿಂದ, ಅಲ್ಲಿನ ರಾಜ್ಯ ಸರ್ಕಾರವೇ ಕಾನೂನಿನ ಆಡಳಿತವನ್ನು ತುಳಿದು ಹಾಕುತ್ತಿರುವ ಆತಂಕಕಾರಿಯಾದ ಸಂಕೇತಗಳು ಬರುತ್ತಿವೆ. ನಿರಂತರವಾಗಿ ನಡೆಯುತ್ತಿರುವ ಮತ್ತು ದಿನೇ ದಿನೇ ಹೆಚ್ಚುತ್ತಿರುವ ರಾಜಕೀಯ ದಾಳಿಗಳಿಂದ ಜನಸಾಮಾನ್ಯರನ್ನು ರಕ್ಷಿಸಬೇಕಾಗಿದ್ದ ಸರ್ಕಾರ ತನ್ನ ಆ ಜವಾಬ್ದಾರಿಯಿಂದ ದೂರ ಸರಿಯುತ್ತಿದೆ. ತೃಣಮೂಲ ಸರ್ಕಾರ ಮತ್ತು ನಾಯಕತ್ವವು ಪೋಲಿಸ್ ಇಲಾಖೆಯ ದೈನಂದಿನ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ಕೋಲ್ಕೊತ್ತಾ ಪೋಲಿಸ್ ಕಮೀಷನರ್ ಅವರ ವರ್ಗಾವಣೆ...

...ಕಳೆದ ವಾರ ತೃಣಮೂಲ ಪಕ್ಷ ಮತ್ತು ಸರ್ಕಾರ ವಿರೋಧಿಸಿದ ಎರಡು ದಿನಗಳ ಮುಷ್ಕರದ ನಂತರದಲ್ಲಿ ತೃಣಮೂಲ ಕಾಂಗ್ರೆಸಿಗರ ಗುಂಪು ಕಾನೂನನ್ನು ತನ್ನ ಕೈಗೆ ತೆಗೆದುಕೊಂಡಿತ್ತು. ರಾಜ್ಯದ ನಾನಾ ಕಡೆಗಳಲ್ಲಿ ಮುಷ್ಕರದಲ್ಲಿ ಪಾಲ್ಗೊಂಡವರ ಮೇಲೆ ಹಲ್ಲೆಗಳಾಗಿವೆ. ಮುಷ್ಕರದಲ್ಲಿ ಪಾಲ್ಗೊಂಡ ಸರ್ಕಾರಿ ನೌಕರರೊಬ್ಬರ ಕಿವಿಯನ್ನು ಕತ್ತರಿಸಿಹಾಕಲಾಗಿದೆ. ಇತರ ಹಲವರನ್ನು ನಾನಾ ರೀತಿಯಲ್ಲಿ ಶಿಕ್ಷಿಸಲಾಗಿದೆ. ಈ ಎಲ್ಲ ಪ್ರಕರಣಗಳಲ್ಲಿ ತೃಣಮೂಲ ಕಾಂಗ್ರೆಸ್‌ನ ಪುಂಡರ ಪಡೆಯೇ ಈ ರೀತಿಯ ದೈಹಿಕ ಶಿಕ್ಷೆಯನ್ನು ಮತ್ತು ಅದರ ಪ್ರಮಾಣವನ್ನು ನಿರ್ಧರಿಸಿದೆ...."

ತೃಣಮೂಲ ಸರ್ಕಾರ ಮತ್ತು ಪಕ್ಷದ 'ಕಾರ್ಯ ನಿರ್ವಹಣೆ'ಯ ಕುರಿತು ಅರ್ಥ ಮಾಡಿಕೊಳ್ಳಲು ಇಷ್ಟು ಮಾತು ಮತ್ತು ಈ ಶಾರದಾ ಚಿಟ್ ಫಂಡ್ ಹಗರಣದ ಈ ವಿವರಗಳ ಸಾಕ್ಷಿ ಸಾಕಲ್ಲವೇ ?

ಜನಶಕ್ತಿ
ಕನ್ನಡ ವಾರಪತ್ರಿಕೆ

'ಶಾರದಾ_ತೃಣಮೂಲ' ಗಳಸ್ಯ–ಕಂಠಸ್ಯ

ಪಶ್ಚಿಮ ಬಂಗಾಳದಲ್ಲಿ ತಮ್ಮ ಜೀವಮಾನದ ಉಳಿಕೆ–ಗಳಿಕೆಯನ್ನು ಒಂದಷ್ಟು ಹೆಚ್ಚು ಬಡ್ಡಿಯ ಆಸೆ ತೋರಿಸಿದ 'ಶಾರದಾ ಚಿಟ್ ಫಂಡ್' ಮಡಿಲಿಗೆ ಹಾಕಿದ ಕೆಳಮಧ್ಯಮ–ಮಧ್ಯಮ ವರ್ಗದ ಹೂಡಿಕೆದಾರರು 4–5 ಜನ ಆತ್ಮಹತ್ಯೆಗೆ ಶರಣಾಗಿದ್ದಾರೆ. ಮತ್ತೆಷ್ಟೋ ಸಾವಿರಾರು ಮಂದಿ ಬೀದಿಯಲ್ಲಿ ಬಿದ್ದು ಗೋಳಿಡುವಂತಹ ಪರಿಸ್ಥಿತಿ ನಿರ್ಮಾಣಗೊಂಡಿದೆ. ಮತ್ತೊಂದು ಕಡೆ ಹಣ ಕಳೆದುಕೊಂಡು ಹತಾಷರಾದ ಜನ ಚಿಟ್ ಫಂಡ್ ಸಂಸ್ಥೆಯ ಒಬ್ಬ ಅಧಿಕಾರಿಯನ್ನು ಕೊಂದು ಹಾಕಿದ್ದಾರೆಂದು ಕೆಲವು ವರದಿಗಳಲ್ಲಿ ಕಂಡು ಬಂದಿದೆ.

ಇಷ್ಟೆಲ್ಲಾ ಅನಾಹುತ ಆಗಿದ್ದರೂ ಕೂಡ ರಾಜ್ಯದ ಮುಖ್ಯಮಂತ್ರಿ–ಸರ್ಕಾರ ವಂಚಕ ಕಂಪನಿಗಳನ್ನು ನಿಯಂತ್ರಿಸುವಲ್ಲಿ ಸೋತಿ–ದೆ ಅಂದರೆ 'ಆಗಿದ್ದು ಆಗಿ ಹೋಗಿದೆ ಬಿಡಿ ಅನ್ನುತ್ತಾರೆ.' ಯಾಕೆ ಈ ಬಗೆಗೆ ಮೊದಲೇ ಸರ್ಕಾರಕ್ಕೆ ಅಂದಾಜಾಗಲಿಲ್ಲ ಅಂದರೆ 'ಯಾವ ಕಂಪನಿ ಏನು ಮಾಡುತ್ತದೆಂದು ಮೊದಲೇ ಊಹಿಸಲು ನಾನೇನು ದೇವರಾ ?' ಅನ್ನುತ್ತಾರೆ. ತೃಣಮೂಲ ಪಕ್ಷ ಮತ್ತು ತೃಣಮೂಲದ ಮುಖಂಡರೇ ಈ ಸಂಸ್ಥೆಯ ವ್ಯವಹಾರಗಳಲ್ಲಿ ಮತ್ತು ಹಣದ ದುರ್ಬಳಕೆ–ಪ್ರಕರಣಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರಲ್ಲ ಎಂದರೆ 'ಹಗರಣದ ವಿಷಯದಲ್ಲಿ ರಾಜಕೀಯ ಮಾಡಬೇಡಿ...ವ್ಯಕ್ತಿಗತ ವಿಷಯದ ಬಗೆಗೆ ನನ್ನನ್ನೇನು ಕೇಳಬೇಡಿ' ಎನ್ನುತ್ತಾರೆ.

ಅನಿರೀಕ್ಷಿತವೇ?

ಚಿಟ್ ಫಂಡ್ ಮುಂತಾದ ಹಣಕಾಸು ಸಂಸ್ಥೆಯಿಂದ ಜನರಿಗೆ ಆಗಬಹುದಾದ ಮೋಸವನ್ನು ತಪ್ಪಿಸಲು 2009 ರಲ್ಲಿಯೇ ಅಂದಿನ ಎಡರಂಗ ಸರ್ಕಾರ ವಿಧಾನಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಿ ಅಂಗೀಕಾರಕ್ಕಾಗಿ ಕೇಂದ್ರಕ್ಕೆ ಕಳಿಸಿತ್ತು. ಆದರೆ ರಾಷ್ಟ್ರಪತಿಗಳಿಂದ ಶೀಘ್ರ ಅನುಮತಿ ದೊರಕದ ಕಾರಣ ಮಸೂದೆ ಜಾರಿಗೆ ಬಂದಿರಲಿಲ್ಲ.

2009ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ತೃಣಮೂಲಕ್ಕೆ ಮೇಲುಗೈ ಆದ ಮೇಲೆ ಈ 'ಶಾರದ ಚಿಟ್ ಫಂಡ್'ನ ಚಟುವಟಿಕೆಗಳು ತೃಣಮೂಲ ಕಾಂಗ್ರೆಸ್‌ನ ಮುಖಂಡರು, ಕಾರ್ಯಕರ್ತರ ಬೆಂಬಲದಿಂದ ಗರಿಗೆದರಿದವು ಎಂದು ಈಗ ಹಲವರು ಗುರುತಿಸುತ್ತಾರೆ.

ಸಂಸ್ಥೆ ದಿವಾಳಿ ಎದ್ದಿತೆಂದು ಹೇಳಿ ರಾಜ್ಯಬಿಟ್ಟು ತಲೆ ಮರೆಸಿಕೊಂಡು ಓಡಿಹೋದ ಕಂಪನಿಯ ಸಿಎಂಡಿ ಸುದಿಪ್ತೋ ಸೇನ್ ಬರೆದಿಟ್ಟಿರುವ 18 ಪುಟಗಳ 'ಆತ್ಮಹತ್ಯಾ ಬೆದರಿಕೆ ಪತ್ರ'ದಲ್ಲಿ ಇರುವ ಕೆಲವು ಪ್ರಮುಖ ಅಂಶಗಳು ಹೀಗಿವೆ. "ತೃಣಮೂಲದ ಇಬ್ಬರು ಉನ್ನತ ಮುಖಂಡರು ತಾವು ಮಮತಾ ಬ್ಯಾನರ್ಜಿಯವರಿಗೆ ಆತ್ಮೀಯರು ಎಂದು ಹೇಳಿಕೊಂಡು ಒತ್ತಡ ಹಾಕಿ ಕಂಪನಿ ವ್ಯವಹಾರದೊಳಗೆ ಪ್ರವೇಶಿಸಿದರು. ಮುಂದೆ ತೃಣಮೂಲ ಪಕ್ಷದಿಂದ ರಾಜ್ಯಸಭಾ ಸದಸ್ಯರಾದ ಕುನಾಲ್ ಘೋಷ್ ಕಂಪನಿಗೆ ಸಿ.ಇ.ಒ.ನೇ ಆದರು. ಮತ್ತೊಬ್ಬರು ಮುಂದೆ ತೃಣಮೂಲದ ಸಂಸದರೇ ಆದ ಶ್ರಿಂಜಯ ಬೋಸ್.

ಚಿಂಟ್ ಫಂಡ್ ಸಂಸ್ಥೆಯ ಬಗೆಗೆ ಮಾಧ್ಯಮವೊಂದರಲ್ಲಿ ಬಂದ ವ್ಯತಿರಿಕ್ತ ವರದಿಯ ಬಳಸಿಕೊಂಡು ಅಂತಹ ಪ್ರಚಾರವನ್ನು ಎದುರಿಸಲು ಸ್ವಂತ ಟಿ.ವಿ. ಚಾನೆಲ್, ಸ್ವಂತ ದಿನ ಪತ್ರಿಕೆ ಆರಂಭಿಸೋಣ ಎಂದು ಒತ್ತಾಯ ಹಾಕಿದರು. ಸು. 50 ಕೋಟಿ ರೂಪಾಯಿಗಳನ್ನು ಚಾನೆಲ್‌ಗಾಗಿ ತೊಡಗಿಸಲಾಯಿತು. ಶ್ರಿಂಜಯ ಬೋಸ್ ಟಿ.ವಿ. ಚಾನೆಲ್‌ಗೆ ತಿಂಗಳಿಗೆ 15 ಲಕ್ಷ ರೂ. ವೇತನ ಪಡೆಯುವ ಸಿ.ಇ.ಒ. ಆದರು. 'ಪ್ರತಿದಿನ್' ಪತ್ರಿಕೆಗೆ ತಿಂಗಳಿಗೆ 60 ಲಕ್ಷ ರೂ.ಗಳನ್ನು ನೀಡಲಾಯಿತು. ಮತ್ತು ಇವರೆಲ್ಲ ಬೇರೆ ಬೇರೆ ಉದ್ದೇಶಗಳಿಗೆ ಸಾಕಷ್ಟು ಹಣವನ್ನು ಕಸಿದರು...ಕಂಪನಿ ಈಗ ದಿವಾಳಿಯಾಗಿದೆ. ನಾನು ಹಣ ಹೂಡಿದ ಯಾರಿಗೂ ಹಣವನ್ನು ವಾಪಸ್ ಕೊಡುವ ಸ್ಥಿತಿಯಲ್ಲಿ ಇಲ್ಲ ..."



...ಣದಲ್ಲಿ ಹಣ ಕಳೆದುಕೊಂಡ ಮಹಿಳೆಯರು ಗೋಳಿಡುತ್ತಿರುವುದು

ದೇವರೇ ಬರಬೇಕೆ ?

ಶಾರದಾ ಚಿಟ್ ಫಂಡ್ ಸಂಸ್ಥೆಯಲ್ಲಿ ಏನು ನಡೆಯುತ್ತಿದೆ ಎಂಬುದು ಮಮತಾ ಬ್ಯಾನರ್ಜಿಯವರಿಗೆ ಚೆನ್ನಾಗಿ ಗೊತ್ತಿತ್ತು. ಮಮತಾ ಬ್ಯಾನರ್ಜಿಯವರ ಪರಮ ಆಪ್ತ ವ್ಯಕ್ತಿ ಮತ್ತು ತೃಣಮೂಲ ಪಕ್ಷದ ಮುಖಂಡ ಶತಾಬ್ದ ರಾಯ್ ಈ ಸಂಸ್ಥೆಗೆ ಪ್ರಚಾರ ರಾಯಬಾರಿ ಆಗಿದ್ದರು. ಅಷ್ಟು ಮಾತ್ರವೇ ಅಲ್ಲ. ಅಕ್ಟೋಬರ್ 2012 ರಲ್ಲಿ ಕೇಂದ್ರ ಸರ್ಕಾರದ 'ಗಂಭೀರ ಮೋಸಗಳ ತನಿಖಾ ಸಂಸ್ಥೆ'(ಎಸ್.ಎಫ್.ಐ.ಓ.) ರಾಜ್ಯದ ಚಿಟ್ ಫಂಡ್ ಸಂಸ್ಥೆಗಳ ವ್ಯವಹಾರಗಳ ಬಗೆಗೆ ಅನುಮಾನ ವ್ಯಕ್ತಪಡಿಸಿ ಮತ್ತೆ ಮತ್ತೆ ವಿವರಣೆಗಳನ್ನು ಕೇಳಿದ್ದರೂ ಕೂಡ ತೃಣಮೂಲ ಸರ್ಕಾರ ಈ ಸಂಬಂಧ ಯಾವುದೇ ಮಾಹಿತಿಯನ್ನು ನೀಡಿಲ್ಲ. ಇದಲ್ಲದೇ ರಿಜರ್ವ್ ಬ್ಯಾಂಕಿನ 'ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ'ಯು ಈ ಬಗೆಗೆ ಬಹಿರಂಗ ಎಚ್ಚರಿಕೆಗಳನ್ನೂ ನೀಡಿದ್ದರೂ ಸರ್ಕಾರ ಯಾವ ಎಚ್ಚರಿಕೆಯನ್ನೂ ವಹಿಸಲಿಲ್ಲ.

ವಾಸ್ತವವಾಗಿ ತೃಣಮೂಲ ಸರ್ಕಾರದ ಕನಿಷ್ಠ 5 ಜನ ಮಂತ್ರಿಗಳು ಈ ಕಂಪನಿಯ ವ್ಯವಹಾರಗಳಲ್ಲಿ ನೇರವಾಗಿ ಶಾಮೀಲಾಗಿದ್ದರು. ಒಂದು ಅರ್ಥದಲ್ಲಿ ಶಾರದಾ ಕಂಪನಿಯು ತೃಣಮೂಲ ಪಕ್ಷದ ಹಣಕಾಸು ಕಂಪನಿಯಂತೆಯೇ ಕೆಲಸ ಮಾಡಿದೆ. ಇನ್ನೂ ಈ ಕಂಪನಿ ಶುರುಮಾಡಿದ ಪತ್ರಿಕೆ, ಟಿವಿ ಚಾನೆಲ್‌ಗಳು ತೃಣಮೂಲ ಕಾಂಗ್ರೆಸ್‌ನ ತುತ್ತೂರಿಗಳಾಗಿದ್ದವು ಎಂಬುದು ರಹಸ್ಯವಾಗೇನೂ ಉಳಿದಿಲ್ಲ.

ತೃಣಮೂಲ ಪಕ್ಷದ ಬೇರುಗಳು ಶಾರದಾ ಚಿಟ್ ಫಂಡ್ಸ್ ಮೂಲಕ ಜನರ ಬೆವರಿನ ಹಣವನ್ನು ಚೆನ್ನಾಗಿ ಹೀರಿವೆ ಎನ್ನುತ್ತಾರೆ ಈ ಹಗರಣದ ಒಳ ಹೊರಗು ಬಲ್ಲವರು. ಸುದಿಪ್ತೋ ಸೇನ್ ಬರೆದ 18 ಪುಟಗಳ ಪತ್ರ ಕೂಡ ಹಗರಣದಲ್ಲಿ ಕೆಲವು ತಲೆಗಳನ್ನು ಬಲಿಕೊಟ್ಟು ಉಳಿದ ದೊಡ್ಡ ದೊಡ್ಡ ತಲೆಗಳನ್ನು ಮತ್ತು ತೃಣಮೂಲ ಸರ್ಕಾರವನ್ನು ರಕ್ಷಿಸಿಕೊಳ್ಳುವ ಪ್ರಯತ್ನ ಎಂದೂ ವಿಶ್ಲೇಷಿಸಲಾಗಿದೆ.

2011ರ ಪಶ್ಚಿಮ ಬಂಗಾಳದ ವಿಧಾನ ಸಭಾ ಚುನಾವಣೆಯಲ್ಲಿ, ಮತ್ತೆ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದರೆ ಅದು ಚಿಟ್ ಫಂಡ್ ಸಂಸ್ಥೆಗಳ ಮೇಲೆ ಕ್ರಮವಹಿಸಿ ಜನರು ಅದರಲ್ಲಿ ತೊಡಗಿಸಿರುವ ಹಣಕ್ಕೆ ಸಂಚಕಾರ ತರುತ್ತದೆ ಎಂದು ಹುಯಿಲೆಬ್ಬಿಸಲಾಗಿತ್ತು ಎಂಬುದನ್ನೂ ಕೂಡ ಇಲ್ಲಿ ನೆನೆಸಿಕೊಳ್ಳಬೇಕಾಗಿದೆ. ಬಡ ಹೂಡಿಕೆದಾರರ ಬದುಕಿನ ಅಮೂಲ್ಯ ಉಳಿಕೆಗೆ ಬಾಯಿ ಹಾಕಿರುವವರು ಯಾರು ? ಸಿಪಿಐ(ಎಂ) ಪಕ್ಷವೋ–ಎಡರಂಗವೋ ಅಥವಾ ತೃಣಮೂಲ ಪಕ್ಷವೋ ಅಂತ ಇನ್ನು ಮುಂದೆ ಪಶ್ಚಿಮ ಬಂಗಾಳದ ಜನತೆಗೆ ಹೆಚ್ಚು ಹೆಚ್ಚು ತಿಳಿಯುತ್ತಾ ಹೋಗುತ್ತದೆ.

ಬಡ ಹೂಡಿಕೆದಾರರ ಹಿತ ರಕ್ಷಿಸುವ ಹೆಸರಿನಲ್ಲಿ ರಾಜ್ಯ ಸರ್ಕಾರ 500 ಕೋಟಿ ರೂಪಾಯಿಗಳ ನಿಧಿ ಸ್ಥಾಪಿಸಿದೆ ಎಂದು ವರದಿಯಾಗಿದೆ. ಈ ಹಣವನ್ನು ಹೊಂದಿಸಲು ತಂಬಾಕಿನ ಮೇಲೆ 150 ಕೋಟಿ ರೂಪಾಯಿಗಳ ಹೊಸ ತೆರಿಗೆ ಹೇರಲಾಗಿದೆ. ಉಳಿದ ಹಣ ಹೊಂದಿಸುವುದು ಹೇಗೆಂದು ಹೇಳಿಲ್ಲ. ಸಾಮಾನ್ಯ ಜನರ ಅಮೂಲ್ಯ ಪ್ರಾಣ–ಹಣ ರಕ್ಷಿಸುವ ಕರ್ತವ್ಯ ಸರ್ಕಾರ–ಕ್ಕೆ ಇದೆ ಎಂಬುದು ನಿಜ. ಆದರೆ ತನ್ನ ದುಷ್ಟ ರಾಜಕೀಯ ಗುರಿ ಸಾಧನೆಗಾಗಿ ಚಿಟ್ ಫಂಡ್ ಸಂಸ್ಥೆಯೊಂದರ ಹಣ ಲೂಟಿ ಮಾಡಿ ಅದನ್ನು ಮುಳುಗಿಸಿ ಆಮೇಲೆ ಸಾರ್ವಜನಿಕ ಖಜಾನೆಯಿಂದ ನೂರಾರು ಕೋಟಿ ರೂಪಾಯಿಗಳನ್ನು ಪರಿಹಾರ ನೀಡುತ್ತಿದ್ದಾರೆ ಅಂತ ಇದರ ಅರ್ಥ ಅಲ್ಲವೇ ? ನೋಡೋಣ ನಡೆಯುತ್ತಿರುವ ತನಿಖೆ ಏನು ಹೇಳುತ್ತದೋ.

ಈ 'ಚಿಟ್ ಫಂಡ್' ಹಗರಣದ ಇನ್ನೂ ಕೆಲವು ವಿವರಗಳು ನಿಜಕ್ಕೂ ಆಘಾತಕಾರಿಯಾಗಿವೆ. ತೃಣಮೂಲ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಡರಂಗ ಮಂಡಿಸಿದ್ದ ಮಸೂದೆಯನ್ನು ವಾಪಸ್ ಪಡೆಯಲಾಯಿತು. ಕೆಲವೇ ಕೆಲವು ಮಾರ್ಪಟುಗಳೊಂದಿಗೆ ಅದನ್ನು ಮತ್ತೆ ಮಂಡಿಸಲಾಯಿತು. ಹೊಸದಾಗಿ ಸೇರ್ಪಡೆಯಾದ ಅಂಶಗಳಲ್ಲಿ ಮಸೂದೆ ಮತ್ತಷ್ಟು ವಿಳಂಬವಾಗಲು ಕಾರಣವಾಗಬಹುದಾದ ಅಂಶಗಳಿದ್ದವು. ಆ ಬಗೆಗೆ ಎಡಪಕ್ಷಗಳಿಗೆ ಕೆಲವು ಆಕ್ಷೇಪಗಳಿದ್ದರೂ ಸಾಧ್ಯವಾದಷ್ಟು ಬೇಗ ಮಸೂದೆ ಕಾಯಯ್ದೆಯಾಗಿ ಬರಲಿ ಎಂಬ ಉದ್ದೇಶದಿಂದ ಮಸೂದೆಗೆ ಒಪ್ಪಿಗೆ ನೀಡಲಾಯಿತು. ಆದರೆ ವಿಧಾನ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯುವಾಗಲೇ ಒಬ್ಬ ಮಹಿಳಾ ಶಾಸಕಿ ಸೇರಿದಂತೆ ಎಡಪಕ್ಷಗಳ ಇಬ್ಬರು ಶಾಸಕರ ಮೇಲೆ ದೈಹಿಕ ಹಲ್ಲೆ ನಡೆಯಿತು.

ಹಿಂದೆ 1980 ದಶಕದ ಆರಂಭದಲ್ಲಿ ಮತ್ತು ಆನಂತರವೂ ಸಹ ಬಡ ಹೂಡಿಕೆದಾರರಿಗೆ ವಂಚನೆಯಾದಾಗ ಅಂದಿನ ಎಡರಂಗ ಸರ್ಕಾರ ಬಿಗಿಯಾದ ಕ್ರಮವಹಿಸಿ ವಂಚಕ ಕಂಪನಿಗಳ ಸ್ಥಿರ, ಚರ ಆಸ್ತಿಗಳನ್ನು, ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡು ಸೂಕ್ತ ಶಾಸನ ಮತ್ತು ಕಾನೂನು ಕ್ರಮದ ಮೂಲಕ ನ್ಯಾಯ ಒದಗಿಸಿದ ಉದಾಹರಣೆ ಇದೆ. ಈಗ ಅಂತಹ ಬಿಗಿ ಕ್ರಮವಹಿಸಲು ಒತ್ತಾಯಿಸಲಾಗಿದೆ. ಈ ಹಗರಣದ ಸಂಬಂಧ ಎಡಪಕ್ಷಗಳ ನಿಯೋಗ ಪ್ರಧಾನಿಯವರನ್ನು ಕಂಡು ಲಿಖಿತವಾಗಿಯೂ ಮನವಿ ಸಲ್ಲಿಸಿದೆ. ಪಶ್ಚಿಮ ಬಂಗಾಳದ ಜನ ಸಾಮಾನ್ಯರು ಅಂಚೆ ಇಲಾಖೆಯ ಉಳಿತಾಯ ಖಾತೆಯಿಂದ ದೂರ ಸರಿಯಲು ಕಾರಣವಾದ ಬಡ್ಡಿ ದರ ಕಡಿತದ ನೀತಿಯನ್ನು ವಾಪಸ್ ಪಡೆಯಬೇಕೆಂದು ಸಹ ಎಡಪಕ್ಷಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸಿವೆ.

ಮೇದಿನದ ಪ್ರಣಾಳಿಕೆ–2013......

ಪುಟ 2 ರಿಂದ

...ಎಚ್ಚರಿಸುತ್ತವೆ. ಅಮೆರಿಕ ಮತ್ತು ಅದರ ಮಿತ್ರರ ಇಂತಹ ಭಯ ಹುಟ್ಟಿಸುವ ರಾಜಕೀಯ-ಮಿಲಿಟರಿ ಕ್ರಮಗಳು, ಹಸ್ತಕ್ಷೇಪಗಳು, ಹುನ್ನಾರಗಳು, ಒಂದು ಆಕ್ರಮಣಕಾರಿ ಮತ್ತು ಆಧಿಪತ್ಯ ನಡೆಸುವ ಕಾರ್ಯತಂತ್ರ ಕಳೆದ ಒಂದು ವರ್ಷದಲ್ಲಿ ವಿಶ್ವವ್ಯಾಪಿಯಾಗಿ ಆರ್ಥಿಕ ಬಿಕ್ಕಟ್ಟು ಆಳಗೊಳ್ಳುವುದರೊಂದಿಗೆ ಇನ್ನಷ್ಟು ವೇಗ ಪಡೆದುಕೊಂಡಿದೆ. ಸಿಐಟಿಯು ಅಮೆರಿಕಾ-ಬೆಂಬಲಿತ ಇಸ್ರೇಲಿ ದಾಳಿಗಳ ವಿರುದ್ಧ ಪ್ಯಾಲೆಸ್ತೀನೀ ಜನತೆಯ ಹೋರಾಟಕ್ಕೆ ಬೆಂಬಲವನ್ನು ಪುನರುಚ್ಚರಿಸುತ್ತದೆ ಮತ್ತು 1967ರ ಗಡಿಗಳುಳ್ಳ, ಪೂರ್ವ ಜೆರುಸಲೇಂ ಅನ್ನು ರಾಜಧಾನಿಯಾಗುಳ್ಳ ಒಂದು ಸ್ವತಂತ್ರ ಸಾರ್ವಭೌಮ ಪ್ಯಾಲೆಸ್ತೀನ್ ಪ್ರಭುತ್ವಕ್ಕೆ ಮಾನ್ಯತೆ ನೀಡಬೇಕೆಂಬ ವಿಶ್ವದೆಲ್ಲೆಡೆಯ ದುಡಿಯುವ ಜನತೆಯ ಬೇಡಿಕೆಗೆ ದನಿಗೂಡಿಸುತ್ತದೆ.


ಸಿಐಟಿಯು, ಸಾಮ್ರಾಜ್ಯಶಾಹಿಯ ವಿರುದ್ಧ ಸೆಣಸುವುದು ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ವರ್ಗಹೋರಾಟದ ಒಂದು ಅವಿಭಾಜ್ಯ ಅಂಗ ಎಂದು ದೃಢವಾಗಿ ಎತ್ತಿ ಹಿಡಿಯುತ್ತದೆ ಮತ್ತು ಕಾರ್ಮಿಕ ಆಂದೋಲನದ ಸಾಮ್ರಾಜ್ಯಶಾಹಿ-ವಿರೋಧಿ ಪ್ರಜ್ಞೆಯನ್ನು, ಅದೇ ರೀತಿ ಅಂತರ್ರಾಷ್ಟ್ರೀಯ ಸೌಹಾರ್ದತೆಯ ಪ್ರಜ್ಞೆಯನ್ನು ಎತ್ತರಿಸುವ ಕೆಲಸವನ್ನು ಆದ್ಯತೆಯಿಂದ ಕೈಗೆತ್ತಿಕೊಳ್ಳುತ್ತದೆ.

ಸಾಮ್ರಾಜ್ಯಶಾಹೀ ಶಕ್ತಿಗಳ ನೇರ ಮತ್ತು ಪರೋಕ್ಷ ಹಿಡಿತಗಳಿಂದ ಅರಬ್ ಜಗತ್ತಿನ ಜನತೆಯ ವಿಮೋಚನೆ ಮತ್ತು ಆಫ್ರಿಕಾ ಹಾಗೂ ಮಧ್ಯಪ್ರಾಚ್ಯದ ದೇಶಗಳಲ್ಲಿ ನೈಜ ಪ್ರಜಾಸತ್ತಾತ್ಮಕ ಜನತಾ ಆಳ್ವಿಕೆಯ ಸ್ಥಾಪನೆ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ಬಹಳಷ್ಟು ನೆರವಾಗುತ್ತದೆ. ಲ್ಯಾಟಿನ್ ಅಮೆರಿಕದ ಜನತೆಯ ಹೋರಾಟದ ನಿರ್ದಿಷ್ಟ ಅನುಭವ, ವರ್ಗಹೋರಾಟದ ತತ್ವಕ್ಕೆ ಬದ್ಧವಾದ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಜನತೆಯ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವೇ ಆಂಗ್ಲೋ-ಅಮೆರಿಕನ್ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಅರಬ್ ಪ್ರದೇಶದಿಂದ ಹೊಡೆದೋಡಿಸುವ ದಾರಿ ಎಂಬುದನ್ನು ದೃಢಪಡಿಸುತ್ತದೆ.

ಲ್ಯಾಟಿನ್ ಅಮೆರಿಕಾದ ಜನತೆಗೆ ಶುಭಾಶಯಗಳು

ಈ ಮೇದಿನದಂದು ಸಿಐಟಿಯು, ಸಾಮ್ರಾಜ್ಯಶಾಹಿ ಆರ್ಥಿಕ ಲೂಟಿಯ ವಿರುದ್ಧ, ಸಾಮ್ರಾಜ್ಯಶಾಹಿಗಳು ಹಿಮ್ಮೆಟ್ಟುವಂತೆ ಮಾಡಲು ದೃಢ ನಿರ್ಧಾರದ ಹೋರಾಟಗಳನ್ನು ಮುಂದುವರೆಸುತ್ತಿರುವ ಲ್ಯಾಟಿನ್ ಅಮೆರಿಕಾ ಪ್ರದೇಶದ ಜನತೆ ಮತ್ತು ಕಾರ್ಮಿಕ ವರ್ಗಕ್ಕೆ ಶುಭಾಶಯಗಳನ್ನು ಕೋರುತ್ತದೆ.

ವೆನೆಝುವೆಲ, ಬೊಲೀವಿಯ, ಇಕ್ವೆಡೊರ್, ನಿಕರಗುವ ಮತ್ತು ಇತರ ಕೆಲವು ದಕ್ಷಿಣ ಅಮೆರಿಕಾ ಖಂಡದ ದೇಶಗಳಲ್ಲಿ ಎಡ-ಪರ ರಾಜಕೀಯ ಶಕ್ತಿಗಳ ವಿಜಯ ಮತ್ತು ನವ-ಉದಾರವಾದಕ್ಕೆ ಒಂದು ಪರ್ಯಾಯಕ್ಕಾಗಿ ಅವರು ನಡೆಸಿರುವ ಪ್ರಯತ್ನ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಒಂದು ತೀವ್ರ ಹೊಡೆತವನ್ನು ಕೊಟ್ಟಿದೆ. 33 ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ಪ್ರದೇಶದ ದೇಶಗಳು ವೆನೆಝುವೆಲದಲ್ಲಿ ಒಟ್ಟು ಸೇರಿ ಸಭೆ ನಡೆಸಿ 'ಲ್ಯಾಟಿನ್ ಅಮೆರಿಕನ್ ಮತ್ತು ಕೆರಿಬಿಯನ್ ಪ್ರಭುತ್ವಗಳ ಸಮುದಾಯ'(ಸೆಲಾಕ್) ಎಂಬ ಪ್ರಾದೇಶಿಕ ವೇದಿಕೆಯನ್ನು ಸ್ಥಾಪಿಸುವುದರೊಂದಿಗೆ ಅಲ್ಲಿ ಮೂಡಿಬರುತ್ತಿರುವ ಹೊಸ ಸಹ-ಸಂಬಂಧಗಳು ಮತ್ತು ಸಂಯೋಜನೆಗಳು ಒಂದು ಬಹಳ ಮಹತ್ವದ ಮತ್ತು ಸಕಾರಾತ್ಮಕವಾದ ಬೆಳವಣಿಗೆ. ಸಿಐಟಿಯು, ನವ-ಉದಾರವಾದಿ ಸಾಮ್ರಾಜ್ಯಶಾಹಿ ದಾರಿಗೆ ವೆನೆಝುವೆಲಾದ ಪರ್ಯಾಯಕ್ಕೆ ಹುಗೊ ಚವೇಝ್ ನೀಡಿದ ವೀರ ಕೊಡುಗೆಯನ್ನು ಗೌರವಭಾವದಿಂದ ನೆನಪಿಸಿಕೊಳ್ಳುತ್ತದೆ.



ಸಮಾಜವಾದಿ ಕ್ಯೂಬ ಈಗಲೂ ಸಮಸ್ತ ಲ್ಯಾಟಿನ್ ಅಮೆರಿಕಾ ಖಂಡದಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳಿಗೆ ಒಂದು ದಾರಿದೀಪವಾಗಿದೆ. ಸಮಾಜವಾದಿ ಕ್ಯೂಬ ಲ್ಯಾಟಿನ್ ಅಮೆರಿಕಾದ ಜನತೆಗೆ ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ಪ್ರೇರಣೆ ಒದಗಿಸುವಲ್ಲಿ, ಅವರನ್ನು ಒಂದುಗೂಡಿಸುವಲ್ಲಿ ಮತ್ತು ಅಣಿನೆರೆಸುವಲ್ಲಿ ವೇಗವರ್ಧಕದ ಪಾತ್ರ ವಹಿಸಿದೆ. ಅಷ್ಟೇ ಅಲ್ಲ, 50 ವರ್ಷಗಳಿಗಿಂತಲೂ ಹೆಚ್ಚು ಕಾಲ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಇತರ ಕ್ರಾಂತಿ-ವಿರೋಧಿ ಶಕ್ತಿಗಳ ಆರ್ಥಿಕ ದಿಗ್ಬಂಧನಕ್ಕೆ ಮತ್ತು ಪಿತೂರಿಗಳ ದಾಳಿಗಳಿಗೆ ಒಳಗಾಗಿದ್ದರೂ, ಕ್ಯೂಬ ಸಾಧಿಸಿರುವ ಸಾಮಾಜಿಕ ಪ್ರಗತಿ ಕಾರ್ಮಿಕ ವರ್ಗಕ್ಕೆ ಒಂದು ಮಹಾನ್ ಸ್ಫೂರ್ತಿಯ ಸಂಗತಿ.

ಆಳಗೊಳ್ಳುತ್ತಿರುವ ಬಿಕ್ಕಟ್ಟು, ಉಕ್ಕಿ ಬರುತ್ತಿರುವ ಹೋರಾಟಗಳು ಮತ್ತು ಮೇದಿನ 2013

ಸಮಸ್ತ ಬಂಡವಾಳಶಾಹಿ ಜಗತ್ತು ಬಿಕ್ಕಟ್ಟು ಮತ್ತು ಹಿಂಜರಿತದಿಂದ ಅಲುಗಾಡುತ್ತಿದೆ, ಮತ್ತು ದುಡಿಯುವ ಜನತೆ ಬಿಕ್ಕಟ್ಟನ್ನು ತಂದ ಬಂಡವಾಳಶಾಹಿ ವರ್ಗದಲ್ಲಿನ ಮಂದಿ ತಮ್ಮ ಮೇಲೆ ಎಸೆಯುತ್ತಿರುವ ಬಿಕ್ಕಟ್ಟಿನ ಹೊರೆಯನ್ನು ತೆಪ್ಪಗೆ ಸ್ವೀಕರಿಸದೆ ಬೀದಿಗಳಲ್ಲಿ ಧನಿಯೆತ್ತುತ್ತಿದ್ದಾರೆ. ಉಲ್ಬಣಗೊಳ್ಳುತ್ತಿರುವ ಬಿಕ್ಕಟ್ಟು ಮತ್ತು ಉಕ್ಕೇರಿ ಬರುತ್ತಿರುವ ಜನತೆಯ ಹೋರಾಟಗಳ ಹಿನ್ನೆಲೆಯಲ್ಲಿ ಮೇದಿನ 2013 ಬಂದಿದೆ.

ಕಳೆದ ಒಂದು ವರ್ಷ ಜಗತ್ತಿನ ಎಲ್ಲೆಡೆಗಳಲ್ಲಿ ಕಾಣಬಂದಿರುವ ಕಾರ್ಮಿಕ ವರ್ಗದ ಮುಷ್ಕರಗಳು ಮತ್ತು ಹೋರಾಟಗಳು ಹಾಗೂ ಸಮರಧೀರ ಸಭೆಗಳು-ಪ್ರದರ್ಶನಗಳು ಅಪಾರ ಉತ್ಸಾಹ ತುಂಬಿರುವ ಸಂಗತಿ; ಬಂಡವಾಳಶಾಹಿ ದೇಶಗಳಲ್ಲಿ ಮಿತವ್ಯಯದ ಕ್ರಮಗಳ ಹೆಸರಿನಲ್ಲಿ ಉದ್ಯೋಗ-ಕಡಿತಗಳು, ವೇತನ-ಕಡಿತಗಳು, ಸಾಮಾಜಿಕ ಭದ್ರತೆಗಳಲ್ಲಿ ಕಡಿತ ಮತ್ತು ಸಂಬಂಧಪಟ್ಟ ಸರಕಾರಗಳ ಸಬ್ಸಿಡಿಗಳು ಮತ್ತು ಕಲ್ಯಾಣ ಖರ್ಚುಗಳಲ್ಲಿ ತೀವ್ರ ಇಳಿಕೆಯ ಮೂಲಕ ಜನಸಾಮಾನ್ಯರ ಮೇಲೆ ಬಿಕ್ಕಟ್ಟಿನ ಹೊರೆಯನ್ನು ದಾಟಿಸುವ ಬಂಡವಾಳಶಾಹಿ ವರ್ಗದ ಹುನ್ನಾರಗಳನ್ನು ವಿರೋಧಿಸುವಲ್ಲಿ ಮತ್ತು ಪ್ರತಿರೋಧಿಸುವಲ್ಲಿ ಕಾರ್ಮಿಕರಷ್ಟೇ ಅಲ್ಲ, ಜೀವನದ ಎಲ್ಲ ರಂಗಗಳ ಜನಗಳೂ ಸೇರುತ್ತಿದ್ದಾರೆ. ಸಮಸ್ತ ಯುರೋಪ್, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಏಶ್ಯ ಹಾಗೂ ಆಫ್ರಿಕಾದ ದೇಶಗಳಲ್ಲಿ ಮುಷ್ಕರಗಳು ಮತ್ತು ಸಮರಧೀರ ಮತಪ್ರದರ್ಶನಗಳು ಮಾರ್ದನಿಗೊಳ್ಳುತ್ತಿವೆ.

ಈಗಿನ ಬಿಕ್ಕಟ್ಟು ಮತ್ತು ಜಾಗತಿಕ ಹಿಂಜರಿತ ಸಟ್ಟಾಕೋರ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಮಿತಿಯಿಲ್ಲದ ಲಾಭದಾಹದಿಂದ ಪ್ರೇರಿತವಾದ ನವ-ಉದಾರವಾದಿ ಆರ್ಥಿಕ ವ್ಯವಸ್ಥೆಯ ಅನಿವಾರ್ಯ ಅಂತಿಮ ಫಲ. ಈ ದಾರಿ-ದಿಕ್ಕನ್ನು ಸರಿಪಡಿಸುವ ಬದಲು ಬಂಡವಾಳಶಾಹಿ ನೇತೃತ್ವದ ಆಳುವ ವರ್ಗಗಳು ಹೊರೆಗಳನ್ನು ಕಾರ್ಮಿಕರ ಮೇಲೆ, ಒಟ್ಟಾರೆಯಾಗಿ ಜನತೆಯ ಮೇಲೆ ದಾಟಿಸಿ ಬಿಕ್ಕಟ್ಟಿನಿಂದ ಚೇತರಿಸಿಕೊಳ್ಳುವ ಪ್ರಯತ್ನ ನಡೆಸಿವೆ. ಇದರಿಂದ ಅದಾಗಲೇ ಇದೇ ಬಿಕ್ಕಟ್ಟಿನಿಂದಾಗಿ ವಿಪರೀತ ಮಟ್ಟಕ್ಕೆ ತಳ್ಳಲ್ಪಟ್ಟಿದ್ದ ನಿರುದ್ಯೋಗ, ಉದ್ಯೋಗನಷ್ಟಗಳು ಮತ್ತು ದಾರಿದ್ರ್ಯ ಇನ್ನಷ್ಟು ಉಲ್ಬಣಗೊಂಡು, ಆಮೂಲಕ ಆರ್ಥಿಕ ಬಿಕ್ಕಟ್ಟು ಮತ್ತು ಹಿಂಜರಿತವನ್ನು ಇನ್ನಷ್ಟು ಉಲ್ಬಣಗೊಳಿಸಲಾಗುತ್ತಿದೆ.

ಈ ಮಿತವ್ಯಯದ್ದೆನ್ನಲಾದ ಕ್ರಮಗಳು ಮತ್ತು ಖಾಸಗೀಕರಣದ ಕಸರತ್ತುಗಳ ಬಗ್ಗೆ ಟಿಪ್ಪಣಿ ಮಾಡುತ್ತ ನೋಬೆಲ್ ಪಾರಿತೋಷಕ ವಿಜೇತ ಅರ್ಥಶಾಸ್ತ್ರಜ್ಞ ಜೊಸೆಫ್ ಸ್ಟಿಗ್ಲಿಟ್ಝ್ "ಈ ಔಷಧಿ ಪೂರ್ವ ಏಶ್ಯಾದಲ್ಲಿ, ಲ್ಯಾಟಿನ್ ಅಮೆರಿಕಾದಲ್ಲಿ ಮತ್ತು ಇತರೆಡೆಗಳಲ್ಲಿ ವಿಫಲವಾಗಿದೆ ಮತ್ತು ಯುರೋಪಿನಲ್ಲೂ ವಿಫಲವಾಗುತ್ತದೆ" ಎಂದಿದ್ದಾರೆ. ಬೇರೇಕೆ, ಸ್ವತಃ ವಿಶ್ವ ಬ್ಯಾಂಕಿನ ಅಧ್ಯಕ್ಷ ಝೊಯ್ಲಿಕ್ ಅವರೇ ಆಗಸ್ಟ್ 14ರಂದು ಸಿಡ್ನಿಯಲ್ಲಿ ಒಂದು ಸಮಾರಂಭದಲ್ಲಿ ಮಾತಾಡುತ್ತ, ಯುರೋಪ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ಘಟನೆಗಳಲ್ಲಿ ಒಂದು ಸಾಮ್ಯತೆ ಇದ್ದು, ಪರಿಸ್ಥಿತಿಯನ್ನು "ಒಂದು ಹೊಸ ಅಪಾಯದ ವಲಯಕ್ಕೆ ತಳ್ಳುತ್ತಿದೆ... ...'ನಾಟಕ'ದಿಂದ 'ಯಾತನೆ'ಯತ್ತ ಚಲಿಸುತ್ತಿದೆ" ಎಂದು ಹೇಳಿದ್ದಾರೆ.

ಬಿಕ್ಕಟ್ಟಿಗೆ ಒಂದು ಪರಿಹಾರ ಕಂಡು ಹಿಡಿಯುವ ಪಟುತ್ವ ಬಂಡವಾಳಶಾಹಿ ವ್ಯವಸ್ಥೆಗೆ ಇಲ್ಲ ಎಂದು ಜಗತ್ತಿನಾದ್ಯಂತ ಜನತೆಯೆದುರು ಬಯಲಾಗಲಾರಂಭಿಸಿದೆ. "ತೊಂಭತ್ತು ಶೇಕಡಾಕ್ಕೆ ಎದುರಾಗಿ ಒಂದು ಶೇಕಡಾ" ಎಂದು ಅಂತರ್ರಾಷ್ಟ್ರೀಯವಾಗಿ ಎತ್ತಿರುವ, ಇಂದು ಬಹಳ ಜನಪ್ರಿಯವಾಗಿರುವ ಘೋಷಣೆ ಇದರ ಒಂದು ಸಂಕೇತ. ವರ್ಗನಿಲುವು ಹೊಂದಿರುವ ಕಾರ್ಮಿಕ ಆಂದೋಲನ ಈ ಸಂಕೇತವನ್ನು ವ್ಯಾಪಕವಾದ ಪ್ರಜ್ಞೆಯೊಳಕ್ಕೆ ಒಯ್ಯಬೇಕು ಮತ್ತು ಅದು ಮೇದಿನ 2013ರ ಸಮರಕಹಳೆ ಆಗಬೇಕು.


ಪಶ್ಚಾತ್ತಾಪ ಪಡುವ...

ಪುಟ 9 ರಿಂದ

ಅಧಿಕಾರಕ್ಕಾಗಿ ಯಾರ ಜೊತೆಯಲ್ಲೂ ಕೈ ಜೋಡಿಸಲು ಮುಂದಾಗುವ ಅದರ ಸಮಯ ಸಾಧಕ ಪ್ರವೃತ್ತಿಯಿಂದಾಗಿ ಮೂರನೆ ಪರ್ಯಾಯವಾಗಿ ಬೆಳೆಯುವ ಅವಕಾಶವನ್ನು ಅದು ಕಳೆದುಕೊಳ್ಳುತ್ತಿದೆ. ಈ ಸಲದ ಚುನಾವಣೆಯಲ್ಲಿ ಬಿಜೆಪಿಯನ್ನೂ ಮತ್ತು ಕಾಂಗ್ರೆಸ್‌ನ್ನೂ ಎದುರಿಸಿ ಸೋಲಿಸಬೇಕೆಂಬ ಗುರಿಯನ್ನು ಅದು ಇಟ್ಟುಕೊಳ್ಳಬೇಕಾಗಿತ್ತು. ಅದೇ ಗುರಿಯನ್ನು ಹೊಂದಿದ್ದ ಎಡಪಕ್ಷಗಳನ್ನು ಹಾಗೂ ಇತರ ಪ್ರಗತಿಪರ ಗುಂಪುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಸಿದ್ಧಾಂತರಹಿತ ರಾಜಕಾರಣಕ್ಕೆ ಒಗ್ಗಿರುವ ಕುಮಾರಸ್ವಾಮಿ ಜನತೆಯ ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳಲು ವಿಫಲರಾಗುತ್ತಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ವಿರೋಧಿ ಮತಗಳು ದೊಡ್ಡ ಸಂಖ್ಯೆಯಲ್ಲಿ ಇವೆ. ಕಾಂಗ್ರೆಸ್ ವಿರೋಧಿ ಮತಗಳು ಛಿಧ್ರವಾಗದಂತೆ ತಡೆಯುವ ತಂತ್ರವನ್ನು ಜೆಡಿಎಸ್ ಮಾಡಬೇಕಾಗಿದೆ. ಹಾಗೆಯೇ ಈ ಸಲ ಬಿಜೆಪಿ ಆಡಳಿತ ವಿರೋಧಿ ಅಲೆಯ ಪರಿಣಾಮವಾಗಿ ಹೊರಹೊಮ್ಮುವ ಮತಗಳ ಲೆಕ್ಕಾಚಾರ ಮಾಡಬೇಕಾಗಿದೆ. ಆದರೆ ಜೆಡಿಎಸ್ ಬಿಜೆಪಿ ವಿರೋಧಿ ಮತಗಳನ್ನಾಗಲಿ ಕಾಂಗ್ರೆಸ್ ವಿರೋಧಿ ಮತಗಳನ್ನಾಗಲಿ ತನ್ನತ್ತ ಸೆಳೆಯುವಲ್ಲಿ ಜೆಡಿಎಸ್ ಸಂಪೂರ್ಣ ವಿಫಲವಾಗಿದೆ. ಇದಕ್ಕಾಗಿ ಬೇರೆಯವರ ಮೇಲೆ ಗೂಬೆ ಕೂರಿಸುವುದರಲ್ಲಿ ಅರ್ಥವಿಲ್ಲ ಪ್ರಸಕ್ತ ಹಿನ್ನಡೆಯಿಂದ ಅದು ಪಾಠ ಕಲಿಯುವಂತಾಗಬೇಕು. ಪರ್ಯಾಯ ಧೋರಣೆಗಳಿಗೆ ಬದ್ಧವಾಗಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಮತ್ತೊಂದು 10 ಕೋಟಿ ರೂ.ಲಂಚ ಪ್ರಕರಣ: ಮತ್ತೊಬ್ಬ ಯುಪಿಎ ಮಂತ್ರಿಯ ಮೇಲೆ ಸಂದೇಹ



ಯುಪಿಎ-2 ಸರಕಾರದ ಅಡಿಯಲ್ಲಿ ಮತ್ತೊಂದು 10 ಕೋಟಿ ರೂ.ಗಳ ಲಂಚ ಪ್ರಕರಣ ಬೆಳಕಿಗೆ ಬಂದಿದೆ. ಸಿಬಿಐ ತನಿಖೆ ರೈಲು ಮಂತ್ರಿಯ ಬುಡದ ವರೆಗೂ ಬರುವ ಸಂಭವವಿದೆ. ರೈಲ್ವೆ ಮಂಡಳಿಯ ಸದಸ್ಯ ಮಹೇಶ್ ಕುಮಾರ್ ಎಂಬಾತ ಈಗ ಅಮಾನತಿನಲ್ಲಿದ್ದರೆ, ಆತನಿಂದ ಲಂಚ ಪಡೆದ ಆಪಾದನೆಯ ಮೇಲೆ ರೈಲು ಮಂತ್ರಿಗಳ ಅಳಿಯ ವಿಜಯ ಸಿಂಗ್ಲಾನನ್ನು ಸಿಬಿಐ ಬಂಧಿಸಿದೆ.

ಮಹೇಶ ಕುಮಾರ್ ರೈಲ್ವೆ ಮಂಡಳಿಯ ಸದಸ್ಯ(ವಿದ್ಯುತ್) ಹುದ್ದೆ ಪಡೆಯಲಿಕ್ಕಾಗಿ ಸಂದೀಪ್ ಗೋಯಲ್ ಎಂಬ ಮಧ್ಯವರ್ತಿಯನ್ನು ಸಂಪರ್ಕಿಸಿದ್ದು ಆತ 10ಕೋಟಿ ರೂ. ಲಂಚ ಕೊಟ್ಟರೆ ಆ ಹುದ್ದೆ ಕೊಡಿಸುವುದಾಗಿ ಭರವಸೆ ನೀಡಿದ್ದನಂತೆ. ಈ ನಡುವೆ ಮಹೇಶ್ ಕುಮಾರ್ ರೈಲ್ವೆ ಮಂಡಳಿಯ ಸದಸ್ಯ(ಸಿಬ್ಬಂದಿ) ಎಂಬ ಹುದ್ದೆಗೆ ನೇಮಕಗೊಂಡು, ಜತೆಗೆ ಪಶ್ಚಿಮ ರೈಲ್ವೆ ವಿಭಾಗದ ಜನರಲ್ ಮ್ಯಾನೇಜರ್ ಹುದ್ದೆ ಕೊಡಿಸಲು ಗೋಯಲ್ ಒತೆಗೆ 2ಕೋಟಿ ರೂ.ಗೆ 'ಮಧ್ಯಂತರ ವ್ಯವಹಾರ' ಕುದುರಿಸಿದ್ದು ಅದರ ಮೊದಲ ಕಂತಾಗಿ 90ಲಕ್ಷ ರೂ.ಗಳನ್ನು ರೈಲ್ವೆ ಮಂತ್ರಿಗಳ ಅಳಿಯ ವಿಜಯ್ ಸಿಂಗ್ಲಾಗೆ ಕೊಟ್ಟಿರುವುದಾಗಿ ಸಿಬಿಐ ಇದುವರೆಗಿನ ತನಿಖೆಗಳಿಂದ ಕಂಡುಕೊಂಡಿರುವ ಸಂಗತಿ. ಇದನ್ನು ಒದಗಿಸಿದಾತ ಬೆಂಗಳೂರಿನ ಒಬ್ಬ ವ್ಯಾಪಾರಿ. ಇವರೆಲ್ಲರೂ ಈಗ ಸಿಬಿಐ ಕಸ್ಟಡಿಯಲ್ಲಿದ್ದಾರೆ.

ಮಹೇಶ್ ಕುಮಾರ್ ತಾನು ಕೊಡಲೊಪ್ಪಿದ್ದ ಲಂಚದ 10 ಕೋಟಿ ರೂ.ಗಳನ್ನು ಇಂತಹ ಕೆಲವು ವ್ಯಾಪಾರಿಗಳಿಂದ ಸಂಗ್ರಹಿಸುವ, ತಾನು ಬಯಸಿದ ಹುದ್ದೆ ದೊರೆತ ಮೇಲೆ ಅವರೆಲ್ಲರಿಗೂ ಸೂಕ್ತ ಕಾಂಟ್ರಾಕ್ಟ್‌ಗಳ ಮೂಲಕ ರೈಲ್ವೆ ಖಜಾನೆಯಿಂದ ಅವರೆಲ್ಲರ 'ಋಣ' ತೀರಿಸುವ ಯೋಜನೆ ರೂಪಿಸಿದ್ದಂತೆ ಕಾಣುತ್ತದೆ.

ರೈಲ್ವೆ ಮಂಡಳಿ ಸದಸ್ಯರ ನೇಮಕ ಹಾಗೂ ಮಂಡಳಿಯೊಳಗೆ ಬೇರೆ ಹುದ್ದೆಗೆ ವರ್ಗಾವಣೆ ವಿಜಿಲೆಂಸ್‌ನ ಮಂಜೂರಾತಿ ಮತ್ತು ಸಂಪುಟದ ನೇಮಕ ಸಮಿತಿಯ ಒಪ್ಪಿಗೆಯ ನಂತರ ನಡೆಯುತ್ತದೆ. ಆದರೆ ಮಂಡಳಿಯ ಸದಸ್ಯರೊಬ್ಬರಿಗೆ ಹೆಚ್ಚಿನ ಹುದ್ದೆ ಕೊಡುವ ಅಧಿಕಾರ ರೈಲ್ವೆ ಮಂತ್ರಿಗಳಿಗಿದೆ. ಸಿಬಿಐ ಈಗ ಮಹೇಶ್ ಕುಮಾರ್‌ನ "ಸದಸ್ಯತ್ವ ಸ್ವರೂಪವನ್ನು ಬದಲಿಸುವ ಮತ್ತು ಆತ ಜಿಎಂ ಹುದ್ದೆಯಲ್ಲಿ ಮುಂದುವರೆಸುವ ಅಧಿಕಾರ ಹೊಂದಿರುವವರ ಪಾತ್ರ" ದ ತನಿಖೆ ನಡೆಸುತ್ತಿದ್ದು, ಈ ಸಂದರ್ಭದಲ್ಲಿ ರೈಲು ಮಂತ್ರಿಗಳಿಂದ 'ಸ್ಪಷ್ಟೀಕರಣ' ಕೇಳುವ ಸಾಧ್ಯತೆ ಇದೆ ಎನ್ನಲಾಗಿದೆ. ಮಂತ್ರಿಗಳ ಅಳಿಯ ರೈಲು ಮಂತ್ರಿಗಳಿಗೆ ನಿಕಟವಿರುವ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದುದಕ್ಕೆ ಸಿಬಿಐ ಸಾಕಷ್ಟು ಸಾಕ್ಷ್ಯಗಳನ್ನು ಸಂಗ್ರಹಿಸಿದೆಯಂತೆ.

ಈ ಹಿನ್ನೆಲೆಯಲ್ಲಿ ರೈಲು ಮಂತ್ರಿಗಳ ರಾಜೀನಾಮೆಗೆ ಆಗ್ರಹ ಬಂದಿದೆ. ಒಂದು ವೇಳೆ ಮಂತ್ರಿಗಳಿಗೆ ಈ 'ವ್ಯವಹಾರ'ದಲ್ಲಿ ನೇರ ಸಂಬಂಧವಿಲ್ಲದಿದ್ದರೂ, ಇದೊಂದು ಉನ್ನತ ಹಂತದಲ್ಲಿನ ಲಂಚದ ಪ್ರಕರಣವಾಗಿದ್ದು, ಅವರ ಇಲಾಖೆಯ ಉನ್ನತ ಸಂಸ್ಥೆಯಾದ ರೈಲ್ವೆ ಮಂಡಳಿ ಮತ್ತು ಸ್ವತಃ ತನ್ನ ಅಳಿಯನ ಹೆಸರುಗಳಿರುವುದರಿಂದ ಈ ಪ್ರಕರಣದ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ರೈಲ್ವೆ ಅಧಿಕಾರಿಗಳ ಸಂಘಟನೆಯೂ ರೈಲ್ವೆ ಇಲಾಖೆಯ ಉನ್ನತ ಹುದ್ದೆಗಳ ನೇಮಕಾತಿಯಲ್ಲಿ ಅಪಾರದರ್ಶಕತೆ ಮತ್ತು ಅವ್ಯವಹಾರಗಳ ವಿವರಗಳನ್ನು ಸಂಪುಟ ಕಾರ್ಯದರ್ಶಿಗಳಿಗೆ ಮತ್ತು ಪ್ರಧಾನ ಮಂತ್ರಿಗಳ ಪ್ರಮುಖ ಕಾರ್ಯದರ್ಶಿಗಳಿಗೆ ಸಲ್ಲಿಸಿದೆ ಎಂದೂ ವರದಿಯಾಗಿದೆ. ಪ್ರಧಾನ ಮಂತ್ರಿಗಳದ್ದು ಇವೆಲ್ಲದರ ಬಗ್ಗೆ ಎಂದಿನಂತೆ ದಿವ್ಯಮೌನ.

ಆದರೆ ಯುಪಿಎ-2 ಸರಕಾರಕ್ಕೆ ಇಂತಹ ನೈತಿಕತೆಯಲ್ಲಿ ಯಾವುದೇ ನಂಬಿಕೆ ಉಳಿದಿರುವಂತೆ ಕಾಣುತ್ತಿಲ್ಲ. ಅದರ ಕಾನೂನು ಮಂತ್ರಿಗಳು ಸಿಬಿಐ ತನಿಖೆಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆ ಎಂದು ಸ್ವತಃ ಸಿಬಿಐ ನಿರ್ದೇಶಕರೇ ಸುಪ್ರಿಂ ಕೋರ್ಟಿನ ಮುಂದೆ ಹೇಳಿದ್ದರೂ, ನ್ಯಾಯಾಲಯ ಈ ಬಗ್ಗೆ ಕಟು ಟಿಪ್ಪಣಿ ಮಾಡಿದ್ದರೂ ಆತನಿಂದ ರಾಜೀನಾಮೆ ಪಡೆಯುವ ಯೋಚನೆಯೇ ಇದ್ದಂತಿಲ್ಲ.

ಇಪ್ಪತ್ತು ವರ್ಷಗಳಲ್ಲಿ ಒಂದೂವರೆ ಕೋಟಿ ಬೇಸಾಯಗಾರರು 'ಮಾಯ'!

ಕಳೆದ(2001ರ) ಜನಗಣತಿಯಿಂದ ಈ ಬಾರಿಯ ಜನಗಣತಿಯ ನಡುವೆ ಬೇಸಾಯಗಾರರ ಸಂಖ್ಯೆಯಲ್ಲಿ 90 ಲಕ್ಷದಷ್ಟು ಇಳಿಕೆಯಾಗಿದೆ ಎಂದು ಜನಗಣತಿ ರಿಜಿಸ್ಟ್ರಾರ್‌ರವರ ಕಚೇರಿಯ ಕಳೆದ ವಾರದ ಪ್ರಕಟಣೆಯೊಂದು ತಿಳಿಸುತ್ತದೆ. ಒಟ್ಟು ಜನಸಂಖ್ಯೆಯಲ್ಲಿ ಬೇಸಾಯಗಾರರ ಪ್ರಮಾಣವೇನೋ 1971ರಿಂದ ಇಳಿಯುತ್ತ ಬಂದಿದೆ. ಆದರೆ ಈ ಬಾರಿಯ ವಿಶೇಷವೆಂದರೆ ಈ ಪ್ರಮಾಣ ಅಂದರೆ ಅನುಪಾತ ಮಾತ್ರವೇ ಅಲ್ಲ, ಮೊತ್ತಮೊದಲ ಬಾರಿಗೆ ಬೇಸಾಯಗಾರರ ಸಂಖ್ಯೆಯೇ 2001 ಕ್ಕಿಂತ ಕಡಿಮೆಯಾಗಿದೆ.



ವಾಸ್ತವವಾಗಿ 1991ರಿಂದೀಚೆಗೆ ಬೇಸಾಯಗಾರರ ಸಂಖ್ಯೆಯಲ್ಲಿ ಒಂದೂವರೆ ಕೋಟಿ ಇಳಿಕೆಯಾಗಿದ್ದು, ಕಳೆದ ಇಪ್ಪತ್ತು ವರ್ಷಗಳಲ್ಲಿ ಪ್ರತಿದಿನ ಸರಾಸರಿಯಾಗಿ 2035 ಮಂದಿ 'ಬೇಸಾಯಗಾರರು' ಎಂಬ ತಮ್ಮ ಸ್ಥಾನಮಾನವನ್ನು ಕಳೆದುಕೊಂಡಿದ್ದಾರೆ ಎಂದು ಪ್ರಖ್ಯಾತ ಪತ್ರಕರ್ತ ಪಿ.ಸಾಯಿನಾಥ್ ಲೆಕ್ಕ ಹಾಕುತ್ತಾರೆ. ಇದು ಉದಾರೀಕರಣದ ಎರಡು ದಶಕಗಳ ಅವಧಿ ಕೂಡ ಎಂಬುದನ್ನು ಗಮನಿಸಬೇಕು. ಇದಕ್ಕೆ ಮೊದಲ ಒಂದು ದಶಕದ ಅವಧಿಯಲ್ಲಿ, ಅಂದರೆ 1981ರಿಂದ 1991ರ ನಡುವೆ ಬೇಸಾಯಗಾರರ ಸಂಖ್ಯೆ 9.2 ಕೋಟಿಯಿಂದ 11ಕೋಟಿಗೇರಿತ್ತು. ಈ ಹಿನ್ನೆಲೆಯಲ್ಲಿ ಇದು ಭಾರೀ ದೊಡ್ಡ ಇಳಿಕೆ. ಇದೇ ಉದಾರೀಕರಣದ ಅವಧಿಯಲ್ಲಿ, ಸರಿಯಾಗಿ ಹೇಳುವುದಾದರೆ, 1995ರ ನಂತರ 2,70,940 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಸಂಗತಿಯತ್ತವೂ ಅವರು ಗಮನ ಸೆಳೆಯುತ್ತಾರೆ.

ಅತ್ತ ಕೃಷಿ ಕೂಲಿಕಾರರ ಪ್ರಮಾಣ ಮತ್ತು ಸಂಖ್ಯೆ ಹಿಂದಿನ ದಶಕಗಳಂತೆ, ಕಳೆದೆರಡು ಜನಗಣತಿಗಳ ನಡುವೆಯೂ ಹೆಚ್ಚಿದೆ, 26.5 ಶೇ.ದಿಂದ 30ಶೆ.ಕ್ಕೇರಿದೆ.

ಕ್ಯಾಶುವಲ್ ಮತ್ತು ಅನಿಯಮಿತ ಕೆಲಸದ ಪ್ರಮಾಣ ಹೆಚ್ಚಿದೆ ಎಂಬುದನ್ನೂ ಜನಗಣತಿಯ ಅಂಕಿ-ಅಂಶಗಳು ದೃಢಪಡಿಸಿವೆ. ವರ್ಷದಲ್ಲಿ ಆರು ತಿಂಗಳಿಂದ ಒಂದು ವರ್ಷದ ವರೆಗೆ ಕೆಲಸ ಪಡೆದವರ ಪ್ರಮಾಣ 2.6ಶೇ.ದಷ್ಟು ಇಳಿದಿದೆ, ಒಂದು ವರ್ಷದಲ್ಲಿ ಹೆಚ್ಚೆಂದರೆ ಆರು ತಿಂಗಳು ಮಾತ್ರ ಕೆಲಸ ಮಾಡಿದವರ ಪ್ರಮಾಣದಲ್ಲಿ ಏರಿಕೆಯಾಗಿದೆ. ಇವರಲ್ಲಿ 80ಶೇ.ದಷ್ಟು ಕೆಲಸಗಾರರು ಕನಿಷ್ಟ ಮೂರು ತಿಂಗಳು ಕೆಲಸ ಮಾಡಿದ್ದಾರೆ. ಕೆಲಸಗಾರರಲ್ಲಿ ಮಹಿಳೆಯರ ಪ್ರಮಾಣದಲ್ಲಿ ಇಳಿಕೆಯಾಗಿರುವುದೂ ಈ ಜನಗಣತಿಯಲ್ಲಿ ದೃಢಪಟ್ಟಿದೆ.

ಕಳೆದ ವರ್ಷದ ಕೊನೆಯಲ್ಲಿ ಸ್ವತಃ ಯೋಜನಾ ಆಯೋಗದ ಅಡಿಯಲ್ಲಿರುವ ಆನ್ವಯಿಕ ಮಾನವಶಕ್ತಿ ಸಂಶೋಧನಾ ಸಂಸ್ಥೆ(ಐಎಎಂಆರ್)ಯ ವರದಿಯೇ ಹೀಗೆ ಹೇಳಿತ್ತು: "ಒಟ್ಟು ಆರ್ಥಿಕದಲ್ಲಿ ಮತ್ತು ಕೃಷಿಯೇತರ ವಲಯಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಲಿಲ್ಲ. ಇತ್ತೀಚಿನ ವರ್ಷಗಳ ಈ ಉದ್ಯೋಗರಹಿತ ಬೆಳವಣಿಗೆಯ ಜೊತೆಗೆ ಕ್ಯಾಶುವಲೀಕರಣ ಮತ್ತು ಅನೌಪಚಾರೀಕರಣದಲ್ಲಿ ಏರಿಕೆ ಉಂಟಾಗಿದೆ". ಒಂದೂವರೆ ಕೋಟಿ ಕೆಲಸಗಾರರು ಕೃಷಿಯಿಂದ ಸೇವಾ ಮತ್ತು ಉದ್ದಿಮೆ ವಲಯಗಳಿಗೆ ಸ್ಥಳಾಂತರಗೊಂಡಿದ್ದಾರೆ ಎಂದೂ ಆ ವರದಿ ಹೇಳುತ್ತದೆ. ಬಹುಶಃ ಕೃಷಿ ವಲಯದೊಳಗೂ ಬೇಸಾಯಗಾರರಿದ್ದವರು ಕೃಷಿ ಕೂಲಿಗಾರರ ಮಟ್ಟಕ್ಕೆ ಇಳಿದಿರುವ, ಆಮೂಲಕ ಗ್ರಾಮೀಣ ಬಡವರ ಸಂಖ್ಯೆಯನ್ನು ಹಿಗ್ಗಿಸಿರುವ ಸಾಧ್ಯತೆಯೂ ಇದೆ ಎನ್ನುತ್ತಾರೆ ಸಾಯಿನಾಥ್.

ಇದೀಗ ಎರಡು ದಶಕಗಳ 'ಆರ್ಥಿಕ ಸುಧಾರಣೆಯ' ಬಳುವಳಿ. ಆದರೂ ಇದನ್ನೆಲ್ಲ ಉಪೇಕ್ಷಿಸಿ ಯುಪಿಎ-2 ಸರಕಾರ ಎರಡನೇ ಪೀಳಿಗೆಯ 'ಸುಧಾರಣೆ'ಗಳನ್ನು ಜಾರಿ ಮಾಡುವ ಕಾತುರದಲ್ಲಿದೆ.


ರೆಗಾ ಅನುಷ್ಠಾನ ಅಸಮರ್ಪಕ : ಸಿಎಜಿ ವಿಮರ್ಶೆ

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಶಾಸನ (ರೆಗಾ) ತನ್ನ ಮಹಾನ್ ಸಾಧನೆ ಎಂದು ಯುಪಿಎ ಮಂದಿ ಸದಾ ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ. ವಾಸ್ತವವಾಗಿ 2009ರಲ್ಲಿ ಅದು ಮತ್ತೆ ಅಧಿಕಾರಕ್ಕೆ ಬರುವಲ್ಲಿ ಎಡಪಕ್ಷಗಳ ಒತ್ತಾಯದಿಂದ ಯುಪಿಎ-1 ಸರಕಾರ ತಂದ ಈ ಕಾನೂನಿನ ಪಾತ್ರವೂ ಇತ್ತು ಎಂದು ಹೇಳಲಾಗುತ್ತದೆ. ಆದರೆ ಅದರ ಜಾರಿಯನ್ನೂ ಸರಿಯಾಗಿ ಮಾಡಲು ಈ ಸರಕಾರಕ್ಕೆ ಸಾಧ್ಯವಾಗಿಲ್ಲ ಎಂದು ಮಹಾ ಲೆಕ್ಕ ಪರಿಶೋಧಕರ(ಸಿಎಜಿ) ವರದಿಯಿಂದ ಕಾಣಬರುತ್ತದೆ. ಸರಕಾರದ ಕೇಳಿಕೆಯ ಮೇರೆಗೆ ಈ ಯೋಜನೆಯ ಪರಿಶೋಧನೆ ನಡೆಸಿರುವ ಸಿಎಜಿ ಜಾಬ್ ಕಾರ್ಡುಗಳ ನೀಡಿಕೆಯಲ್ಲಿ ವಿಳಂಬ, ಕೂಲಿಗಳನ್ನು ಕೊಡದಿರುವುದು ಅಥವ ಕೊಡುವಲ್ಲಿ ವಿಳಂಬ, ಕಾಮಗಾರಿಗಳನ್ನು ಮಧ್ಯದಲ್ಲೇ ಕೈಬಿಡುವುದು, ಕಾನೂನಿನಲ್ಲಿ ಅವಕಾಶವಿರದ ಕಾಮಗಾರಿಗಳು, ಕೇಳಿದ್ದಕ್ಕಿಂತ

ಪುಟ 15 ಕ್ಕೆ

ನರೇಂದ್ರ ಮೋದಿ ತೊಲಗಬೇಕು

ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಮಾಡಿದ ತನಿಖೆಯಲ್ಲಿ ದೊರೆತ ದಸ್ತಾವೇಜುಗಳನ್ನು ಅಧ್ಯಯನ ಮಾಡಿದರೆ ಗುಜರಾತಿನ 2002 ರ ಮಾರಣ ಹೋಮದಲ್ಲಿ ಮೋದಿ ಸರ್ಕಾರದ ಉದ್ದೇಶಪೂರ್ವಕ ನಿರ್ಲಕ್ಷ್ಯತನ ಎದ್ದು ಕಾಣುತ್ತದೆ. ಅಲ್ಪ ಸಂಖ್ಯಾತರನ್ನು ರಕ್ಷಿಸುವ ತನ್ನ ಸಾಂವಿದಾನಿಕ ಜವಾಬ್ದಾರಿಯನ್ನು ಅದು ನಿರ್ವಹಿಸದೇ ಇರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ವಿವಿಧ ಕಡೆಗಳಿಂದ ಪೋಲೀಸು ಮಾಹಿತಿ ಮತ್ತು ಸಂದೇಶಗಳು ಬಂದಿದ್ದರೂ ಅದು ಕಾರ್ಯನಿರತವಾಗದೇ ಇದ್ದದ್ದು ನಿರ್ಲಜ್ಜ ಹೊಣೆಗೇಡಿತನ.



ಇಷ್ಟೊಂದು ಪುರಾವೆಗಳಿದ್ದರೂ ವಿಶೇಷ ತನಿಖಾ ತಂಡ ನರೇಂದ್ರ ಮೋದಿಯವರ ರಾಜ್ಯ ಸರ್ಕಾರವನ್ನು ಈ ಪ್ರಕರಣದಲ್ಲಿ ಖುಲಾಸೆ ಮಾಡಿರುವುದು ಅದರ ವಿಶ್ವಾಶಾರ್ಹತೆಗೇ ಧಕ್ಕೆ ತಂದಿದೆ. ಜಾಕಿಯಾ ಜಾಫ್ರಿಯವರ ಶ್ರಮದ ಪರಿಣಾಮವಾಗಿ ಹಲವು ಧಾಖಲೆಗಳು ಈಗ ಸಾರ್ವಜನಿಕ ಅವಗಾಹನೆಗೆ ಲಭ್ಯವಿವೆ. ಇವುಗಳನ್ನು ನೋಡಿದವರಿಗೆ ಮೋದಿಯವರು ಅಪರಾಧಿಯಾಗಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಈ ಪ್ರಕರಣದಲ್ಲಿ ನರೇಂದ್ರ ಮೋದಿ ಒಂದನೇ ಅಪರಾಧಿ, ಅವರ ಆರೋಗ್ಯ ಮಂತ್ರಿ ಅಶೋಕ್ ಭಟ್ ಎರಡನೇ ಅಪರಾಧಿ, ನಗರ ಅಭಿವೃದ್ಧಿ ಮಂತ್ರಿ ಐ ಕೆ ಜಡೇಜಾ ಮೂರನೇ ಅಪರಾಧಿ ಹಾಗೂ ವಿಹೆಚ್ ಪಿಯ ನಾಯಕ ಜಯದೀಪ ಪಟೇಲ್ 21 ನೇ ಅಪರಾಧಿ. ಅಲ್ಲದೆ ಇತರ ಹಲವು ಕ್ಯಾಬಿನೆಟ್ ಮಂತ್ರಿಗಳು ಇತರ ಆರೋಪಿಗಳು.

ಹಿನ್ನೆಲೆ:

ಗೋಧ್ರ ಘಟನೆಯ ಒಂದು ವಾರ ಮೊದಲು ಮೋದಿ ರಾಜ-ಕೋಟ್ ನಿಂದ ಸಣ್ಣ ಅಂತರದಿಂದ ಚುನಾವಣೆ ಗೆದ್ದಿದ್ದರು. ಮಾಜಿ ಸಿಪಿಐ ನಾಯಕ ಮತ್ತು ಅಂದಿನ ಕಾಂಗ್ರೆಸ್ ಸಂಸದ ಅಃಸಾನ್ ಜಾಫ್ರಿ ಮೋದಿಯವರ ವಿರುದ್ಧ ಪ್ರಚಾರ ಮಾಡಿದ್ದರ ಪರಿಣಾಮವಾಗಿ ಮೋದಿಯವರ ಗೆಲುವಿನಲ್ಲಿ ಹೊಳಪಿರಲಿಲ್ಲ. ಅಲ್ಪಸಂಖ್ಯಾತರು ಅವರ ವಿರುದ್ಧ ಸಾರಾಸಗಟಾಗಿ ಮತ ನೀಡಿದ್ದು ಸ್ಪಷ್ಟವಾಗಿತ್ತು. ಈ ಕಾರಣದಿಂದಾಗಿಯೇ ಇಂತಹ ಪಿತೂರಿಯನ್ನು ಮಾಡಲಾಗಿತ್ತು. ಮೋದಿಯವರ ನಿವಾಸದಲ್ಲಿ ತಡರಾತ್ರಿಯವರೆಗೆ ಕುಳಿತು ಈ ಷಡ್ಯಂತ್ರವನ್ನು ರಚಿಸಿ ಪೊಲೀಸರು ಮತ್ತು ಆಡಳಿತವನ್ನು ನಿಷ್ಕ್ರಿಯಗೊಳಿಸಿ ತಮ್ಮ ಉದ್ದೇಶವನ್ನು ಅವರು ಸಾಧಿಸಿದರು. ಖುಲಾಸೆಯ ವಿರುದ್ಧದ ಪ್ರತಿಭಟನಾ ಅರ್ಜಿ 27.02.2002 ರ ಸಭೆಯ ಪುರಾವೆಗಳನ್ನು ಪರಿಶೀಲಿಸಬೇಕೆಂದು ಕೇಳಿಕೊಂಡಿದೆ.

ಪೋಲೀಸು ಕಂಟ್ರೋಲ ರೂಮಿನ ಧಾಖಲೆಗಳು ಸೋಲಾ ಆಸ್ಪತ್ರೆಯಲ್ಲಿನ ಘಟನೆಗಳನ್ನು ವಿಷದಪಡಿಸುತ್ತವೆ. ಆರ್ ಎಸ್ ಎಸ್ ಮತ್ತು ವಿ ಹೆಚ್ ಪಿ ಯ ಜನಗಳು ಮಾಡಿದ ಹೇಯ ಕೃತ್ಯದ ರೂಪ ರೇಷೆ ನೀಡುತ್ತವೆ. ದಂಗೆಗಳು ಆಗಬಹುದೆಂಬ ಸುದ್ದಿ ನಂತರ ದಂಗೆಗಳು ಶುರುವಾಗಿ ಜನಗಳನ್ನು ಕೊಲ್ಲಲಾಗುತ್ತಿದೆ ಎಂಬ ಸುದ್ದಿ ಬಂದರೂ ಮೋದಿ ಮತ್ತು ಅವರ ಆಡಳಿತದ ಜನ ಜಪ್ಪಯ್ಯ ಎನ್ನದೆ ಸುಮ್ಮನೆ ಕುಳಿತಿದ್ದು ಯಾಕೆ? ಗೋಧ್ರ ಘಟನೆಯ ಹೆಣಗಳನ್ನು ಮೆರವಣಿಗೆಯಲ್ಲಿ ತಂದು "ರಕ್ತಕ್ಕೆ ರಕ್ತ" ಎಂಬ



ಘೋಷಣೆಯ ಜೊತೆಗೆ ಅಲ್ಪಸಂಖ್ಯಾತರನ್ನು ಹತ್ಯೆ ಮಾಡಿದ ಐದಾರು ಸಾವಿರ ಸಂಖ್ಯೆಯ ಖಾವಿ ಪಡೆ ಯನ್ನು ತಡೆಯುವವರಾರು ಇರಲಿಲ್ಲ. ಪೊಲೀಸರು ಮತ್ತು ಆಡಳಿತ ಜಾಣ ಕಿವುಡರಂತೆ ವರ್ತಿಸಿದರು ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. ಅಹಮದಾಬಾದಿನಲ್ಲಿ ಶವ ಮೆರವಣಿಗೆ ಹೀಗೆ ನಡೆಯುತ್ತಿರುವಾ ಖೇದಬ್ರಹ್ಮ, ವಡೋದರಾ, ಮೊದ..., ದಾಹೋಡ್, ಆನಂದ್ ಇತ್ಯಾದಿಗಳಲ್ಲಿ ಸ್ಫೋಟಕ ಪರಿಸ್ಥಿತಿ ನಿರ್ಮಾಣವಾಗಿತ್ತು. ಮೋದಿಯವರ ಸರ್ಕಾರ ಈ ಪುರಾವೆಗಳನ್ನು ಮುಚ್ಚಿಡಲು ಬಹಳ ಪ್ರಯತ್ನ ಮಾಡಿದೆ. ಈ ಶವ ಯಾತ್ರೆಯಲ್ಲಿ ಪಾಲ್ಗೊಳ್ಳಲು ಆಚಾರ್ಯ ಗಿರಿರಾಜ ಕಿಶೋರ್ ಅವರನ್ನು ಕರೆದೊಯ್ಯಲು ಪೂರ್ಣ ಪ್ರಮಾಣದ ಪಡೆ ಇವರ ಬಳಿಯಿತ್ತು. ಆದರೆ ಕೋಮು ದಂಗೆಯನ್ನು ಹತ್ತಿಕ್ಕಲು ಪಡೆಗಳಿರಲಿಲ್ಲ. ನಾರೋದ ಪಟಿಯಾದಲ್ಲಿ 96 ಜನರನ್ನು ಕೊಲ್ಲುವಾಗ ಮತ್ತು ಗುಲ್ಬರ್ಗ್ ಸೊಸೈಟಿಯಲ್ಲಿ 69 ಜನರ ಹತ್ಯೆ ಮಾಡುವಾಗ ಅದನ್ನು ತಡೆಯಲು ಸರ್ಕಾರದ ಬಳಿ ಪಡೆಗಳಿರಲಿಲ್ಲ. "ನಗರದಲ್ಲಿ ಕೋಮು ದಂಗೆಗಳಾಗುತ್ತವೆ. ತಡೆ...ು ಕ್ರಮ ಕೈಗೊಳ್ಳಿರಿ" ಎಂಬ ಸಂದೇಶ...ಗೆ ಸರ್ಕಾರಿ ಅಂಗಗಳು ಪ್ರತಿಕ್ರಿಯಿಸಲೆ ಇಲ್ಲ.

ಕಲೆ ಹಾಕಿ, ವ್ಯವಸ್ಥಿತವಾಗಿ ಸಾದರ ಪಡಿಸಿದ ಪುರಾವೆಗಳನ್ನು ವಿಶೇಷ ತನಿಖಾ ತಂಡ ನಿರ್ಲಕ್ಷಿಸಿದೆ. ಆದ್ದರಿಂದಲೇ ಈ ವಿಶೇಷ ತನಿಖಾ ತಂಡದ ವರಧಿಯನ್ನು ಬದಿಗೊತ್ತಿ ಹೊಸ ತನಿಖೆ ನಡೆಸುವ ಮತ್ತು ಎಲ್ಲ ಪುರಾವೆಗಳನ್ನು ಗಂಭೀರವಾಗಿ ಪರಿಗಣಿಸಿ ಸರಿಯಾದ ತೀರ್ಮಾನಕ್ಕೆ ಬರುವ ಅವಶ್ಯಕತೆಯಿದೆ.

ಈಗ ಹೇಳಿ –ಮೋದಿಯವರಿಗೆ ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕು ಇದೆಯೆ?

ಹೊಣೆಗೇಡಿ ಸರಕಾರ...

ಪುಟ 7 ರಿಂದ

ಬಿಂದುವಾಗಿರುವ ಕೊಂಡಿಯನ್ನೇ ಮುರಿಯುತ್ತದೆ. ಬಿಜೆಪಿ ಪ್ರಧಾನ ಮಂತ್ರಿಗಳ ರಾಜೀನಾಮೆಯನ್ನು ಆಗ್ರಹಿಸಿ ಸಂಸತ್ತನ್ನು ನಿಷ್ಕ್ರಿಯಗೊಳಿಸುವ ಮೂಲಕ ಸರಕಾರದ ಹೂಟಕ್ಕೆ ಬಲಿಯಾಗಿದೆ. ಸರಕಾರಕ್ಕೆ ತನ್ನ ಜವಾಬುದಾರಿಕೆಯನ್ನು ತಪ್ಪಿಸಿಕೊಳ್ಳಲು ಇದು ಬಹಳ ಅನುಕೂಲಕರವಾಗಿ ಕಂಡಿದೆ. ಹಲವು ಹಗರಣಗಳಲ್ಲಿ, 2ಜಿ ತರಂಗಾಂತರ ಹಂಚಿಕೆ, ಕಲ್ಲಿದ್ದಲು ಗಣಿ ಹಂಚಿಕೆ ಮುಂತಾದವುಗಳಲ್ಲಿ ಹಿಂದಿನ ಎನ್‌ಡಿಎ ಸರಕಾರದ್ದೂ ಮುಚ್ಚಿಡಬೇಕಾದ ಕೃತ್ಯಗಳು ಹಲವು ಇವೆ. ಹೀಗೆ, ಮತ್ತೊಮ್ಮೆ ಮ್ಯಾಚ್‌ಫಿಕ್ಸಿಂಗ್‌ನ ಒಂದು ಅಂಶವೂ ಇದರಲ್ಲಿ ಇರುವಂತೆ ಕಾಣುತ್ತದೆ.

ಇಲ್ಲೊಂದು ಗಹನವಾದ ಪ್ರಶ್ನೆಯಿದೆ. ಸಂವಿಧಾನದ ಅಡಿಯಲ್ಲಿ ಕಾರ್ಯಾಂಗ ಮತ್ತು ಶಾಸನ ಸಭೆಗಳಿಗೆ ಸಾರ್ವಜನಿಕ ವ್ಯವಹಾರಗಳನ್ನು ನಿರ್ವಹಿಸುವ ಹೊಣೆಯನ್ನು ಕೊಡಲಾಗಿದೆ. ಅಂತಿಮವಾಗಿ ಅವು ಜನತೆಗೆ ಉತ್ತರ ಕೊಡಬೇಕಾಗಿದೆ. ಈ ಜವಾಬುದಾರಿಕೆಯೇ, ವಾಸ್ತವವಾಗಿ, ಪ್ರಜಾಪ್ರಭುತ್ವವನ್ನು ಆಳ್ವಿಕೆಯ ಇತರ ವ್ಯವಸ್ಥೆಗಳಿಗಿಂತ ಭಿನ್ನವಾಗಿಸಿರುವುದು. ಆದರೆ ಈಗ ನಾವು ಇಂತಹ ಜವಾಬುದಾರಿಕೆಯನ್ನೇ ಕೈಬಿಡಲಾಗುತ್ತಿರುವುದನ್ನು ಕಾಣುತ್ತಿದ್ದೇವೆ.

ಸಂವಿಧಾನಕ್ಕೆ ತಿದ್ದುಪಡಿ

ನಮ್ಮ ಸಾಂವಿಧಾನಿಕ ವ್ಯವಸ್ಥೆಯ ಇಂತಹ ವಿಪತ್ಕಾರೀ ವಿಕೃತಿಯನ್ನು ತುರ್ತಾಗಿ ಸರಿಪಡಿಸಬೇಕಾಗಿದೆ. ಈಗ ಆಳ್ವಿಕೆ ನಡೆಸುತ್ತಿರುವ ಸರಕಾರ ಹೀಗೆ ಸಂಸತ್ತಿಗೆ ಜವಾಬುದಾರನಾಗಿರದೇ ಇರುವುದನ್ನು ಮುಂದುವರೆಸಲು ಬಿಡಲಾಗದು. ಇದು ಸಾಧ್ಯವಾಗಬೇಕಾದರೆ ಸಂಸತ್ತು ಸರಿಯಾಗಿ ಕೆಲಸ ಮಾಡಬೇಕು. ಇದಕ್ಕೆ ಸರಕಾರ ಪ್ರತಿಪಕ್ಷಗಳ ನ್ಯಾಯಬದ್ಧ ಬೇಡಿಕೆಯನ್ನು, ಅಂದರೆ ಈಗಿನ ಸನ್ನಿವೇಶದಲ್ಲಿ ಸಂಬಂಧಪಟ್ಟ ಮಂತ್ರಿಗಳ ರಾಜೀನಾಮೆಯ ಬೇಡಿ-ಕೆಗೆ ಒಪ್ಪಬೇಕು. ಸರಕಾರ ಪ್ರತಿಪಕ್ಷಗಳು ಎತ್ತಿರುವ ಪ್ರಶ್ನೆಗಳನ್ನು ಪರಿಶೀಲಿಸಿದರೆ ಈಗ ಉಂಟಾಗಿರುವ ಅಸ್ತವ್ಯಸ್ತತೆಯನ್ನು ಬಹುಮಟ್ಟಿಗೆ ತಪ್ಪಿಸಬಹುದು. ಅದೇ ವೇಳೆಗೆ ಪ್ರತಿಪಕ್ಷಗಳ ತರ್ಕಹೀನ ಬೇಡಿಕೆಗಳು ಸಂಸದೀಯ ಕಲಾಪಗಳನ್ನು ಸ್ತಂಭನಗೊಳಿಸಲು ಬಿಡಬಾರದು. ನಿಜಕ್ಕೂ ಈಗ, ಸಂಸತ್ತು ಒಂದು ವರ್ಷದಲ್ಲಿ ಕನಿಷ್ಟ ನೂರು ದಿನಗಳಾದರೂ ಸಭೆ ಸೇರಬೇಕು ಎಂದು ವಿಧಿಸುವ ಒಂದು ಸಂವಿಧಾನ ತಿದ್ದುಪಡಿಯನ್ನು ಗಂಭೀರವಾಗಿ ಪರಿಶೀಲಿಸಬೇಕಾದ ಸಮಯ ಬಂದಿದೆ.

ಸಂಸತ್ತಿನ ಕಲಾಪಗಳು ಈ ರೀತಿ ನಿಂತು ಹೋಗಿರುವುದರಿಂದಾಗಿ ಸರಕಾರಕ್ಕೆ ತನ್ನ ಅತ್ಯಂತ ಅಸಮರ್ಥನೀಯ ಜನ-ವಿರೋಧಿ ಬಜೆಟ್ ಪ್ರಸ್ತಾವಗಳನ್ನು ಯಾವುದೇ ಚರ್ಚೆ ಅಥವ ಭಿನ್ನಮತವಿಲ್ಲದೆ ಮಂಜೂರು ಮಾಡಿಸಿಕೊಳ್ಳಲು ಸಾಧ್ಯವಾಗಿದೆ. ಸಂಸತ್ತಿನಲ್ಲಿ ಎತ್ತಬೇಕಾಗಿದ್ದ, ಚರ್ಚಿಸಬೇಕಾಗಿದ್ದ ಮತ್ತು ಸರಕಾರವನ್ನು ಕ್ರಮ ವಹಿಸುವಂತೆ ಬಲವಂತಕ್ಕೆ ಒಳಪಡಿಸಬೇಕಾಗಿದ್ದ ಹಲವು ಮಹತ್ವದ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗದೇ ಹೋಗಿದೆ. ಸಿಪಿಐ(ಎಂ)ನ 'ಸಂಘರ್ಷ ಸಂದೇಶ ಜಾಥ'ದ ಅವಧಿಯಲ್ಲಿ ಎತ್ತಿದ ಜನತೆಯ ಬದುಕನ್ನು ಉತ್ತಮಪಡಿಸುವುದಕ್ಕೆ ನೇರವಾಗಿ ಸಂಬಂಧಪಟ್ಟ ಪ್ರಶ್ನೆಗಳನ್ನು ಎತ್ತಲಾಗಿಲ್ಲ. ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಇತರ ಪ್ರದೇಶಗಳ ಬಹಳಷ್ಟು ಭಾಗಗಳನ್ನು ಆವರಿಸಿರುವ ಅಭೂತಪೂರ್ವ ಬರದಿಂದಾಗಿ ಲಕ್ಷಾಂತರ ರೈತರು ವಲಸೆ ಹೋಗಬೇಕಾಗಿ ಬಂದಿರುವ ಪ್ರಶ್ನೆಯನ್ನು ಎತ್ತಲಾಗಿಲ್ಲ. ಬೆಲೆಯೇರಿಕೆ, ಕೊಬ್ರಪೋಸ್ಟ್ ಕುಟುಕು ಕಾರ್ಯಾಚರಣೆ ಬಯಲಿಗೆ ತಂದಿರುವ ಖಾಸಗಿ ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳು ಕಪ್ಪು ಹಣವನ್ನು ಬಿಳಿಮಾಡುತ್ತಿರುವ ಪ್ರಶ್ನೆ, ರೈಲ್ವೆ ಮತ್ತು ಸಾರ್ವಜನಿಕ ಸಾರಿಗೆಯಂತಹ ಸಗಟು ಬಳಕೆದಾರರಿಗೆ ಸಬ್ಸಿಡಿರಹಿತ ಡೀಸೆಲ್‌ನಿಂದಾಗಿ ನಮ್ಮ ಬಹುಪಾಲು ಜನಸಾಮಾನ್ಯರು ಸಾರಿಗೆಗೆ ಹೆಚ್ಚಿನ ... ತೆರಬೇಕಾಗಿ ಬಂದಿರುವುದು, ಕಿರು ಹಣಕಾಸು ಸಂಸ್ಥೆಗಳು ಮತ್ತು ಚಿಟ್‌ಫಂಡ್ ಕಂಪೆನಿಗಳ ಮೋಸದ ವ್ಯವಹಾರಗಳಿಂದಾಗಿ ಲಕ್ಷಾಂತರ ಮಂದಿ ಮುಳುಗಿ ಹೋಗಿರುವ, ಇದ-ರಿಂದಾಗಿ ಆತ್ಮಹತ್ಯೆಗಳೂ ಸಂಭವಿಸಿರುವ ಪ್ರಶ್ನೆ, ಅದೇ ರೀತಿ ವಿದೇಶಾಂಗ ಧೋರಣೆಗೆ ಸಂಬಂಧಪಟ್ಟ ಹಲವಾರು ಪ್ರಶ್ನೆಗಳು ಇವೆಲ್ಲ ಮಹತ್ವದ ಪ್ರಶ್ನೆಗಳನ್ನು ಎತ್ತಲಾಗಿಲ್ಲ.

ಈ ಎಲ್ಲ ಪ್ರಶ್ನೆಗಳನ್ನು ಈಗ ಸಂಸತ್ತಿನ ಹೊರಗೆ ಜನಗಳನ್ನು ದೊಡ್ಡ ಪ್ರಮಾಣದಲ್ಲಿ ಅಣಿನೆರೆಸುವ ಮೂಲಕ ಎತ್ತಿಕೊಳ್ಳಬೇಕಾಗಿದೆ ಮತ್ತು ಸರಕಾರ ನಮ್ಮ ಬಹುಪಾಲು ಜನತೆಯ ಜೀವನ ಪರಿಸ್ಥಿತಿಗಳನ್ನು ಉತ್ತಮಪಡಿಸಲು ಬೇಕಾದ ನಿರ್ಧಾರಗಳನ್ನು ಕೈಗೊಳ್ಳುವಂತೆ ಬಲವಂತ ಪಡಿಸಬೇಕಾಗಿದೆ. ಮೇ ತಿಂಗಳ ಉತ್ತರಾರ್ಧದಲ್ಲಿ ನಡೆಸಲು ಸಿಪಿಐ(ಎಂ) ಕರೆ ನೀಡಿರುವ ದೇಶವ್ಯಾಪಿ ಸಾಮೂ...ಕ ಪಿಕೆಟಿಂಗ್ ಕಾರ್ಯಕ್ರಮ ಇಂತಹ ಬ...ಷ್ಟ ಜನತಾ ಹೋರಾಟಗಳ ರಂಗವಾಗಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಲಂಚ ಪ್ರಕರಣ ಯುಪಿಎ ಮಂತ್ರಿಯ...

ಪುಟ 13 ರಿಂದ

ಹೆಚ್ಚಿನ ಗ್ರಾಂಟುಗಳು ಇತ್ಯಾದಿ ಗಂಭೀರ ಕೊರತೆಗಳನ್ನು ಪಟ್ಟಿ ಮಾಡಿದೆ.

28 ರಾಜ್ಯಗಳು ಮತ್ತು 4ಕೇಂದ್ರಾಡಳಿತ ಪ್ರದೇಶಗಳ 3848 ಗ್ರಾಮಪಂಚಾಯತುಗಳಲ್ಲಿ ನಡೆಸಿದ ಪರಿಶೋಧನೆಯಲ್ಲಿ ಕಂಡುಬಂದ ಸಂಗತಿಗಳು ಹೀಗಿವೆ:

ಪ್ರಮಾಣ 283.59 ಕೋಟಿ ದಿನಗಳಿಂದ 216.34ಕ್ಕೆ ಇಳಿದಿದೆ.

ಸಿಎಜಿ ಈ ಯೋಜನೆಯ ಅನುಷ್ಠಾನವನ್ನು ಉತ್ತಮಗೊಳಿಸಲು "ನಿರ್ಣಾಯಕ ಕ್ರಮಗಳನ್ನು" ಕೈಗೊಳ್ಳಬೇಕು ಎಂದು ಸೂಚಿಸಿದೆ. ತೀವ್ರವಾದ ಉಸ್ತುವಾರಿ ಮತ್ತು ಮೌಲ್ಯಮಾಪನ ವ್ಯವಸ್ಥೆಗಳ ಮೇಲೆ ಗಮನ ಕೇಂದ್ರೀಕರಿಸುವ ಅಗತ್ಯವಿದೆ, ಅದಕ್ಕಾಗಿ ಮಾನವಶಕ್ತಿ ಕೊರತೆಯನ್ನು ನೀಗಿಸುವತ್ತ ಗಮನ ನೀಡಬೇಕಾಗಿದೆ, ಫಲಾನುಭವಿಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು



ಕೃಪೆ : ಡೆಕ್ಕನ್ ಕ್ರಾನಿಕಲ್

* 2252 ಕೋಟಿ ರೂ.ಗಳ ಅನುಮತಿಯಿಲ್ಲದ ಕಾಮಗಾರಿಗಳು.

* 4071 ಕೊಟಿ ರೂ.ಗಳ ಕಾಮಗಾರಿಗಳು 5ವರ್ಷಗಳಾದರೂ ಅಪೂರ್ಣವಾಗಿವೆ.

* 6547 ಕೋಟಿ ರೂ.ಗಳ ಖರ್ಚಿನಿಂದ ಖಾಯಂ ಆಸ್ತಿಗಳ ನಿರ್ಮಾಣವಾಗಿಲ್ಲ.

* 1960 ಕೋಟಿ ರೂ.ಗಳನ್ನು ಸರಿಯಾದ ಹಣಕಾಸು ಹತೋಟಿಯಿಲ್ಲದೆ ಮಂಜೂರು ಮಾಡಲಾಗಿದೆ.

* 2009–10 ರಲ್ಲಿ ಸರಾಸರಿ ಒಂದು ಕುಟುಂಬಕ್ಕೆ 54 ದಿನಗಳ ಕೆಲಸ ಒದಗಿಸಲಾಗಿದ್ದರೆ 2011–12ರಲ್ಲಿ ಇದು 48ಕ್ಕೆ ಇಳಿದಿದೆ. ಒಟ್ಟು ಉದ್ಯೋಗಗಳ

ಮತ್ತು ನಿಯಮಗಳ ಕಟ್ಟುನಿಟ್ಟಾದ ಪಾಲನೆಯಾಗುವಂತೆ ಮಾಡಬೇಕು ಎಂದು ಸಿಎಜಿ ಸರಕಾರಕ್ಕೆ ಸೂಚಿಸಿದೆ.

ಆದರೂ ಸಿಎಜಿಯ ವಿಮರ್ಶೆಯಿಂದ ಕುಪಿತಗೊಂಡಿರುವ ಯುಪಿಎ–2 ಸರಕಾರ ಸಿಎಜಿ ಕೇವಲ ವಿಮರ್ಶೆ ಮಾಡಿದೆ, ರಚನಾತ್ಮಕ ಸೂಚನೆಗಳೇನನ್ನೂ ಕೊಟ್ಟಿಲ್ಲ ಎಂದು ಪ್ರತಿಕ್ರಿಯಿಸಿದೆ!

ದೇಶದ ಪ್ರತಿಷ್ಠೆಯನ್ನು ಕುಗ್ಗಿಸಿರುವುದು 2ಜಿ ಹಗರಣವಲ್ಲ, ಬದಲಾಗಿ ಅದನ್ನು ಕುರಿತ ಸಿಎಜಿ ವರದಿಯೇ ಎಂದು ಭಾವಿಸಿರುವವರಿಂದ ಇದಕ್ಕಿಂತ ಉತ್ತಮ ಪ್ರತಿಕ್ರಿಯೆಯನ್ನು ಬಹುಶಃ ನಿರೀಕ್ಷಿಸುವಂತಿಲ್ಲ.

ಮುಕೇಶ್ ಅಂಬಾನಿಗೆ ಸರಕಾರೀ ಭದ್ರತೆ: ಸುಪ್ರಿಂ ಕೋರ್ಟಿಗೂ ಅಸಮಾಧಾನ

ದೇಶದ ಅತ್ಯಂತ ಶ್ರೀಮಂತ ವ್ಯಕ್ತಿ ಮುಕೇಶ್ ಅಂಬಾನಿಗೆ ಯುಪಿಎ–2 ಸರಕಾರ ಅತ್ಯುನ್ನತ 'ಝಡ್' ಭದ್ರತೆ ಒದಗಿಸಿರುವುದಕ್ಕೆ ಎಡಪಕ್ಷಗಳು ಮತ್ತು ಇತರರು ವ್ಯಕ್ತಪಡಿಸಿರುವ ಪ್ರತಿಭಟನೆಗೆ ಈಗ ದೇಶದ ಸರ್ವೋಚ್ಚ ನ್ಯಾಯಾಲಯವೂ ದನಿಗೂಡಿಸಿದೆ.

ದೇಶದಲ್ಲಿ ಮಹಿಳೆಯರ ಮೇಲೆ ಬಲಾತ್ಕಾರದಂತಹ ಘೋರ ಘಟನೆಗಳು ನಡೆಯುತ್ತಿರುವಾಗ, ಜನತೆ ಹೆಚ್ಚಿನ ಭದ್ರತೆ ಕೇಳುತ್ತಿರುವಾಗ, ಅವರನ್ನು ಕಡೆಗಣಿಸಿ ಅಂಬಾನಿಯಂತಹ ಕಾರ್ಪೊರೇಟ್ ಮುಖಂಡರಿಗೆ ಅತ್ಯುನ್ನತ ಭದ್ರತೆ ಒದಗಿಸಿರುವುದು ಅಭೂತಪೂರ್ವ ಎಂದು ಸಿಪಿಐ(ಎಂ) ಸಂಸದೀಯ ಮುಖಂಡ ಬಸುದೇವ ಆಚಾರ್ಯ ಟೀಕಿಸಿದ್ದರು. ಸಿಪಿಐ ಹಿರಿಯ ಮುಖಂಡ ಬರ್ದನ್‌ರವರು ಕೂಡ ಜನಸಾಮಾನ್ಯರಿಗೆ, ಅದರಲ್ಲೂ ಮಹಿಳೆಯರಿಗೆ ಮತ್ತು ಮಕ್ಕಳಿಗೆ ರಕ್ಷಣೆ ಕೊಡುವಲ್ಲಿ ಪ್ರತಿದಿನ ವಿಫಲವಾಗುತ್ತಿರುವ ಸರಕಾರ ಒಬ್ಬ ಖಾಸಗಿ ವ್ಯಕ್ತಿಗೆ ಮತ್ತು ಆತನ ನಿವಾಸಕ್ಕೂ, ಆತ ಒಬ್ಬ ಅಂಬಾನಿಯಾಗಿರುವ ಏಕೈಕ ಕಾರಣ–ಕ್ಕೆ ಇಂತಹ ಭದ್ರತೆ ಒದಗಿಸಿರುವುದು ಮೊತ್ತಮೊದಲ ಬಾರಿ, ಇದು ನಾಚಿಕೆಗೇಡಿನ ಸಂಗತಿ ಎಂದರು.

ಬಿಎಸ್‌ಎಫ್‌ನ ಒಬ್ಬ ಮಾಜಿ ಮಹಾನಿರ್ದೇಶಕರು ಕೂಡ ಸರಕಾರದ ಈ ನಿರ್ಣಯ ಆಕ್ರೋಶ ಉಂಟು ಮಾಡುವಂತದ್ದು, ಸಿಆರ್‌ಪಿಎಫ್ ನಕ್ಸಲರ ವಿರುದ್ಧ ಸೆಣಸಲು ಕಷ್ಟಪಡುತ್ತಿರುವಾಗ, ಅವರನ್ನು ಒಬ್ಬ ಖಾಸಗಿ ವ್ಯಕ್ತಿಯ ಭದ್ರತೆಗೆ ಕಳಿಸುವುದು ಈ ಪಡೆಗಳ ಧೃತಿಗೆಡಿಸುವ ಕೆಲಸ ಎಂದಿದ್ದರು.

ಈಗ ಸುಪ್ರಿಂ ಕೋರ್ಟ್ ಕೂಡ ಅದೇ ರೀತಿ ಯುಪಿಎ ಸರಕಾರದ ಕ್ರಮದ ಬಗ್ಗೆ ತನ್ನ ತೀವ್ರ ಅಸಮಾದಾನವನ್ನು ವ್ಯಕ್ತಪಡಿಸಿದೆ. ಭದ್ರತೆ ಒದಗಿಸುವ ವ್ಯವಸ್ಥೆಯ ದುರುಪಯೋಗದ ಬಗ್ಗೆ ಉತ್ತರ ಪ್ರದೇಶದ ನಿವಾಸಿಯೊಬ್ಬರು ಹಾಕಿರುವ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಇದನ್ನು ಪ್ರಸ್ತಾವಿಸುತ್ತ, ಜನಸಾಮಾನ್ಯರಲ್ಲಿ ಅಭದ್ರತೆಯ ಭಾವನೆಯಿರುವಾಗ, ರಾಜಧಾನಿಯಲ್ಲಿ ಸರಿಯಾದ ಭದ್ರತೆಯಿಲ್ಲದೆ ಒಂದು 5 ವರ್ಷಗಳ ಹೆಣ್ಣುಮಗುವಿನ ಮೇಲೇ ಅತ್ಯಾಚಾರ ನಡೆಯುತ್ತಿರುವಾಗ ಇಂತಹ ಒಬ್ಬ ವ್ಯಕ್ತಿಗೆ ಪ್ರಭುತ್ವ ಏಕಾದರೂ ಭದ್ರತೆ ಒದಗಿಸಬೇಕು, ಆತನಿಗೆ ಬೆದರಿಕೆಯಿದೆ ಎನಿಸಿದ್ದರೆ ಆತ ಖಾಸಗಿ ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಹುದಲ್ಲ ಎಂದು ಖಾರವಾಗಿ ಪ್ರಶ್ನಿಸಿದೆ.

ಪ್ರತಿಭಟನೆಯನ್ನು ಕಂಡ ಕೇಂದ್ರ ಸರಕಾರ ಈ ಭದ್ರತೆ ಒದಗಿಸಿರುವುದು ಪುಕ್ಕಟೆಯಾಗಲ್ಲ, ಒಬ್ಬ ಸಿಆರ್‌ಪಿಎಫ್ ಇನ್ಸ್‌ಪೆಕ್ಟರ್ ಮಟ್ಟದ ಅಧಿಕಾರಿಯ ಅಡಿಯಲ್ಲಿ 20 ಕಮಾಂಡೋಗಳನ್ನು ಒದಗಿಸಲಾಗಿದ್ದು, ಇದಕ್ಕೆ ಆತ ಪ್ರತಿ ತಿಂಗಳು 15–16 ಲಕ್ಷ ರೂ. ತೆರಬೇಕು ಎಂದು ಸಮಜಾಯಿಷಿ ನೀಡಲು ಪ್ರಯತ್ನಿಸಿದೆ. 21.5 ಬಿಲಿಯ ಡಾಲರುಗಳ, ಜಗತ್ತಿನ 71 ಅತ್ಯಂತ 'ಬಲಿಷ್ಠ'ರ ಪಟ್ಟಿಯಲ್ಲಿ 39ನೇ ಸ್ಥಾನದಲ್ಲಿರುವ ಈ ವ್ಯಕ್ತಿಗೆ ಇದು ಪುಟಗೋಸಿ ಮೊತ್ತ. ಆದರೂ ಜಗತ್ತಿನ ಅತ್ಯುತ್ತಮ ಖಾಸಗಿ ಭದ್ರತೆ ಖರೀದಿಸುವ ಸಾಮರ್ಥ್ಯ ಇರುವ ಈತನಿಗೆ ಯುಪಿಎ–2 ಸರಕಾರದ ಭದ್ರತೆಯೇ ಏಕೆ ಬೇಕು ಎಂಬ ಪ್ರಶ್ನೆ ಉಳಿದೇ ಉಳಿಯುತ್ತದೆ.

ಅದೇನೇ ಇರಲಿ, ಆತ ಕೇಳಿದ ಎಂದ ಮಾತ್ರಕ್ಕೆ ಸರಕಾರ ಅದನ್ನು ಕೊಡಬೇಕೆಂದೇನೂ ಇಲ್ಲ ಎಂಬ ಮಾಜಿ ಬಿಎಸ್‌ಎಫ್ ಮಹಾನಿರ್ದೇಶಕರ ಟಿಪ್ಪಣಿ ಗಮನಾರ್ಹ. ಗುಜರಾತಿನ ಮುಖ್ಯಮಂತ್ರಿಗೆ ಅಂಬಾನಿ ಬಹಳ ನಿಕಟವರ್ತಿಯಾಗುತ್ತಿರುವುದರಿಂದಾಗಿ ಇಂಡಿಯನ್ ಮುಜಾಹಿದೀನ್ ಭಯೋತ್ಪಾದಕ ತಂಡ ಆತನಿಗೆ ಮತ್ತು ಆತನ ನಿವಾಸಕ್ಕೆ ಬೆದರಿಕೆ ಒಡ್ಡಿರುವುದರಿಂದಾಗಿ ಈ ಝಡ್ ಮಟ್ಟದ ಭದ್ರತೆ ಕೇಳಿದ್ದರು ಎಂದು ವರದಿಯಾಗಿದೆ. ಆದ್ದರಿಂದಲೇ ಬಹುಶಃ, ಸುಪ್ರಿಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದರೂ ಬಿಜೆಪಿ ಇಷ್ಟು ದೊಡ್ಡ 'ಆಯುಧ' ಸಿಕ್ಕರೂ ತೆಪ್ಪಗಿದೆ.

ಮಹಾ ಕಾರ್ಮಿಕ.....

ಪುಟ 15 ಕ್ಕೆ

ಗ್ವಾಂಗ್‌ಡಾಂಗ್‌ನಲ್ಲಿದ್ದ ಕೋಮಿಂಟಾಂಗ್ ಸರ್ಕಾರವನ್ನು ಕಿತ್ತೊಗೆಯಲು ಯುದ್ಧ–ಕೋರ ಪಾಳೆಯಗಾರರು ಆ ಪ್ರದೇಶವನ್ನು ಸುತ್ತುವರೆಯಲು ಸಾಮ್ರಾಜ್ಯಶಾಹಿಗಳು ಒತ್ತಡ ಹಾಕಿದರು. 1911 ರ ಕ್ರಾಂತಿಯ ಸಮಯದಲ್ಲಿ ಈ ಯುದ್ಧಕೋರರಿಗೆ ಮಣಿದು ಅವರಿಗೆ ದೇಶವನ್ನು ಒಪ್ಪಿಸಬೇಕಾಗಿ ಬಂದಿದ್ದ ಕೋಮಿಂಟಾಂಗ್ ಪಕ್ಷ ಕಮ್ಯುನಿಸ್ಟ್ ಪಕ್ಷದ ಜೊತೆಗೆ ಮೈತ್ರಿ ಹಾಗೂ ಕಾರ್ಮಿಕ ಚಳುವಳಿಯ ಬಲ, ಸೋವಿಯೆತ್ ಒಕ್ಕೂಟದ ನೆರವಿನ ಮಿಲಿಟರಿ ತರಬೇತಿ ಪಡೆದ ಸೇನಾ ನಾಯಕರು ಈಗ ಈ ಯುದ್ಧಕೋರರನ್ನು ಕೊಂಬು ಹಿಡಿದು ಎದುರಿಸಲು ಮನಸ್ಸು ಮಾಡಿತು. ಇದು ಕೂಡ ಕಾರ್ಮಿಕ ಚಳುವಳಿಯ ಹಾಗೂ ಕಮ್ಯುನಿಸ್ಟ್ ಪಕ್ಷದ ಜೊತೆಯ ಮೈತ್ರಿಯ ಒಂದು ಅತಿ ಪ್ರಮುಖ ಸಾಧನೆ.

ವಿದೇಶಗಳಲ್ಲಿ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆ

ಚೀನಾದ ಕಾರ್ಮಿಕ ಚಳುವಳಿ ಹಾಗೂ ಮಹಾ ಮುಷ್ಕರಗಳು ಕೇವಲ ಚೀನಾದ ಮೇಲೆ ಅಲ್ಲದೆ ನೆರೆಯ ದೇಶಗಳಲ್ಲಿ ಕೂಡ ದೊಡ್ಡ ಪರಿಣಾಮ ಬೀರಿತು. ವಿಯೆತ್ನಾಂನ ಹೊ–ಚಿ–ಮಿನ್ ರವರು ಫ್ರಾನ್‌ನಲ್ಲಿಯೇ ಮಾರ್ಕ್ಸ್‌ವಾದದ ಸೆಳೆತಕ್ಕೆ ಒಳಗಾಗಿದ್ದರು. ಅವರು ಮತ್ತು ವಿಯೆತ್ನಾಂನ ಫ್ರಾನ್ಸ್ ವಸಾಹತುಶಾಹಿ ತುಳಿತದ ವಿರುದ್ಧ ಪ್ರತಿಭಟಿಸಿ ದೇಶ ಬಿಟ್ಟು ಹೊರಬರಬೇಕಾದ ಕೆಲ ಪ್ರಗತಿಪರ ವ್ಯಕ್ತಿಗಳು ಕೂಡಿಕೊಂಡು ಮುಂದೆ ಕಮ್ಯುನಿಸ್ಟ್ ಪಕ್ಷದ ಬುನಾದಿಯಾದ ವಿಯೆತ್ನಾಂ ಕ್ರಾಂತಿಕಾರಿ ಯುವಸಂಘಟನೆಯನ್ನು 1925ರಲ್ಲಿ ಕ್ಯಾಂಟನ್ ನಗರದಲ್ಲಿ ಸ್ಥಾಪಿಸಿದರು. ಅದರ ಕಛೇರಿಯನ್ನು ಅಲ್ಲಿಯೇ ತೆರೆದರು. ಆ ಯುವಕರಿಗೆ ದೇಶ ವಿಮೋಚನೆಯ ಕ್ರಾಂತಿಕಾರೀ ಚಳುವಳಿಯನ್ನು ಕಟ್ಟಲು ಅಲ್ಲಿಯೇ ತರಬೇತಿ ನೀಡಲಾಯಿತು. ಸುಮಾರು ಮೂರು ತಿಂಗಳು– ನಾಲ್ಕು ತಿಂಗಳ ಕಾಲ ಮಾರ್ಕ್ಸ್‌ವಾದದ ಬಗ್ಗೆ, ಕಾರ್ಮಿಕ ಚಳುವಳಿಯ ಬಗ್ಗೆ, ಹಾಗೂ ಮಿಲಿಟರಿ ವಿಷಯಗಳ ಬಗ್ಗೆ ಇಲ್ಲಿ ತರಬೇತಿ ನೀಡಲಾಯಿತು. ಈ ಕಾರ್ಯಕರ್ತರ ಪಡೆ–ಯೇ ಮುಂದೆ ಕಮ್ಯುನಿಸ್ಟ್ ಪಕ್ಷದ ಮೂಲಾಧಾರವಾದರು.

ಕಮ್ಯುನಿಸ್ಟ್ ಪಕ್ಷ ಹಾಗೂ ಕೋಮಿಂಟಾಂಗ್ ಮೈತ್ರಿ ಚೀನೀ ಮೂಲದ ಜನತೆ ಹೆಚ್ಚಿದ್ದ ಮಲಯ–ಸಿಂಗಾಪುರಗಳಲ್ಲಿ ಕೂಡ ಉತ್ಸಾಹ ಮೂಡಿಸಿತು. ಅಲ್ಲಿ ಕೋಮಿಂಟಾಂಗ್ ಪಕ್ಷದ ಘಟಕಗಳು ಆರಂಭವಾಯಿತು. ಅದರ ಜೊತೆಯಲ್ಲಿಯೇ ಕಾರ್ಮಿಕರು ಮತ್ತಿತರ ದುಡಿಯುವ ಜನರ ನಡುವೆ ಎಡ ಚಿಂತನೆಯ ಪ್ರಭಾವ ಕೂಡ ಬೆಳೆಯಿತು. 1928ರ ವೇಳೆಗೆ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಗೆ ಕಾರ್ಮಿಕ ಚಳುವಳಿ ಸ್ಫೂರ್ತಿಯಾಯಿತು.

ಒಟ್ಟಿನಲ್ಲಿ ಮೇ 30 ರ ಚಳುವಳಿ ಹಾಗೂ ಕ್ಯಾಂಟನ್ ಹಾಂಗ್‌ಕಾಂಗ್ ಮಹಾಮುಷ್ಕರ ಚೀನಾದ ಕ್ರಾಂತಿಕಾರೀ ಚಳುವಳಿಗೆ ಒಂದು ಮಹಾನೆಗೆತವನ್ನು ನೀಡಿತು. ಚೀನಾದ ಕ್ರಾಂತಿ ರೈತ ಕ್ರಾಂತಿ ಅದು ಮಾರ್ಕ್ಸ್‌ವಾದದ ದಾರಿಯಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ನಡೆದ ಕ್ರಾಂತಿಯಲ್ಲ ಎಂದು ಬಾಯಿಗೆ ಬಂದಂತೆ ಮಾತಾಡುವವರಿಗೆ ಈ ವಿಷಯಗಳು ಕಣ್ತೆರೆಸಲಿ.

JANASHAKTHI KANNADA VARA PATRIKE MAY 19, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Satu
Licensed to Post without prepayment License No. WPP-28



ಜಿ.ಎನ್. ನಾಗರಾಜ್ 33

ಮಹಾ ಕಾರ್ಮಿಕ ಮುಷ್ಕರದ ಪ್ರಭಾವ :

ಚೀನಾ ಮತ್ತು ಪೂರ್ವ ಏಷಿಯಾದಲ್ಲಿ ಕಮ್ಯುನಿಸ್ಟ್ ಚಳುವಳಿಯ ವಿಸ್ತಾರ

16 ತಿಂಗಳ ಕಾಲದ 2 1/2 ಲಕ್ಷ ಕಾರ್ಮಿಕರ ಮುಷ್ಕರ ಒಂದು ಜಾಗತಿಕ ದಾಖಲೆ. ಅದೇ ಪ್ರಮಾಣದಲ್ಲಿ ಈ ಮುಷ್ಕರ ಮಹಾ ಪರಿಣಾಮಗಳನ್ನು ಉಂಟುಮಾಡಿದ್ದು ನಿರೀಕ್ಷಿತವೇ ! ಬ್ರಿಟಿಷ್ ವ್ಯಾಪಾರದ ಹಾಗೂ ಹಣಕಾಸಿನ ಕೇಂದ್ರವಾಗಿದ್ದ ಪೂರ್ವ ಏಷಿಯಾದ ಕಡಲ ಮುತ್ತು ಹಾಂಗ್ ಕಾಂಗ್ ನಲ್ಲಿದ್ದ ಜನ ಅರ್ಧಕ್ಕರ್ಧ ಖಾಲಿಯಾಗಿ ವ್ಯಾಪಾರ ಸರಿ ಸುಮಾರು ಪೂರ್ಣ ಬಂದ್ ಆಗಿತ್ತು. ಅಲ್ಲಿಗೆ ಬಂದು ಹೋಗುತ್ತಿದ್ದ ಹಡುಗುಗಳ ಸಂ-ಖ್ಯೆಯೂ ಅರ್ಧಕ್ಕೆ ಕುಸಿಯಿತು. ಇಡೀ ದ್ವೀಪ ಬಿಕೊ ಎನ್ನುತ್ತಿತ್ತು. ಅಲ್ಲಿದ್ದ ಬ್ರಿಟಿಷರ ಮನೆಯಲ್ಲಿ ಕಸ ಗುಡಿಸುವವರಿಗೂ ಗತಿ ಇಲ್ಲದೆ ಅವರಿಗೆಲ್ಲಾ ಫಜೀತಿಯಾಗಿತ್ತು. ಅಲ್ಲಿಯ ಬ್ಯಾಂಕ್‌ಗಳಲ್ಲಿ ಹಾಂಕಾಂಗ್ ನಿಂದ ಹೊರಬಿದ್ದ ಚೀನೀ ಕಾರ್ಮಿಕರು ಧಿಡೀರನೆ ಹಿಂತೆಗೆದ ಹಣದಿಂದಾಗಿ ಅಲ್ಲಿಯ ಅನೇಕ ಬ್ಯಾಂಕ್‌ಗಳು ಮುಚ್ಚಿಹೋಗುವ ಅಪಾಯಕ್ಕೊಳಗಾದುವು. ಕೊನೆಗೆ ಬ್ರಿಟಿಷ್ ಸರ್ಕಾರ ವಿಶೇಷ ಹಣ ಸಹಾಯ ಮಾಡಬೇಕಾಯಿತು. ಆದರೂ ಬ್ರಿಟಿಷ್ ಸರ್ಕಾರದ ಅಪಾರ ಸೈನಿಕ, ನಾವಿಕ ಶಕ್ತಿ ಕಾರ್ಮಿಕರ ಧೃಡ ನಿರ್ಧಾರದ ಮುಂದೆ ಏನೂ ಮಾಡಲಾಗದೆ ಕೈ ಕೈ ಹಿಸುಕಿಕೊಳ್ಳುವಂತಾಯಿತು. ಇಡೀ ವಿಶ್ವವನ್ನೇ ತನ್ನ ಕಾಲ ಕೆಳಗೆ ಎಂದು ಭಾವಿಸುತ್ತಿದ್ದ ಬ್ರಿಟಿಷ್ ಸರ್ಕಾರಕ್ಕೆ ಇದು ನುಂಗಲಾರದ ತುತ್ತಾಯಿತು.

ಆದ್ದರಿಂದ ಬ್ರಿಟನ್ನಿನ ಸರ್ಕಾರದಲ್ಲಿ ವಿವಿಧ ಗುಂಪು, ವಿವಿಧ ನೀತಿಗಳ ನಡುವೆ ಸಂಘರ್ಷಗಳಾದವು. ಇಲ್ಲಿಯವರೆಗೂ ಚೀನೀ ಜನರ ಜೊತೆಗೆ ಚೀನಿ ವ್ಯಾಪಾರಗಾರರು ಬಂಡವಾಳಗಾರರನ್ನೂ ತಮ್ಮ ಊಳಿಗದವರಂತೆ ನೋಡಿದ್ದ ಅವರು ತಮ್ಮ ಮನೋಭಾವವನ್ನು ಬದಲಾಯಿಸಿ ಅವರನ್ನು ಓಲೈಸುವುದಕ್ಕೆ ಆರಂಭಿಸಿದರು. ದೂರದಿಂದ ಪ್ರೇಕ್ಷಕನಂತೆ ನೋಡುತ್ತಿದ್ದ, ಚೀನಾದಲ್ಲಿ ಹೆಚ್ಚು ಹೆಚ್ಚು ಪ್ರವೇಶ ಮಾಡುತ್ತಿದ್ದ ಅಮೇರಿಕವೂ ತನ್ನ ನೀತಿಯನ್ನು ಮಾರ್ಪಡಿಸಿಕೊಂಡು ಚೀನೀ ಜನತೆಯ ಒಗ್ಗಟ್ಟನ್ನು ಒಡೆಯುವ ಕೆಲಸಕ್ಕೆ ಕೈ ಹಾಕಿತು. ಕಾರ್ಮಿಕರು, ಇತರ ಚೀನೀ ಜನತೆಯನ್ನು ಹಿಂದಿನಂತೆ ತುಳಿಯಲಾಗದು ಎಂಬುದು ಸಾಬೀತಾಯಿತು. ಹಾಂಗ್ ಕಾಂಗ್ ಆಡಳಿತ ಮಂಡಳಿಗೆ ಮೊದಲ ಬಾರಿಗೆ ಚೀನೀಯರನ್ನು ನೇಮಕ ಮಾಡಿಕೊಳ್ಳಲಾಯಿತು. ಕಾರ್ಮಿಕ ಮಂಡಳಿಯನ್ನೂ ಸ್ಥಾಪಿಸಿದರು.

ಮೇ 30 ರ ಹತ್ಯಾಕಾಂಡ ಹಾಗೂ ಈ ಮಹಾಮುಷ್ಕರ ಕಾರ್ಮಿಕ ಚಳುವಳಿಯ ಒಂದು ಅಬ್ಬರವನ್ನೇ ಚೀನಾ ನೋಡುವಂತಾಯಿತು. 1925 ರಲ್ಲಿ 300ಕ್ಕೂ ಹೆಚ್ಚು ಮುಷ್ಕರಗಳು ನಡೆದರೆ 1926 ರಲ್ಲಿ 500ಕ್ಕೂ ಹೆಚ್ಚು ಮುಷ್ಕರಗಳು. ಎಲ್ಲೆಲ್ಲೂ ಕಾರ್ಮಿಕ ಸಂಘಗಳನ್ನು ಆರಂಭಿಸಲು ನೂಕು ನುಗ್ಗಲಾಯಿತು. ಅಖಿಲ ಚೀನಾ ಕಾರ್ಮಿಕ ಸಂಘಗಳ ಒಕ್ಕೂಟದ ಸದಸ್ಯತ್ವ ದಿಢೀರನೆ ಹಲವು ಪಟ್ಟು ಏರಿತು. 1926 ರಲ್ಲಿ ನಡೆದ ಕಾರ್ಮಿಕ ಮಹಾಧಿವೇಶನದ



ವೇಳೆಗೆ ಸದಸ್ಯತ್ವ 5,40,000 (ಮೇ 1925 ರ ಮೂರನೇ ಮಹಾಧಿವೇಶನ)ರಿಂದ ಮೇ 1926 ರ ನಾಲ್ಕನೇ ಮಹಾಧಿವೇಶನದ ವೇಳೆಗೆ 12,40,000 ಕ್ಕೆ ಏರಿತು. 1927 ಕ್ಕೆ ಈ ಸದಸ್ಯತ್ವ ಶರವೇಗದಲ್ಲಿ 28,00,000 ಕ್ಕೆ ಕೇವಲ ಎರಡು ವರ್ಷದಲ್ಲಿ 5 ಪಟ್ಟಿಗಿಂತಲೂ ಹೆಚ್ಚಾಯಿತು.

ಆಗ ನಡೆದ ಮುಷ್ಕರಗಳಲ್ಲಿ ಯಾವ ಮುಷ್ಕರವೂ ಕೇವಲ ಆರ್ಥಿಕ ಬೇಡಿಕೆಗಳಿಗಾಗಿ ನಡೆಯಲಿಲ್ಲ. ಅನೇಕ ಮುಷ್ಕರಗಳು ಕೇವಲ ರಾಜಕೀಯ ಸ್ವಾತಂತ್ರ್ಯದ ವಿಸ್ತರಣೆಗಾಗಿ ಮಾತ್ರವೇ ಹಲವು ಹೋರಾಟಗಳು ನಡೆದವು. ಹೀಗಾಗಿ ಯಾವ ತಕ್ಷಣದ ಸಾಧನೆಯೂ ಇಲ್ಲದೆ ಅನೇಕ ಮುಷ್ಕರಗಳು ಕೊನೆಗೊಂಡವು. ಆದರೆ ಪ್ರತಿ ನಗರ, ಪಟ್ಟಣಗಳಲ್ಲಿ ಹಲವಾರು ಸಣ್ಣ ದೊಡ್ಡ ಸಭೆಗಳು, ಪ್ರತಿಭಟನೆಗಳು, ಮುಷ್ಕರಗಳು. ಇದರಲ್ಲಿ ಭಾಗವಹಿಸುವ, ಬೆಂಬಲಿಸುವ ಸಾವಿರಾರು ವಿದ್ಯಾರ್ಥಿಗಳು, ವ್ಯಾಪಾರಿಗಳು ಹೀಗೆ ಇಡೀ ಚೀನದ ವಾತಾವರಣವೇ ಬದಲಾಯಿತು.

ಹಿಂದೆ ವಿವರಿಸಿದಂತೆ ಕ್ಯಾಂಟನ್–ಹಾಂಗ್ ಕಾಂಗ್ ಮಹಾ ಮುಷ್ಕರದ ಸಮಯದಲ್ಲಿ 16 ತಿಂಗಳ ಕಾಲ " ಎರಡನೇ ಸರ್ಕಾರ " ಎಂದು ಕರೆಯಲ್ಪಟ್ಟ ಒಂದು ಕಾರ್ಮಿಕರ ಮುಷ್ಕರ ಸಮಿತಿ ನೇತೃತ್ವದ ಸರ್ಕಾರವೇ ಏರ್ಪಟ್ಟಿತು. ಈ ಸಮಯದಲ್ಲಿ ಮುಷ್ಕರ ನಿರತ ಕಾರ್ಮಿಕರಿಗೆ ಆಹಾರ, ವಸತಿ, ಆರೋಗ್ಯ ವ್ಯವಸ್ಥೆಯ ಜೊತೆಗೆ ಮಕ್ಕಳಿಗೆ ಶಿಕ್ಷಣ ನೀಡುವ 8 ಪ್ರಾಥಮಿಕ ಶಾಲೆಗಳು, ಕಾರ್ಮಿಕರಿಗೆ ಪ್ರಾಥಮಿಕ ವಯಸ್ಕ ಶಿಕ್ಷಣ ನೀಡುವ ಶಾಲೆಗಳು, ಒಂದು ಕಾರ್ಮಿಕ ಕಾಲೇಜು ಪೋಲೀಸು ವ್ಯವಸ್ಥೆ ಎಲ್ಲವನ್ನೂ ಕಾರ್ಮಿಕರೇ ನಿರ್ವಹಿಸಿದ ಪರಿಣಾಮ ಅವರು ಪಡೆದ ಅನುಭವ ಅಪೂರ್ವ. ಅವರಲ್ಲಿ ಹತ್ತಾರು ಸಾವಿರ ಜನರಿಗೆ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ಪಡೆಯಲು ಪ್ರೇರೇಪಣೆ ನಡೆಯಿತು. ಈ ಹೋರಾಟದ ನಾಯಕರಾದ ಕಾಂ. ಸು ಝಾವೋ ಝೆಂಗ್, ಲಿನ್ ವೈಮಿನ್, ಯಾಂಗ್ ಪಾವೋ ಅನ್ ಇವರು ಅಂತರ ರಾಷ್ಟ್ರೀಯ ಕಾರ್ಮಿಕ ನಾಯಕರಾದರು. ಪೂರ್ವ ಏಷಿಯಾದ ಹಾಗೂ ಪೆಸಿಫಿಕ್ ತೀರ ದೇಶಗಳ ಕಾರ್ಮಿಕ ಚಳುವಳಿಗೆ ಸ್ಫೂರ್ತಿ ತುಂಬಿದರು. ವಿಶ್ವ ಕೆಂಪು ಕಾರ್ಮಿಕ ಒಕ್ಕೂಟದ ಪದಾಧಿಕಾರಿಯಾದರು.

ಕಾರ್ಮಿಕ ಚಳುವಳಿ ನಾಗಾಲೋಟದಿಂದ ಬೆಳೆದಂತೆ ಕಮ್ಯುನಿಸ್ಟ್ ಪಕ್ಷವೂ ಬೆಳೆಯಿತು. 1925ರ ಜನವರಿಯ ವೇಳೆಗೆ 995 ಸದಸ್ಯರಿದ್ದ ಪಕ್ಷ ನವೆಂಬರ್ ವೇಳೆಗೆ 10,000 ದಾಟಿತು. 1926 ರ ವೇಳೆಗೆ 30,000, 1927ರ ಕೊನೆ ವೇಳೆಗೆ 70,000 ಸದಸ್ಯತ್ವವನ್ನು ದಾಟಿತು.

ಈ ವಾತಾವರಣ, ಕೋಮಿಂಟಾಂಗ್ ಪಕ್ಷದ ನೇತೃತ್ವದಲ್ಲಿ ಕಮ್ಯುನಿಸ್ಟರು ಆರಂಭ ಮಾಡಿದ್ದ ರೈತ ಚಳುವಳಿ, ರೈತ ತರಬೇತಿ ಸಂಸ್ಥೆಗಳ ಮೂಲಕ ಮೂಡುತ್ತಿದ್ದ ರೈತಾಪಿ ಜನತೆಯ ಎಚ್ಚರವೂ ಒಮ್ಮೆಲೆ ಚಿಮ್ಮಿ ಬಂದಿತು. ಗ್ವಾಂಗ್ ಡಾಂಗ್ ಪ್ರಾಂತ್ಯದ ಜೊತೆಗೆ ಹತ್ತು ಹಲವು ಪ್ರಾಂತ್ಯಗಳಲ್ಲಿ ರೈತ ಸಂಘಗಳು ಬೆಳೆದವು. ಇದನ್ನು ವಿವರವಾಗಿ ಮತ್ತೆ ಅರಿತುಕೊಳ್ಳೋಣ.

ಯುದ್ಧಕೋರರು ಹಾಗೂ ಸಾಮ್ರಾಜ್ಯಶಾಹಿ ಧಾಳಿಯ ಯೋಜನೆ

ಕಾರ್ಮಿಕ ಚಳುವಳಿಯ ಉರುಬನ್ನು ನೋಡಿ ಬೆಚ್ಚಿ ಬಿದ್ದ[illegible] ಒಂದು ಕಡೆ ಚೀನಾವನ್ನು ಸುಲಿ[illegible] ತಿನ್ನುತ್ತಿದ್ದ ಜಪಾನ್, ಬ್ರಿಟನ್, ಅಮೆ[illegible] ಮೊದಲಾದ ಆರು ದೇಶಗಳ ಸಾಮ್ರಾಜ್ಯಶಾ[illegible] ದೇಶಗಳು. 16 ತಿಂಗಳ ಮಹಾ ಮುಷ್ಕರ[illegible] ಪರಿಣಾಮವಾಗಿ ತಮ್ಮ ನೀತಿಯ[illegible] ಬದಲಾಯಿಸಿಕೊಳ್ಳಬೇಕಾಗಿ ಬಂದ[illegible] ಅವರು ಒಂದು ಪ್ರಾಂತ್ಯದಲ್ಲಿ ಪ್ರಬಲವಾಗಿ[illegible] ಕೋಮಿಂಟಾಂಗ್ ಸರ್ಕಾರವ[illegible] ಉರುಳಿಸುವ, ಹಾಗೇಯೆ ಕಮ್ಯುನಿ[illegible] ಪಕ್ಷವನ್ನು, ಕಾರ್ಮಿಕ ಚಳುವಳಿಯ[illegible] ಮೂಲೋತ್ಪಾಟನೆ ಮಾಡಲು ತಮ್ಮ [illegible] ಶಕ್ತಿಯನ್ನು ವಿನಿಯೋಗಿಸಿದರು. ಅದ[illegible] ಈ ಚಳುವಳಿಯಿಂದ ತಮ್ಮ ಅಧಿಕಾರ[illegible] ಬರುವ ವಿಪತ್ತಿನಿಂದ ಗಾಬರಿಯಾಗಿ[illegible] ಚೀನೀ ಯುದ್ಧಕೋರ ಪಾಳೆಯಗಾರರ[illegible] ಬಳಸಿಕೊಂಡರು. ತಮ್ಮ ತಮ್ಮ[illegible] ನಿರಂತರವಾಗಿ ಕಾದಾಡುತ್ತಿದ್ದ ಅವರನ್ನ[illegible] ಶ್ರಮ ವಹಿಸಿ ಒಂದುಗೂಡಿಸಿ 'ಕೆಂ[illegible] ಹೆದರಿಕೆ'ಯ ವಿರುದ್ಧ ಯುದ್ಧ ಘೋಷಿಸ[illegible] ವಿವಿಧ ಸಾಮ್ರಾಜ್ಯಶಾಹಿ ದೇಶಗ[illegible] ವಿವಿಧ ಗುಂಪುಗಳಿಗೆ ಹಣ ಶಸ್ತ್ರ[illegible] ಸಾಕು ಸಾಕೆನ್ನುವಷ್ಟು ಒದಗಿಸಿದರು[illegible] ಈ ಯುದ್ಧಕೋರರು ಬೇರೆ ಬೇ[illegible] ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ಚಳುವಳಿ[illegible] ಮೇಲೆ ಧಾಳಿ ಮಾಡಿದರು. ಕ್ಯಾಂಟನ್[illegible] ಹಾಂಗ್ ಕಾಂಗ್ ಮುಷ್ಕರ ಗಟ್ಟಿಯಾ[illegible] ನಡೆಯುತ್ತಿದ್ದಾಗಲೇ ಅದಕ್ಕೆ ಬೆಂಬಲವಾಗಿ[illegible]

ಪುಟ 15



ವೆನೆಜುವೆಲಾದ ಕ್ಯಾರಕಾಸ್‌ನಲ್ಲಿ ಮೇ ದಿನದ ಸಂಭ್ರಮ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**